2020–21 ನೇ ಸಾಲಿನ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಒದಗಿಸಿರುವ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಅನುದಾನದಕ್ಕೆ ಸಂಬಂದಿಸಿದ ಕ್ರಿಯಾಯೋಜನೆ ವಿವರ

(ಅನುದಾನ ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾರ್ಯಕ್ರಮದ ಹೆಸರು/ ಲೆಕ್ಕಶೀರ್ಷಿಕೆ	ನಿಗದಿ ಪಡಿಸಿದ ಅನುದಾನ	ವಿವರ ಉಪ ಲೆಕ್ಕ ಶೀರ್ಷಿಕೆ	ಜಿಲ್ಲಾ/ ತಾಲ್ಲೂಕು ಮಟ್ಟ	ಆರ್ಥಿಕ	ಭೌತಿಕ	ಕಾರ್ಯಕ್ರಮದ ವಿವರ
1	**2**	**3**	**4**	**5**	**6**	**7**	**8**
1	2403–00–101–0–26 ಕಾರ್ಯಕಾರಿ ಸಿಬ್ಬಂದಿ ವೇತನ	**111.37**	005– ವೇತನ	ಜಿಲ್ಲಾ ಮಟ್ಟ	111.37	**23**	ಉಪನಿರ್ದೇಶಕರ ಕಛೇರಿ ಹಾಗೂ ಪಾಲಿಕ್ಲಿನಿಕ್ ದೇವನಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವೇತನ ಭರಿಸಲಾಗುವುದು.
2	2403–00–101–0–26 ವೇತನೇತರ	**29.59**	090– ವೇತನೇತರ ವೆಚ್ಚಗಳು	ಜಿಲ್ಲಾ ಮಟ್ಟ	29.59		1.ಕಛೇರಿಯ ಮಾಸಿಕ ಬಾಡಿಗೆ (ನೀರು ಮತ್ತು ವಿಧ್ಯುತ್‌ವೆಚ್ಚ ಸೇರಿದಂತೆ) ಪಾವತಿ ಮೊತ್ತ ಪ್ರತಿ ಮಾಹೆಗೆ ರೂ.22,530/– ರಂತೆ 12 ತಿಂಗಳಿಗೆ ಒಟ್ಟು ರೂ. 270360/–

ಕ್ರ ಸಂ	ಕಾರ್ಯಕ್ರಮದ ಹೆಸರು/ ಲೆಕ್ಕಶೀರ್ಷಿಕೆ	ನಿಗದಿ ಪಡಿಸಿದ ಅನುದಾನ	ವಿವರ ಉಪ ಲೆಕ್ಕ ಶೀರ್ಷಿಕೆ	ಜಿಲ್ಲಾ/ ತಾಲ್ಲೂಕು ಮಟ್ಟ	ಆರ್ಥಿಕ	ಭೌತಿಕ	ಕಾರ್ಯಕ್ರಮದ ವಿವರ
1	2	3	4	5	6	7	8
							2. ದೂರವಾಣಿ ವೆಚ್ಚ ಪಾವತಿ ಮೊತ್ತ – ಪ್ರತಿ ಮಾಹೆಗೆ ಅಂದಾಜು ರೂ.5500/– ರಂತೆ ವರ್ಷಕ್ಕೆ ಒಟ್ಟು ಮೊತ್ತ ರೂ.66000/–.
							3.ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರ ನಿರ್ವಾಹಕರ ಮಾರ್ಚ್–2020ರ ಮಾಹೆಯಿಂದ ಫೆಬ್ರವರಿ–2021 ರ ಮಾಹೆ ವರೆಗೆ ಪ್ರತಿ ಮಾಹೆಗೆ ರೂ.21000 ರಂತೆ ವರ್ಷಕ್ಕೆ ಒಟ್ಟು ರೂ.252000/–.
							4.ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರ ಮಾರ್ಚ್–2020ರ ಮಾಹೆಯಿಂದ ಫೆಬ್ರವರಿ–2021 ರ ಮಾಹೆ ವರೆಗೆ ಪ್ರತಿ ಮಾಹೆಗೆ ರೂ.25000/– ರಂತೆ ವರ್ಷಕ್ಕೆ ಒಟ್ಟು ರೂ.300000/–.
							5.ಉಪನಿರ್ದೇಶಕರು/ಮುಖ್ಯ ಪಶು ವೈದ್ಯಾಧಿಕಾರಿ ರವರ ಪ್ರವಾಸ ಭತ್ಯೆ ವೆಚ್ಚಗಳಿಗಾಗಿ ಅಂದಾಜು ರೂ.100000/–
							6. ಉಪನಿರ್ದೇಶಕರ ಕಛೇರಿಯ ದೈನಂದಿನ ಕೆಲಸಗಳಿಗೆ ಅವಶ್ಯವಿರುವ ಲೇಖನ ಸಾಮಗ್ರಿ, ಟೋನರ್ ಖರೀದಿಗಾಗಿ ಪ್ರತಿ ಮಾಹೆಗೆ ಅಂದಾಜು ರೂ.8000/– ರಂತೆ ವರ್ಷಕ್ಕೆ ಒಟ್ಟು ರೂ.96000/–.
							7. ಕಂಪ್ಯೂಟರ್ ಮತ್ತು ಲ್ಯಾಪ್ ಟಾಪ್ ಖರೀದಿಗಾಗಿ ಅಂದಾಜು ರೂ. 200000/–
							8. ಪಶುವೈದ್ಯ ಸಂಸ್ಥೆಗಳಿಗೆ ಅವಶ್ಯವಿರುವ ಪಿಠೋಪಕರಣ ಖರೀದಿಗಾಗಿ ಅಂದಾಜು ರೂ.500000/–
							9.ಪಶುವೈದ್ಯಾಧಿಕಾರಿಗಳಿಗೆ ಇಲಾಖೆಯಿಂದ ನೀಡಿರು ಮೊಬೈಲ್/ಟ್ಯಾಬ್ ಗಳ ಸಿಮ್ ಗಳಿಗೆ 6ತಿಂಗಳಿಗೊಮ್ಮೆ ನೆಟ್ ಪ್ಯಾಕ್/ರಿಚಾರ್ಜ್‌ಗೆ ಅನುದಾನ ಅವಶ್ಯಕತೆಗೆ ಅನುಗುಣವಾಗಿ ರೂ.64000/–
							10.ಉಪ ನಿರ್ದೇಶಕರ ಕಛೇರಿಯ ವಾಹನಕ್ಕೆ ಪ್ರತಿ ಮಾಹೆಯ ಇಂಧನಕ್ಕೆ ಹಾಗೂ ಅತೀ ಅವಶ್ಯವಿದಾಗ ನಿರ್ವಹಣೆ/ದುರಸ್ಥಿಗಾಗಿ ಅಂದಾಜು ರೂ.3,00,000/–
							11.ಔಷಧಿ ಮತ್ತು ಮಿನಿಕಿಟ್ ಗಳನ್ನು ಜಿಲ್ಲಾ ಕೇಂದ್ರದಿಂದ ತಾಲ್ಲೂಕು

ಕ್ರ ಸಂ	ಕಾರ್ಯಕ್ರಮದ ಹೆಸರು/ ಲೆಕ್ಕಶೀರ್ಷಿಕೆ	ನಿಗದಿ ಪಡಿಸಿದ ಅನುದಾನ	ವಿವರ ಉಪ ಲೆಕ್ಕ ಶೀರ್ಷಿಕೆ	ಜಿಲ್ಲಾ/ ತಾಲ್ಲೂಕು ಮಟ್ಟ	ಆರ್ಥಿಕ	ಭೌತಿಕ	ಕಾರ್ಯಕ್ರಮದ ವಿವರ
1	**2**	**3**	**4**	**5**	**6**	**7**	**8**
							ಕೇಂದ್ರಗಳಿಗೆ ತಲುಪಿಸಿವ ವೆಚ್ಚ ರೂ.2,00,000/–
							12. ಇತರೆ ವೆಚ್ಚಗಳು ರೂ.6,10,640/–
		140.96		ಒಟ್ಟು	**140.96**		
3	2403–00–101–0–27 ಔಷಧಿಗಳು, ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು	**78.97**	222 – ಔಷಧಿ, ರಾಸಾಯನಿಕಗಳ ಖರೀದಿ		78.97	**103**	1 ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 103 ಪಶುವೈದ್ಯಕಿಯ ಸಂಸ್ಥೆಗಳಿಗೆ ತುರ್ತು ಸಂದರ್ಭಗಳಲ್ಲಿ, ಕೃತಕ ಗರ್ಭಧಾರಣೆ ಬೇಕಾಗುವ ವೀರ್ಯ ನಳಿಕೆಗಳನ್ನು(Semen straws), ಕೃತಕ ಗರ್ಭಧಾರಣೆ ಶಿಥ್ಸ್ ಮತ್ತು ಗ್ಲೌಸ್ ಖರೀದಿಸಲಾಗುವುದು 2 ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 103 ಪಶುವೈದ್ಯಕಿಯ ಸಂಸ್ಥೆಗಳಿಗೆ ಪ್ರತಿ ತಿಂಗಳು ದ್ರವಸಾರಜನಕ ಖರೀದಿಸಿ, ಬಾಡಿಗೆ ಆಧಾರದ ಮೇಲೆ ವಾಹನ ಪಡೆದು ಸರಬರಾಜು ಮಾಡಲು ವೆಚ್ಚ ಭರಿಸಲಾಗುವುದು. 3.ಪ್ರತಿ ತಾಲ್ಲೂಕಿಗೆ ತುರ್ತು ಸಂದರ್ಭದಲ್ಲಿ ಬೇಕಾಗುವ ಅವಶ್ಯಕ ಲಸಿಕೆಗಳು ಮತ್ತು ಸಿರೇಂಜ್ ಗಳನ್ನು ಖರಿದಿಸಲು ವೆಚ್ಚ ಭರಿಸಲಾಗುವುದು. 4. ಉಳಿದ ಅನುದಾನದಲ್ಲಿ ತಾಲ್ಲೂಕಿನ ಬೇಡಿಕೆಗೆ ಅನುಸಾರ ಜೀವ ರಕ್ಷಕ ಔಷದಿ (Antibiotic), Anti-Inflammatory,Analgesics,Fluids Deworming ಹಾಗೂ Feed Supliments ಇತ್ಯಾದಿಗಳನ್ನು ಖರೀದಿಸಲು ವೆಚ್ಚ ಭರಿಸಲಾಗುವುದು.
4	2403–00–101–0–30 ವಿಸ್ತರಣಾ ಘಟಕ ಬಲಪಡಿಸುವಿಕೆ	**19.12**	090, ವಿಸ್ತರಣಾ ಘಟಕಗಳ ಬಲಪಡಿಸುವಿಕೆ		**19.12**		1.ಪ್ರತಿ ತಾಲ್ಲೂಕಿಗೆ ರೂ.30000/– ಘಟಕ ವೆಚ್ಚದಲ್ಲಿ 2 ಮಿಶ್ರತಳಿ ಕರುಗಳ/ ಜಾನುವಾರು ಪ್ರದರ್ಶನಕ್ಕೆ ಒಟ್ಟು ರೂ.240000/ವಿನಿಯೋಗಿಸಲಾಗುವುದು.
							3.ಜಿಲ್ಲೆಗೆ ಒಂದು ರಾಸುಗಳ ಹಾಲು ಕರೆಯುವ ಸ್ಪರ್ದೆ ಏರ್ಪಡಿಸಲು ರೂ.50000/– ವಿನಿಯೋಗಿಸಲಾಗುವುದು.
							3.ಜಿಲ್ಲಾ ವ್ಯಾಪ್ತಿಯಲ್ಲಿ ಕನಿಷ್ಠ ಎರಡು ತಾಂತ್ರಿಕ ಕಾರ್ಯಗಾರಗಳನ್ನು ಏರ್ಪಡಿಸಲು ವಿನಿಯೋಗಿಸಲಾಗುವುದು.
							4.ರಾಜ್ಯ ಮಟ್ಟದ ಪಶುಮೇಳ/ಕೃಷಿಮೇಳದಲ್ಲಿ ಭಾಗವಹಿಸುವ ಪ್ರಗತಿ ಪರ ರೈತರ ಪ್ರವಾಸ ವೆಚ್ಚ ರೈತರ ಜಾನುವಾರುಗಳ ಸಾಗಾಣಿಕೆ ವೆಚ್ಚಗಳನ್ನು ಭರಿಸಲು ವಿನಿಯೋಗಿಸಲಾಗುವುದು.

ಕ್ರ ಸಂ	ಕಾರ್ಯಕ್ರಮದ ಹೆಸರು/ ಲೆಕ್ಕಶೀರ್ಷಿಕೆ	ನಿಗದಿ ಪಡಿಸಿದ ಅನುದಾನ	ವಿವರ ಉಪ ಲೆಕ್ಕ ಶೀರ್ಷಿಕೆ	ಜಿಲ್ಲಾ/ ತಾಲ್ಲೂಕು ಮಟ್ಟ	ಆರ್ಥಿಕ	ಭೌತಿಕ	ಕಾರ್ಯಕ್ರಮದ ವಿವರ
1	2	3	4	5	6	7	8
							5.ರಾಜ್ಯ ಮಟ್ಟದ ಪಶುಮೇಳ/ಕೃಷಿಮೇಳ ಮತ್ತು ಜಿಲ್ಲೆಯಲ್ಲಿ ನಡೆಯುವ ಜಾನುವಾರು ಜಾತ್ರೆಯಲ್ಲಿ ಇಲಾಖಾ ಕಾರ್ಯಕ್ರಮ ಕುರಿತು ಪ್ರದರ್ಶನ ಏರ್ಪಡಿಸಲು ವಿನಿಯೋಗಿಸಲಾಗುವುದು.
							6. ಹಿತ್ತಲ ಕೋಳಿ ಸಾಕಾಣಿಕೆ ಬಲಪಡಿಸಲು 5–6ವಾರದ 10ಕೋಳಿ ಮರಿಗಳ ಘಟಕ (ಗಿರಿರಾಜ ಕೋಳಿ/ ದೇಶೀಕೋಳಿ/ ಅಸೀಲ್ ಕೋಳಿ)ಸ್ಥಾಪನೆಗೆ ಖರ್ಚು ಭರಿಸಲಾಗುವುದು. ಪ್ರತಿ ಜಿಲ್ಲಾ ಪಂಚಾಯತ್ ಕ್ಷೇತ್ರಗಳಿಗೆ 20 ಘಟಕಗಳನ್ನು ಉಚಿತವಾಗಿ ನೀಡಲಾಗುವುದು. ಪ್ರತಿ ಘಟಕ ವೆಚ್ಚ ರೂ.1100/–
							7. ಇಲಾಖಾ ಚಟುವಟಿಕೆಗಳ ಬಗ್ಗೆ ಪ್ರಚಾರ ಸಮಾಗ್ರಿ ಮುದ್ರಿಸಲು/ ಖರೀದಿಸಲು ವಿನಿಯೋಗಿಸಲಾಗುವುದು.
	ಜಿಲ್ಲೆಯ ನಿವ್ವಳ ಮೊತ್ತ	**239.05**			**239.05**		

ಜಾನುವಾರು ಆರೋಗ್ಯ:

2020–21 ನೇ ಸಾಲಿನಲ್ಲಿ ಆರೋಗ್ಯ ಸಂರಕ್ಷಣಾ ಕಾರ್ಯಕ್ರಮದಡಿ ವಿವಿಧ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮದ ಪ್ರಗತಿ ವಿವರ

ಕ್ರಂ ಸಂಖ್ಯೆ	ಖಾಯಿಲೆಯ ಹೆಸರು	ದಿ:01.04.2020 ರಿಂದ ದಿ: 31.03.2021ರ ಅವಧಿಯಲ್ಲಿ ಲಸಿಕೆ ಹಾಕಿರುವ ಜಾನುವಾರುಗಳ ಒಟ್ಟು ಸಂಖ್ಯೆ
1	ಕಾಲುಬಾಯಿ ಜ್ವರ	157902
2	ನೆರಡಿ ರೋಗ	5772
3	ಕುರಿಗಳಿಗೆ ಕರುಳುಬೇನೆ	231490
4	ಕುರಿಗಳಿಗೆ ಪಿ.ಪಿ.ಆರ್	143516
5	ಕೊಕ್ಕರೆ ರೋಗ	150284
6	ನೀಲಿ ನಾಲಿಗೆ ರೋಗ	1500
	ಒಟ್ಟು	**690464**

2020–21 ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳಡಿ ಸಾಧಿಸಿದ ಪ್ರಗತಿ

ಕ್ರ. ಸಂ	ಕಾರ್ಯಕ್ರಮಗಳು	ವಾರ್ಷಿಕ ಗುರಿ	31.03.2021 ರ ಅಂತ್ಯದ ವರೆಗೆ		
			ಗುರಿ	ಸಾಧನೆ	ಶೇಕಡ
1	2	3	4	5	6
1	ಕೃತಕ ಗರ್ಭಧಾರಣೆ	107800	107800	100832	94%
2	ಗರ್ಭ ತಪಾಸಣೆ ನಡೆಸಿದ ಪ್ರಾಣಿಗಳ ಸಂಖ್ಯೆ	86240	86240	85972	99%
3	ಕಾಲುಬಾಯಿ ರೋಗಕ್ಕೆ ಲಸಿಕೆ ಹಾಕಲಾದ	375448	157946	157902	99%

ಕ್ರ. ಸಂ	ಕಾರ್ಯಕ್ರಮಗಳು	ವಾರ್ಷಿಕ ಗುರಿ	31.03.2021 ರ ಅಂತ್ಯದ ವರೆಗೆ		
			ಗುರಿ	ಸಾಧನೆ	ಶೇಕಡ
4	ಕೊಕ್ಕರೆ ರೋಗಕ್ಕೆ ಲಸಿಕೆ ಹಾಕಲಾದ ಕೋಳಿಗಳ	120200	120200	150284	100%
5	ಅರೆ ಪಶುವೈದ್ಯಕೀಯ ಸಿಬ್ಬಂದಿಯವರಿಗೆ	35	35	38	100%
6	ರೈತರಿಗೆ ವಿತರಣೆ ಮಾಡಿದ ನಾಟಿ ಕೋಳಿ	3320	3320	3320	100%
7	ಮೇವು ಅಭಿವೃದ್ಧಿ				
	ಎ. ಮೇವು ಅಭಿವೃದ್ಧಿಗೆ ಒಳಪಡಿಸುವ	1600	1600	2752	100%
	ಬಿ. ಮೇವಿನ ಕಿರು ಪೊಟ್ಟಣಗಳ ವಿತರಣೆ.	12000	12000	16076	100%
8	ವಿಸ್ತರಣಾ ಕಾರ್ಯಕ್ರಮಗಳು				
	ಎ. ಕಿಸಾನ್ ಸಂಪರ್ಕ ಸಭೆ	0	0	25	100%
	ಬಿ ಬರಡು ರಾಸು ಶಿಬಿರಗಳು	60	60	62	100%
	ಸಿ. ಗ್ರಾಮ ಸಭೆಗಳ ಸಂದರ್ಶನ	324	324	316	98%
9	ವಿಸ್ತರಣಾ ಕಾರ್ಯಕ್ರಮದಡಿಯಲ್ಲಿ ನಡೆಸಿದ ಹಸು/ಕರುಗಳ ಪ್ರದರ್ಶನ	8	8	8	100%
10	ತಾಂತ್ರಿಕ ಲೆಕ್ಕ ತಪಾಸಣೆ.	48	48	51	100%

2020–21 ನೇ ಸಾಲಿನ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಹಾಗೂ ರಾಜ್ಯ ವಲಯದಡಿ ನಿಗಧಿ/ಬಿಡುಗಡೆ ಹಾಗೂ ವೆಚ್ಚ ಮಾಡಿದ ಅನುದಾನದ ವಿವರ (ರೂ. ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ	ನಿಗಧಿಗೊಳಿಸಿರುವ ಅನುದಾನ	ಬಿಡುಗಡೆ	ವೆಚ್ಚ								
				ವೇತನ	ಹೊರ ಗುತ್ತಿಗೆ/ ದಿನ ಗೂಲಿ	ಕಾರ್ಯ ಕ್ರಮ (ಸಾ ಮಾನ್ಯ)	ಕಛೇರಿ ವೆಚ್ಚ (090)	ಪ. ಜಾತಿ (SC P)	ಪ. ಪಂಗಡ (TSP)	ಒಟ್ಟು ವೆಚ್ಚ	ಶೇಕಡ (12/ 4* 100)	ಷರಾ
1	2	3	4	5	6	7	8	9	10	11	12	
1	2403–00–101–0–26(005) ಕಾರ್ಯ ನಿರ್ವಾಹಕ ಸಿಬ್ಬಂದಿ	111.37	111.37	87.50	–	–	–	–	–	87.50	78.57	
2	2403–00–101–0–26 (090)ವೇತನೇತರ	29.59	29.59	–	–	–	29.59	–	–	29.59	100.00	
3	2403–00–101–0–27 ಔಷಧಿ ಮತ್ತು ದ್ರವಸಾರಜನಕ ಖರೀಧಿ	78.97	78.97	–	–	–	78.97	–	–	78.97	100.00	
4	2403–00–101–0–28 ಪಶುಸಂಗೋಪನಾ ಕಟ್ಟಡಗಳ ನಿರ್ವಹಣೆ	40.00	40.00	–	–	39.90	–	–	–	39.90	99.75	ರೂ.5.00 ಲಕ್ಷ KRIDL ರವರಿಗೆ ಪಾವತಿಸಿದೆ.
5	2403–00–101–0–30 ವಿಸ್ತರಣಾ ಘಟಕಗಳ ಬಲಪಡಿಸುವಿಕೆ	19.12	19.12	–	–	–	19.12	–	–	19.12	100.00	
6	2403–00–101–0–1(001) ಪ್ರಾ.ಪ.ಚಿ ಗಳನ್ನು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು.	1834.61	1662.16	1645.12	–	–	–	–	–	1645.12	98.97	

ಕ್ರ ಸಂ	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ	ನಿಗಧಿಗೊಳಿಸಿರುವ ಅನುದಾನ	ಬಿಡುಗಡೆ	ವೆಚ್ಚ								
				ವೇತನ	ಹೊರ ಗುತ್ತಿಗೆ/ ದಿನ ಗೂಲಿ	ಕಾರ್ಯ ಕ್ರಮ (ಸಾ ಮಾನ್ಯ)	ಕಛೇರಿ ವೆಚ್ಚ (090)	ಪ. ಜಾತಿ (SCP)	ಪ. ಪಂಗಡ (TSP)	ಒಟ್ಟು ವೆಚ್ಚ	ಶೇಕಡ (12/ 4* 100)	ಷರಾ
1	2	3	4	5	6	7	8	9	10	11	12	
7	2403–00–101–0–61(090) ಕಛೆರಿ ವೆಚ್ಚ	81.81	81.81	–	–	–	81.81	–	–	81.81	100.00	
8	2403–00–101–0–63 ಜೀವವೈದ್ಯ ತ್ಯಾಜ್ಯ ವಸ್ತುಗಳ ವಿಲೇವಾರಿ	3.00	3.00	–	–	3.00	–	–	–	3.00	100.00	
9	2403–00–101–0–64 ಫಲೀಕರಣ ಶಿಬಿರಗಳು	15.00	15.00	–	–	15.00	–	–	–	15.00	100.00	
	ಒಟ್ಟು	**2213.47**	**2041.02**	**1732.62**	–	**57.90**	**209.49**	–	–	**2000.01**	**97.99**	

2020–21ನೇ ಸಾಲಿನಲ್ಲಿ ವಿವಿಧ ಸಾಮಾಜಿಕ ಆರ್ಥಿಕ ಯೋಜನೆಯಡಿ ಹಮ್ಮಿಕೊಂಡ ಕಾರ್ಯಕ್ರಮಗಳು (ರೂ.ಗಳಲ್ಲಿ)

ಕ್ರ ಸಂ.	ಕಾರ್ಯಕ್ರಮ	ಗುರಿ		ಬಿಡುಗಡೆ	ಸಾಧನೆ		ಷರಾ
		ಆರ್ಥಿಕ	ಭೌತಿಕ		ಆರ್ಥಿಕ	ಭೌತಿಕ	
1.	ಎನ್.ಎಲ್.ಎಂ.ಕಾರ್ಯಕ್ರಮಗಳು – ಇತರೆ (059) ಕುರಿ, ಮೇಕೆ ಮತ್ತು ಹಂದಿ ಘಟಕಗಳ ಸ್ಥಾಪನೆಗೆ ಆರ್ಥಿಕ ನೆರವು	7,83,000	20	7,83,000	7,83,000	20	
2.	ಎನ್.ಎಲ್.ಎಂ. ಕಾರ್ಯಕ್ರಮಗಳು ಜಾನುವಾರು ವಿಮೆ	3,50,000	592	3,50,000	3,50,000	592	









ಪಶು ಆರೋಗ್ಯ ತಪಾಸಣಾ –ಬರಡು ರಾಸುಗಳ ಚಿಕಿತ್ಸಾ ಶಿಬಿರಗಳು



ಮಿಶ್ರ ತಳಿಕರುಗಳ ಪ್ರದರ್ಶನ



ಮಿಶ್ರ ತಳಿ ರಾಸುಗಳಲ್ಲಿ ಅಧಿಕ ಹಾಲು ಕರೆಯುವ ಸ್ಪರ್ಧೆ ಆಯೋಜನೆ

₹25 ಸಾವಿರ ಗೆದ್ದ ದೇವನಹಳ್ಳಿ ಹಸು

ಹಾಲು ಕರೆಯುವ ಸ್ಪರ್ಧೆ ವಿಜೇತರಿಗೆ ಬಹುಮಾನ | ಹೊಸಕೋಟೆಗೆ 3ನೇ ಸ್ಥಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು ಗ್ರಾಮಾಂತರ

ಪಶುಪಾಲನಾ ಇಲಾಖೆ ವತಿಯಿಂದ ದೇವನಹಳ್ಳಿ ತಾಲೂಕು ಯಲಿಯೂರಿನಲ್ಲಿ ಶನಿವಾರ ಜಿಲ್ಲಾಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ದೇವನಹಳ್ಳಿಯ ರಾಸುಗಳು ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿದರೆ ಹೊಸಕೋಟೆ ತಾಲೂಕಿನ ರಾಸು ಮೂರನೇ ಬಹುಮಾನ ಪಡೆದುಕೊಂಡಿತು.

ದೇವನಹಳ್ಳಿ ತಾಲೂಕು ಹಾರೋಹಳ್ಳಿಯ ನಾರಾಯಣಪ್ಪ ಅವರ ಹಸು 37.110 ಕಿಲೋ ಹಾಲು ನೀಡಿ 25 ಸಾವಿರ ರೂ.ನಗದು ಹಾಗೂ ಪಾರಿತೋಷಕ ಪಡೆಯಿತು. ಇದೇ ತಾಲೂಕಿನ ಮಾಳಿಗೇನಹಳ್ಳಿಯ ಟಿ.ಲೋಕೇಶ್ ಅವರ ಹಸು 35.010 ಕಿಲೋ ಹಾಲು ಕರೆದು ದ್ವಿತೀಯ ಸ್ಥಾನಗಳಿಸಿ 20 ಸಾವಿರ ರೂ. ಮತ್ತು ಪಾರಿತೋಷಕ ಪಡೆದುಕೊಂಡರೆ, ಹೊಸಕೋಟೆ ತಾಲೂಕು ಇಟ್ಟಸಂದ್ರದ ರಾಮಚಂದ್ರಪ್ಪ ಅವರ ಹಸು 34.130 ಕಿಲೋ ಹಾಲು ಕರೆಯುವ ಮೂಲಕ ತೃತೀಯ ಬಹುಮಾನ 10 ಸಾವಿರ ಮತ್ತು ಪಾರಿತೋಷಕ ಪಡೆದುಕೊಂಡಿತು.

ವೈಜ್ಞಾನಿಕ ಪದ್ಧತಿಯಿಂದ ಅಧಿಕ ಲಾಭ: ರೈತರು ಹೈನುಗಾರಿಕೆಯಲ್ಲಿ ವೈಜ್ಞಾನಿಕ ಪದ್ಧತಿ ಅಳವಡಿಸಿಕೊಂಡು ಅಧಿಕ ಲಾಭ ಪಡೆಯುವ ಮೂಲಕ ಸ್ವಾವಲಂಬಿ ಬದುಕು ನಡೆಸಬೇಕು ಎಂದು ಜಿಪಂ ಸದಸ್ಯೆ ಅನಂತಕುಮಾರಿ ಚಿನ್ನಪ್ಪ ಹೇಳಿದರು.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ರೈತರು ಸಾಕಷ್ಟು ಆರ್ಥಿಕ ನಷ್ಟ ಅನುಭವಿಸಿದ್ದಾರೆ. ಇದರ ನಡುವೆ ಹೈನುಗಾರಿಕೆ ಕೈಹಿಡಿದಿರುವುದು ಸಂತಸದ ವಿಷಯವಾಗಿದೆ ಎಂದರು. ಬಮೂಲ್ ನಿರ್ದೇಶಕ ಇರಿಗೇನಹಳ್ಳಿ ಶ್ರೀನಿವಾಸ್ ಮಾತನಾಡಿ, ಹೈನುಗಾರಿಕೆ ದೊಡ್ಡ ಉದ್ಯಮವಾಗಿ ಬೆಳೆದಿದೆ, ಇದರಲ್ಲಿ ಸಾಕಷ್ಟು ಅವಕಾಶಗಳಿದ್ದು ವ್ಯವಸ್ಥಿತ ಹೈನುಗಾರಿಕೆಯಲ್ಲಿ ಉತ್ತಮ ಭವಿಷ್ಯವಿದೆ ಎಂದರು.

ಹೆಚ್ಚು ಲಾಭಾಂಶ ಸಾಧ್ಯ: ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಡಾ.ಜಿ.ಎಂ.ನಾಗರಾಜು ಮಾತನಾಡಿ, ಇಲಾಖೆಯ ಅವಿಷ್ಕಾರಗಳಲ್ಲೊಂದಾದ ಲಿಂಗ ನಿರ್ಧರಿತ ವೀರ್ಯ ನಳಿಕೆಗಳನ್ನು ಹೆಚ್ಚಾಗಿ ಬಳಸುವ ಮೂಲಕ ಶೇ.95 ಹೆಣ್ಣು ಕರು ಪಡೆಯಲು ಸಾಧ್ಯವಿದೆ, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಅಧಿಕ ಮೇವು ಇಳುವರಿ ನೀಡುವ ಸುಧಾರಿತ ಸುಬಾಬುಲ್ ನಾರಿ ನಿರ್ಬೀಜ ತಳಿಯನ್ನು ಅಳವಡಿಸಿಕೊಂಡು ಹೈನುಗಾರಿಕೆಯಲ್ಲಿ ಉತ್ಪಾದನಾ ವೆಚ್ಚ ಕಡಿಮೆಗೊಳಿಸಿ, ಹೆಚ್ಚಿನ ಲಾಭಾಂಶ ಪಡೆಯಬಹುದು ಎಂದು ಮಾಹಿತಿ ನೀಡಿದರು.



ಯಲಿಯೂರಿನಲ್ಲಿ ಶನಿವಾರ ಜಿಲ್ಲಾಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತ ರಾಸುಗಳ ಮಾಲೀಕರಿಗೆ ಬಹುಮಾನ ವಿತರಿಸಲಾಯಿತು. ಉಪ ನಿರ್ದೇಶಕರ ಕಚೇರಿ ಮುಖ್ಯ ಪಶುವೈದ್ಯಾಧಿಕಾರಿ ಡಾ.ಅನಿಲ್ ಕುಮಾರ್, ಮುಖ್ಯ ಪಶುವೈದ್ಯಾಧಿಕಾರಿ ಡಾ.ವಿಶ್ವನಾಥ್, ಡಾ.ಅಂಜಿನಪ್ಪ, ಡಾ.ಎಂ.ಕೆ.ಮಂಜುನಾಥ್, ಡಾ. ಸಿದ್ದಪ್ಪ, ಡಾ.ಮೋಹನ್ ಕುಮಾರ್ ಮತ್ತಿತರರಿದ್ದರು.

ರಾಸು ಮಾಲೀಕರಿಗೂ ಬಹುಮಾನ

ಭಾಗವಹಿಸಿದ ಎಲ್ಲ ರಾಸುಗಳ ಮಾಲೀಕರಿಗೆ ಯಲಿಯೂರು ಗ್ರಾಪಂ ಅಧ್ಯಕ್ಷ ಸೊಣ್ಣೇಗೌಡ ತಲಾ 1 ಸಾವಿರ ರೂ.ನಗದು ಹಾಗೂ ಪಶುಪಾಲನಾ ಇಲಾಖೆಯಿಂದ ಸಮಾಧಾನಕರ ಬಹುಮಾನ ನೀಡಲಾಯಿತು.

ಮಿಶ್ರತಳಿ ಕರು ಪ್ರದರ್ಶನ

ಆಧುನಿಕ ಪಶುಪಾಲನಾ ಪದ್ಧತಿ ಅಳವಡಿಸಿಕೊಂಡು ಕರುಗಳನ್ನು ಸಾಕಲು ರೈತರನ್ನು ಪ್ರೋತ್ಸಾಹಿಸಲು ಮಿಶ್ರತಳಿ ಕರುಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಪ್ರದರ್ಶನದಲ್ಲಿ ಭಾಗವಹಿಸಿದ 47 ಕರುಗಳ ಪೈಕಿ ಉತ್ತಮವಾಗಿ ಪೋಷಿಸಲಾದ 3 ತಿಂಗಳ ಕರುಗಳು, 6 ಹಾಗೂ 1 ವರ್ಷದವರೆಗಿನ ಕರುಗಳಿಗೆ ಪ್ರತ್ಯೇಕವಾಗಿ ಬಹುಮಾನ ಮತ್ತು ಖನಿಜ ಮಿಶ್ರಣ ಪೊಟ್ಟಣಗಳನ್ನು ವಿತರಿಸಲಾಯಿತು. ಸ್ಪರ್ಧೆಯಲ್ಲಿ ಜಿಲ್ಲೆಯ 4 ತಾಲೂಕುಗಳಿಂದ 17 ಹಸುಗಳು ಭಾಗವಹಿಸಿದ್ದು, ಎರಡು ಹೊತ್ತಿನ ಹಾಲಿನ ಇಳುವರಿಯ ಒಟ್ಟು ತೂಕದ ಮಾನದಂಡ ಪರಿಗಣಿಸಿ ಬಹುಮಾನ ಘೋಷಿಸಲಾಯಿತು.

ಪ್ರಜಾವಾಣಿ

ಗ್ರಾಮೀಣರ ಕೈ ಹಿಡಿದ ಹೈನುಗಾರಿಕೆ

ಹಾಲು ಕರೆಯುವ ಸ್ಪರ್ಧೆ: ಹಾರೋಹಳ್ಳಿ ನಾರಾಯಣಪ್ಪ ಪ್ರಥಮ

ಪ್ರಜಾವಾಣಿ ವಾರ್ತೆ

ವಿಜಯಪುರ: ಚನ್ನರಾಯಪಟ್ಟಣ ಹೋಬಳಿ ಯಲಿಯೂರು ಗ್ರಾಮದಲ್ಲಿ ಶುಕ್ರವಾರ ಜಿಲ್ಲಾ ಪಂಚಾಯಿತಿ, ಜಿಲ್ಲಾ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಸಹಯೋಗದಲ್ಲಿ ಜಿಲ್ಲಾಮಟ್ಟದ ಹಸುಗಳ ಅಧಿಕ ಹಾಲು ಕರೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ಹಾರೋಹಳ್ಳಿಯ ನಾರಾಯಣಪ್ಪ, 37 ಕೆ.ಜಿ 110 ಗ್ರಾಂ ಹಾಲು ಕರೆದು ಪ್ರಥಮ ಬಹುಮಾನ ₹25 ಸಾವಿರ ಪಡೆದರೆ ಮಾಳಿಗೇನಹಳ್ಳಿ ರೈತ ಟಿ.ಲೋಕೇಶ್, 35 ಕೆ.ಜಿ 10 ಗ್ರಾಂ ಹಾಲು ಕರೆದು ದ್ವಿತೀಯ ಬಹುಮಾನ ₹20 ಸಾವಿರ ಪಡೆದಿದರು. ಇಟ್ಟಸಂದ್ರದ ರೈತ ರಾಮಚಂದ್ರಪ್ಪ, 34 ಕೆ.ಜಿ 130 ಗ್ರಾಂ ಹಾಲು ಕರೆದು ತೃತೀಯ ಸ್ಥಾನ ₹10 ಸಾವಿರ ನಗದು ಪಡೆದರು.

ಕಿವಿಯೊಲೆ ಅಳವಡಿಸಿದ ಹಸುಗಳನ್ನು ಮಾತ್ರ ನೋಂದಣಿ ಮಾಡಲಾಗಿತ್ತು. ಕಾಲುಬಾಯಿ ರೋಗಕ್ಕೆ ಲಸಿಕೆ ಹಾಕಿಸಿದ ದೃಢೀಕರಣ ಪತ್ರ ಕಡ್ಡಾಯಗೊಳಿಸಲಾಗಿತ್ತು. ದಿನಕ್ಕೆ ಕನಿಷ್ಠ 20ಲೀ ಹಾಲು ಕರೆಯುವ ಹಸುಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಹಾಲು ಕರೆಯಲು 20 ನಿಮಿಷ ಕಾಲಾವಕಾಶ ಇತ್ತು.



ಚನ್ನರಾಯಪಟ್ಟಣ ಹೋಬಳಿ ಯಲಿಯೂರಿನಲ್ಲಿ ಆಯೋಜಿಸಿದ್ದ ಹಾಲು ಕರೆಯುವ ಸ್ಪರ್ಧೆಗೆ ಜಿಲ್ಲಾ ಪಂಚಾಯಿತಿ ಸದಸ್ಯೆ ಪಿ.ಆನಂತಕುಮಾರಿ ಚಿನ್ನಪ್ಪ ರಾಸುಗಳಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು

ಗ್ರಾಮೀಣ ಭಾಗದಲ್ಲಿ ರೈತರ ಕೈ ಹಿಡಿದಿರುವ ಹೈನುಗಾರಿಕೆ ಮತ್ತಷ್ಟು ಉತ್ತೇಜನಪಡಿಸಿ ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಬೇಕಾಗಿದೆ. ಸರ್ಕಾರಕ್ಕೆ ಇದಕ್ಕೆ ಅವಶ್ಯವಿರುವ ಎಲ್ಲ ರೀತಿಯ ಪ್ರೋತ್ಸಾಹ ನೀಡಲಿದೆ ಎಂದು ಜಿಲ್ಲಾ ಪಂಚಾಯಿತಿ ಸದಸ್ಯೆ ಪಿ.ಅನಂತ ಕುಮಾರಿ ಚಿನ್ನಪ್ಪ ತಿಳಿಸಿದರು.

ಬಮೂಲ್ ನಿರ್ದೇಶಕ ಇರಿಗೇನಹಳ್ಳಿ ಶ್ರೀನಿವಾಸ್ ಮಾತನಾಡಿ, ರೈತರು ಹಿಪ್ಪುನೇರಳೆ ಸೊಪ್ಪು ರಾಸುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀಡುವುದರಿಂದ ಗುಣಮಟ್ಟ ಕಡಿಮೆಯಾಗುತ್ತದೆ. ಆದ್ದರಿಂದ ಪೌಷ್ಟಿಕಾಂಶ ಭರಿತವಾದ ಆಹಾರ ನೀಡುವ ಮೂಲಕ ಅವುಗಳ ಆರೋಗ್ಯ ಸುಧಾರಣೆ ಮಾಡಬೇಕು. ಹಾಲು ಉತ್ಪಾದಕರ ಏಳಿಗೆಗಾಗಿ ಮತ್ತು ರಾಸುಗಳ ಸುರಕ್ಷತೆಗಾಗಿ ಹಾಲು ಒಕ್ಕೂಟದ ವತಿಯಿಂದ ಸಾಕಷ್ಟು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಸೊಣ್ಣೇಗೌಡ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಜಿ.ಎಂ.ನಾಗರಾಜ್, ಡಾ.ನಾರಾಯಣಸ್ವಾಮಿ, ಡಾ.ಮಂಜುನಾಥ್, ಡಾ.ಸಿದ್ದಪ್ಪ, ಡಾ.ಆಂಜಿನಪ್ಪ, ಡೇರಿ ಅಧ್ಯಕ್ಷ ನಾಗರಾಜ್, ಇದ್ದರು.



ತಳಿ ಸಂವರ್ಧನೆಗಾಗಿ ಅವಳಿ–ತ್ರಿವಳಿ ಮರಿಗಳನ್ನು ನೀಡಬಲ್ಲ
ನಾರಿ ಸುವರ್ಣ ತಳಿಯ ಟಗರುಗಳನ್ನು ರಿಯಾಯಿತಿ ಧರದಲ್ಲಿ ರೈತರಿಗೆ ವಿತರಣೆ



ಗ್ರಾಮೀಣ ಜನರ ಆಹಾರ– ಆರ್ಥಿಕ ಭದ್ರತೆಗೆಗಾಗಿ – ಸಾಕಾಣಿಕೆ ಮಾಡಲು ರೈತರಿಗೆ
ನಾಟಿ ಕೋಳಿ ಮರಿಗಳ ಉಚಿತ ವಿತರಣೆ



ಪ್ರಾಣಿ ಜನ್ಯ ರೋಗಗಳ ನಿಯಂತ್ರಣ ಕುರಿತು
ಸಾರ್ವಜನಿಕರಿಗೆ – ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಜಾಗೃತಿ ಶಿಬಿರ ಏರ್ಪಡಿದ್ದು

4. ಸಮಾಜ ಕಲ್ಯಾಣ ಇಲಾಖೆ

ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಕಛೇರಿಯು ದೇವನಹಳ್ಳಿ ತಾಲ್ಲೂಕು ಬೀರಸಂದ್ರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಜಿಲ್ಲಾಡಳಿತ ಭವನದ ಎರಡನೇ ಮಹಡಿಯ ಕೊಠಡಿ ನಂ: 217ರಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಕಛೇರಿಯ ವ್ಯಾಪ್ತಿಗೆ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳು ಒಳಪಟ್ಟಿದ್ದು 2011 ನೇ ಸಾಲಿನ ಜನಗಣತಿ ಪ್ರಕಾರ 213700 ಪರಿಶಿಷ್ಟ ಜಾತಿಯವರ ಜನಸಂಖ್ಯೆ ಇರುತ್ತದೆ. ಸದರಿಯವರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುವಂತೆ ಸರ್ಕಾರವು ರೂಪಿಸಿರುವ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗುತ್ತಿದ್ದು, ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆಯಾಗುವ ಅನುದಾನದಿಂದ ಅನುಷ್ಠಾನಗೊಳಿಲಾಗುತ್ತಿರುತ್ತದೆ. ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳಿಗೆ ನೇರವಾಗಿ ಆರ್ಥಿಕ ಇಲಾಖೆಯಿಂದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಬಿಡುಗೆಯಾಗಲಿದ್ದು, ಸದರಿ ಅನುದಾನವನ್ನು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರ ಮುಖಾಂತರ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗುತ್ತದೆ.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಟಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳು:–

ಮೆಟ್ರಿಕ್ ಪೂರ್ವ / ನಂತರದ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಮತ್ತು ವಸತಿ ಶಾಲೆಗಳ ವಿವರಗಳು:

ಕ್ರ.ಸ.	ವಿ.ನಿಲಯದ ವಿವರ	ನಿಲಯಗಳ ಸಂಖ್ಯೆ	ಮಂಜೂರಾತಿ	ದಾಖಲಾತಿ	ಸ್ವಂತ	ಬಾಡಿಗೆ	ನಿರ್ಮಾಣ ಹಂತದ ಕಟ್ಟಡಗಳು	ನಿವೇಶನ ಬೇಕಾಗಿರುವುದು
1.	ಮೆಟ್ರಿಕ್ ಪೂರ್ವ(ಪ.ಜಾತಿ)	23	1815	1127	23	0	–	–
2.	ಮೆಟ್ರಿಕ್ ನಂತರ	9	897	607	8	1	–	–
3.	ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ/ಕಾಲೇಜು	11	2220	1994	8	3	3	–
4.	ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳು	2	–	–	2	–	–	–
	ಒಟ್ಟು	**45**	**4932**	**3728**	**41**	**4**	**3**	–

ಮೆಟ್ರಿಕ್ ನಂತರದ ವಿಧ್ಯಾರ್ಥಿಗಳಿಗೆ ವಿಧ್ಯಾರ್ಥಿ ವೇತನ :–

2020–21 ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ / ಅನುದಾನಿತ / ಅನುದಾನ ರಹಿತ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಈ ಕೆಳಕಂಡಂತೆ ಆನ್‌ಲೈನ್ ಮೂಲಕ ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	ವಾರ್ಷಿಕ ಗುರಿ		ಸಾಧನೆ	
	ಆರ್ಥಿಕ	ಬೌತಿಕ	ಆರ್ಥಿಕ	ಬೌತಿಕ
ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 2225–00–101–0–27	244.00	2456	244.00	2713
ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 2225–00–101–0–02	180.00	3285	0	0
ಒಟ್ಟು	424.00	5741	244.00	2713

ಮೆಟ್ರಿಕ್ ನಂತರದ ವಿಧ್ಯಾರ್ಥಿಗಳಿಗೆ ಮಂಜೂರು ಮಾಡುತ್ತಿರುವ ವಿಧ್ಯಾರ್ಥಿ ವೇತನ ದರಗಳು:–

COURSES	Hosteller (Per month)	Day Scholar (per month)
Group -1:- Medical, Technical, Veterinary	1200/-	550/-
Group -2 :- Other Vocational, Technical and Post Graduation	820/-	530/-
Group -3:- All Degree Courses	570/-	300/-
Group -4 :- All P. P.U.C	380/-	230/-

ಮೆಟ್ರಿಕ್ ಪೂರ್ವ ವಿಧ್ಯಾರ್ಥಿಗಳಿಗೆ ವಿಧ್ಯಾರ್ಥಿ ವೇತನ :–

2020–21 ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ /ಅನುದಾನಿತ/ಅನುದಾನ ರಹಿತ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಈ ಕೆಳಕಂಡಂತೆ ಆನ್‌ಲೈನ್ ಮೂಲಕ ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	ವಾರ್ಷಿಕ ಗುರಿ		ಸಾಧನೆ	
	ಆರ್ಥಿಕ	ಬೌತಿಕ	ಆರ್ಥಿಕ	ಬೌತಿಕ
ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 2225–00–101–0–68	258.50	14629	258.50	14629

ಮೆಟ್ರಿಕ್ ಪೂರ್ವ ವಿಧ್ಯಾರ್ಥಿಗಳಿಗೆ ಮಂಜೂರು ಮಾಡುತ್ತಿರುವ ವಿಧ್ಯಾರ್ಥಿ ವೇತನ ದರಗಳು:–

ತರಗತಿ	ಬಾಲಕ	ಬಾಲಕಿಯರಿಗೆ
1 ರಿಂದ 5 ನೇ ತರಗತಿ	1000/–	1100/–
6 ರಿಂದ 7 ನೇ ತರಗತಿ	1150/–	1250/–
8 ನೇ ತರಗತಿ	1250/–	1350/–
9 ರಿಂದ 10 ನೇ ತರಗತಿ	2250/–	

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ :–

ಕರ್ನಾಟಕ ರಾಜ್ಯ ಸರ್ಕಾರವು 2015–16ನೇ ಸಾಲಿನಿಂದ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಪ್ರೋತ್ಸಾಹಧನ ಮಂಜೂರು ಮಾಡಲು ಅವಕಾಶ ನೀಡಿದೆ.

ಕ್ರ. ಸಂ.	ಕೋರ್ಸ್	ಪ್ರೋತ್ಸಾಹ ಧನ
1	ದ್ವಿತೀಯ ಪಿಯು.ಸಿ	20,000/–
2	ಪದವಿ	25,000/–
3	ಸ್ನಾತಕೋತ್ತರ ಪದವಿ	30,000/–
4	ಇಂಜಿನಿಯರಿಂಗ್/ಮೆಡಿಕಲ್	35,000/–

ಅದರಂತೆ, 2020–21 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ ಅನುದಾನಿತ / ಅನುದಾನ ರಹಿತ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಪ್ರೋತ್ಸಾಹಧನವನ್ನು ಮಂಜೂರು ಮಾಡಲಾಗಿರುತ್ತದೆ.

ಕ್ರ. ಸಂ.	ವರ್ಷ	ವಿದ್ಯಾರ್ಥಿಗಳ ಸಂಖ್ಯೆ	ಮಂಜೂರು ಮಾಡಿದ ಪ್ರೋತ್ಸಾಹ ಧನ (ರೂ ಲಕ್ಷಗಳಲ್ಲಿ)
1	2020–21	821	194.00

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ(ಎಸ್.ಎಸ್.ಎಲ್.ಸಿ) :–

ಕರ್ನಾಟಕ ರಾಜ್ಯ ಸರ್ಕಾರವು 2020–21 ನೇ ಸಾಲಿನಿಂದ ಎಸ್.ಎಸ್.ಎಲ್.ಸಿ ಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಪ್ರೋತ್ಸಾಹಧನ ಮಂಜೂರು ಮಾಡಲು ಅವಕಾಶ ನೀಡಿದೆ.

ಕ್ರ.ಸಂ.	ಶೇಕಡಾ	ಮಂಜೂರು ಮಾಡಿದ ಪ್ರೋತ್ಸಾಹ ಧನ
1	**ಶೇ 60% ರಿಂದ 74.99%**	**7,000/–**
2	**75% ರ ಮೇಲ್ಪಟ್ಟು**	**15,000/–**

ಅದರಂತೆ, 2020–21ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ / ಅನುದಾನಿತ / ಅನುದಾನ ರಹಿತ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಪ್ರೋತ್ಸಾಹಧನವನ್ನು ಮಂಜೂರು ಮಾಡಲಾಗಿರುತ್ತದೆ.

ಕ್ರ. ಸಂ.	ವರ್ಷ	ವಿದ್ಯಾರ್ಥಿಗಳ ಸಂಖ್ಯೆ	ಮಂಜೂರು ಮಾಡಿದ ಪ್ರೋತ್ಸಾಹ ಧನ (ರೂ ಲಕ್ಷಗಳಲ್ಲಿ)
1	2020–21	1508	ರೂ.155.00

ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚ(ಇ.ಬಿ.ಎಲ್):

2020–21 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ 9 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿಧ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚಕ್ಕಾಗಿ ರೂ 69.09 ಲಕ್ಷಗಳು ಬಿಡುಗಡೆಯಾಗಿದ್ದು, ರೂ 65.27 ಲಕ್ಷಗಳನ್ನು 1092 ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚಕ್ಕಾಗಿ ಖರ್ಚು ಮಾಡಲಾಗಿರುತ್ತದೆ.

ಕಾನೂನು ಪದವೀಧರರಿಗೆ ಪ್ರೋತ್ಸಾಹ :–

ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಪ್ರತಿ ಮಾಹೆಗೆ ರೂ 10000/– ಗಳಂತೆ ಗರಿಷ್ಠ 2 ವರ್ಷಗಳವರೆಗೆ ಸಹಾಯಧನ ಮಂಜೂರು ಮಾಡಲು ಅವಕಾಶ ಕಲ್ಪಿಸಿದೆ.

ಅದರಂತೆ, 2020–21 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಸರ್ಕಾರವು ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಈ ಕೆಳಕಂಡಂತೆ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	**ಬಿಡುಗಡೆಯಾದ ಅನುದಾನ**	**ಖರ್ಚಾದ ಅನುದಾನ**	**ಫಲಾನುಭವಿಗಳ ಸಂಖ್ಯೆ**
ಕಾನೂನು ಪಧವೀದದರಿಗೆ ಶಿಷ್ಯವೇತನ (ತಾ.ಪಂ) 2225–00–101–0–80	20.00	19.95	88
ಒಟ್ಟು	20.00	19.95	88

ಅಂತರ್ಜಾತಿ ವಿವಾಹ:–

ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯ ಗಂಡು ಮೇಲ್ಜಾತಿಯ ಜಾತಿಯ ಹೆಣ್ಣನ್ನು ಮದುವಯಾದರೆ ರೂ 2.50 ಲಕ್ಷಗಳನ್ನು ಮತ್ತು ಪರಿಶಿಷ್ಟ ಜಾತಿಯ ಹೆಣ್ಣು ಮೇಲ್ಜಾತಿಯ ವರನನ್ನು ಮದುವೆಯಾದರೆ ರೂ 3.00 ಲಕ್ಷಗಳ ಸಹಾಯಧನವನ್ನು ಸಂಬಂಧಪಟ್ಟ ಫಲಾನುಭವಿಗಳ ಜಂಟಿ ಖಾತೆಗೆ ದಾಖಲಾತಿಗಳನ್ನು ಪಡೆದು ಇಲಾಖೆ ವತಿಯಿಂದ ಮಂಜೂರು ಮಾಡಲಾಗುತ್ತಿದೆ.

ಅದರಂತೆ, 2020–21 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಈ ಕೆಳಕಂಡಂತೆ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	**ಬಿಡುಗಡೆಯಾದ ಅನುದಾನ**	**ಖರ್ಚಾದ ಅನುದಾನ**	**ಫಲಾನುಭವಿಗಳ ಸಂಖ್ಯೆ**
ಅಂತರ್ಜಾತಿ ವಿವಾಹ(ರಾಜ್ಯ ವಲಯ) 2225–01–277–0–67	425.50	424.50	258

ಸರಳ ವಿವಾಹ:–

ರಾಜ್ಯ ಸರ್ಕಾರವು ಸಾಮೂಹಿಕವಾಗಿ ವಿವಾಹವಾಗುವ ಪರಿಶಿಷ್ಟ ಜಾತಿಯ ದಂಪತಿಗಳಿಗೆ ರೂ. 50000/– ಸಹಾಯಧನವನ್ನು ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದು ಇಲಾಖೆ ವತಿಯಿಂದ ಸಂಬಂಧಪಟ್ಟ ಫಲಾನುಭವಿಗಳ ಜಂಟಿ ಖಾತೆಗೆ ಮಂಜೂರು ಮಾಡಲಾಗುತ್ತಿದೆ. ಮತ್ತು ಸಾಮೂಹಿಕವಾಗಿ ವಿವಾಹ ಮಾಡಿಸುವ ಸಂಸ್ಥೆಗಳಿಗೆ ಪ್ರತಿ ಜೋಡಿಗೆ ರೂ.2000/– ರಂತೆ ನೀಡಲು ಅವಕಾಶವಿರುತ್ತದೆ.

ಅದರಂತೆ, 2020–21 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಸಾಮೂಹಿಕವಾಗಿ ವಿವಾಹವಾಗಿರುವ ದಂಪತಿಗಳಿಗೆ ಈ ಕೆಳಕಂಡಂತೆ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	**ಬಿಡುಗಡೆಯಾದ ಅನುದಾನ**	**ಖರ್ಚಾದ ಅನುದಾನ**	**ಫಲಾನುಭವಿಗಳ ಸಂಖ್ಯೆ**
ಸರಳ ವಿವಾಹ(ರಾಜ್ಯ ವಲಯ) 2225–01–796–0–02	22.50	5.00	10
ಉಳಿಕೆ 17.50 ಲಕ್ಷಗಳನ್ನು ಕೇಂದ್ರ ಕಛೇರಿಗೆ ಹಿಂದಿರುಗಿಸಲಾಗಿರುತ್ತದೆ.			

ಒಳಪಂಗಡ ಅಂತರ್ಜಾತಿ ವಿವಾಹ:–

ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯಲ್ಲಿನ ಸಮುದಾಯದ ಒಳಗೆ ವಿವಾಹವಾಗುವ ಪರಿಶಿಷ್ಟ ಜಾತಿಯ ದಂಪತಿಗಳಿಗೆ ರೂ.2,00,000/–ಗಳ ಸಹಾಯಧನವನ್ನು 2017–18ನೇ ಸಾಲಿನಿಂದ ಇಲಾಖೆ ವತಿಯಿಂದ ಮಂಜೂರು ಮಾಡುವ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ.

ಅದರಂತೆ, 2020–21 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯಲ್ಲಿನ ಸಮುದಾಯದ ಒಳಗೆ ವಿವಾಹವಾಗಿರುವ ದಂಪತಿಗಳಿಗೆ ಈ ಕೆಳಕಂಡಂತೆ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	**ಬಿಡುಗಡೆಯಾದ ಅನುದಾನ**	**ಖರ್ಚಾದ ಅನುದಾನ**	**ಫಲಾನುಭವಿಗಳ ಸಂಖ್ಯೆ**
ಒಳಪಂಗಡ ವಿವಾಹ(ರಾಜ್ಯ ವಲಯ) 2225–01–796–0–02	26.00	20.00	10

ವಿಧವಾ ವಿವಾಹ:–

ಸರ್ಕಾರವು ಪರಿಶಿಷ್ಟ ಜಾತಿಯ ಮಹಿಳೆಯು ವಿಧವೆಯಾಗಿದ್ದಲ್ಲಿ ಅಂತಹ ಮಹಿಳೆಯು ಮರು ವಿವಾಹವಾದಲ್ಲಿ ಅಂತಹ ಮಹಿಳೆಯು ಸ್ವಾವಲಂಬಿ ಜೀವನ ನಡೆಸುವ ಉದ್ದೇಶಕ್ಕಾಗಿ ರೂ 3.00 ಲಕ್ಷಗಳ ಸಹಾಯಧನವನ್ನು ಇಲಾಖೆ ವತಿಯಿಂದ ಮಂಜೂರು ಮಾಡಲಾಗುತ್ತಿದೆ.

ಅದರಂತೆ, 2020–21 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯಲ್ಲಿ ವಿಧವಾ ವಿವಾಹವಾದ ದಂಪತಿಗಳಿಗೆ ಈ ಕೆಳಕಂಡಂತೆ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕಾರ್ಯಕ್ರಮದ ಹೆಸರು / ಲೆಕ್ಕ ಶೀರ್ಷಿಕೆ	**ಬಿಡುಗಡೆಯಾದ ಅನುದಾನ**	**ಖರ್ಚಾದ ಅನುದಾನ**	**ಫಲಾನುಭವಿಗಳ ಸಂಖ್ಯೆ**
ವಿಧವಾ ವಿವಾಹ(ರಾಜ್ಯ ವಲಯ) 2225–01–796–0–02	6.00	6.00	2

ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರಿಗೆ ಸಹಾಯಧನ:–

ಕರ್ನಾಟಕ ರಾಜ್ಯ ಸರ್ಕಾರವು ಸವರ್ಣೀಯರಿಂದ ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ ಜನಾಂಗದವರಿಗೆ ಅಪರಾಧದ ಸ್ವರೂಪದ ಆಧಾರದ ಮೇಲೆ ಸಹಾಯಧನ ಮಂಜೂರು ಮಾಡಲು ಅವಕಾಶ ಕಲ್ಪಿಸಿ ಸಾಮಾಜಿಕ ನ್ಯಾಯ ಒದಗಿಸುವ ಕೆಲಸವನ್ನು ಮಾಡಲಾಗುತ್ತಿದೆ.

ಅದರಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2020–21 ನೇ ಸಾಲಿನಲ್ಲಿ ದೌರ್ಜನ್ಯದಿಂದ ನೊಂದ ಸಂತ್ರಸ್ಥರಿಗೆ ಈ ಕೆಳಕಂಡಂತೆ ಪರಿಹಾರ ಧನ ವಿತರಣೆ ಮಾಡಲಾಗಿರುತ್ತದೆ.

ಕಾರ್ಯಕ್ರಮ	**ಖರ್ಚಾದ ಅನುದಾನ (ರೂಲಕ್ಷಗಳಲ್ಲಿ)**	**ದೌರ್ಜನ್ಯಕ್ಕೊಳಗಾದ ಸಂತ್ರಸ್ಥರ ಸಂಖ್ಯೆ**
ದೌರ್ಜನ್ಯ ಸಂತ್ರಸ್ಥರಿಗೆ ಪರಿಹಾರ ಧನ (ರಾಜ್ಯ ವಲಯ)2225–01–796–0–01	165.57	139

ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ:–

ಸರ್ಕಾರವು 2020–21 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾಲೋನಿ ಅಭಿವೃದ್ಧಿ ಯೋಜನೆ/ಪ್ರಗತಿ ಕಾಲೋನಿ ಯೋಜನೆಯಡಿ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿರುತ್ತದೆ.

(ರೂ.ಲಕ್ಷಗಳಲ್ಲಿ)

ವಿಧಾನಸಭಾ ಕ್ಷೇತ್ರದ ಹೆಸರು	**ಮಂಜೂರಾತಿ ಮೊತ್ತ**	**ಬಿಡುಗಡೆ ಮಾಡಿದ ಮೊತ್ತ**	**ಈವರೆಗಿನ ವೆಚ್ಚ**	**ಕಾಮಗಾರಿಗಳ ಸಂಖ್ಯೆ**	**ಪೂರ್ಣ**	**ಪ್ರಗತಿ**
1	2	3	4	5	6	7
ದೇವನಹಳ್ಳಿ	0.00	0.00	0.00	0	0	0
ದೊಡ್ಡಬಳ್ಳಾಪುರ	0.00	0.00	0.00	0	0	0
ಹೊಸಕೋಟೆ	200.00	50.00	0.00	5	0	0
ನೆಲಮಂಗಲ	0.00	0.00	0.00	0	0	0
ಒಟ್ಟು	**200.00**	**50.00**	**0.00**	**5**	**-**	**-**

ಭವನಗಳು:–

ಪರಿಶಿಷ್ಟ ಜಾತಿ ಜನಾಂಗದವರ ಸಭೆ ಸಮಾರಂಭ, ಮದುವೆ ಸಾಂಸ್ಕೃತಿಕ ಇನ್ನಿತರೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ 2020–21 ನೇ ಸಾಲಿನಲ್ಲಿ ಬಿಡುಗಡೆಯಾದ ಕಾರ್ಯಕ್ರಮದ ವಿವರ:–

(ರೂ.ಲಕ್ಷಗಳಲ್ಲಿ)

ವಿಧಾನಸಭಾ ಕ್ಷೇತ್ರದ ಹೆಸರು	**ಮಂಜೂರಾತಿ ಮೊತ್ತ**	**ಬಿಡುಗಡೆ/ಬಾಕಿ ಅನುದಾನ ಬಿಡುಗಡೆ**	**ಈವರೆಗಿನ ವೆಚ್ಚ**	**ಮಂಜೂರಾದ ಭವನಗಳ ಸಂಖ್ಯೆ**	**ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ**	**ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ**
1	2	3	4	5	6	7
ದೇವನಹಳ್ಳಿ	0.00	0.00	0.00	0	0	0
ದೊಡ್ಡಬಳ್ಳಾಪುರ	75.00	22.50	0.00	1	0	0
ಹೊಸಕೋಟೆ	75.00	22.50	0.00	1	0	0
ನೆಲಮಂಗಲ	60.00	15.00	0.00	1	0	0
ಒಟ್ಟು	**210.00**	**60.00**	**0.00**	**3**	**0**	**0**

5. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕೆಲವು ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮುಖಾಂತರ ಅನುಷ್ಠಾನಗೊಳಿಸಲಾಗಿರುತ್ತದೆ. ಹಾಗೂ ಕೆಲವು ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್‌ಗಳ ಮೂಲಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ 2011ರ ಜನಗಣತಿಯ ಪ್ರಕಾರ 52,903 ಪರಿಶಿಷ್ಟ ವರ್ಗದವರ ಜನಸಂಖ್ಯೆ ಇದ್ದು, ಈ ಜನರ ಉನ್ನತಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಮುಖ್ಯವಾಗಿ ಶೈಕ್ಷಣಿಕ ಕಾರ್ಯಕ್ರಮಗಳು, ತರಬೇತಿ ಕಾರ್ಯಕ್ರಮಗಳು, ಆರ್ಥಿಕ ಉನ್ನತಿ ಮತ್ತು ಸಾಮಾಜಿಕ ಬದಲಾವಣೆ ಹಾಗೂ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1 ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿ ನಿಲಯದಲ್ಲಿ ಒಟ್ಟು 50 ವಿದ್ಯಾರ್ಥಿಗಳಿಗೆ ಅವಕಾಶವಿದ್ದು, ಆ ಪೈಕಿ **50** ವಿದ್ಯಾರ್ಥಿಗಳು ದಾಖಲಾಗಿ ಪ್ರಯೋಜನ ಪಡೆದಿರುತ್ತಾರೆ.

ಜಿಲ್ಲಾ ಪಂಚಾಯತ್ ಯೋಜನೆ ಕಾರ್ಯಕ್ರಮಗಳು (ಪರಿಶಿಷ್ಟ ವರ್ಗ)

1) ಕಾರ್ಯ ನಿರ್ವಾಹಕ ಸಿಬ್ಬಂದಿ:– (2225–00–102–0–46)

ಈ ಕಾರ್ಯಕ್ರಮದಡಿ ಜಿಲ್ಲಾ ಕಚೇರಿಯ ಸಿಬ್ಬಂದಿಯವರ ವೇತನ, ಹೊರಗುತ್ತಿಗೆ ನೌಕರರ ವೇತನ ಹಾಗೂ ಕಚೇರಿ ನಿರ್ವಹಣೆಗಾಗಿ ₹28.23 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ ಜಿಲ್ಲಾ ಕಚೇರಿಯ ಸಿಬ್ಬಂದಿಯವರ, ಹೊರಗುತ್ತಿಗೆ ನೌಕರರ ವೇತನ, ಕಚೇರಿ ನಿರ್ವಹಣೆಗೆ ಒಟ್ಟು ₹ 18.85 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

2) ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ:– (2225–00–102–0–31)

ಈ ಕಾರ್ಯಕ್ರಮದಡಿ ವಿವಿಧ ಕೋರ್ಸ್‌ಗಳಲ್ಲಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ₹ 48.40 ಲಕ್ಷಗಳನ್ನು ನಿಗಧಿಗೊಳಿಸಿದ್ದು, ಪೂರ್ತಿ ಅನುದಾನವನ್ನು ಸದರಿ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಗಿದೆ.

ಸದರಿ ಕಾರ್ಯಕ್ರಮದಡಿ ಪಿ.ಯು.ಸಿ ಯಿಂದ ವೈದ್ಯಕೀಯ ಮತ್ತು ತಾಂತ್ರಿಕ ಪದವಿ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.

ಕೋರ್ಸ್	ವಿ.ನಿ.ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ	ವಿ.ನಿ.ಗಳಲ್ಲಿ ವಾಸಿಸದ ವಿದ್ಯಾರ್ಥಿಗಳಿಗೆ
ಗ್ರೂಪ್ –1 : ವೈದ್ಯಕೀಯ ಮತ್ತು ತಾಂತ್ರಿಕ ಪದವಿ, ಭಾರತೀಯ ವೈದ್ಯಕೀಯ ಪದ್ಧತಿ, ಶಿಕ್ಷಣ ಪದವಿ, ಕೃಷಿ ಪಶು ವೈದ್ಯಕೀಯ, ಬಿಸಿನೆಸ್ ಅಡ್ಮಿನಿಸ್ಟ್ರೇಷನ್, ಕಂಪ್ಯೂಟರ್ ಅಪ್ಲಿಕೇಷನ್ ಇತ್ಯಾದಿ	₹ 1200–00	₹ 550–00
ಗ್ರೂಪ್ –2 : ಇನ್ನಿತರೆ ವೃತ್ತಿಪರ ಮತ್ತು ತಾಂತ್ರಿಕ ಪದವಿ ಮತ್ತು ಸ್ನಾನಕೋತ್ತರ ಪದವಿ ಎಂ.ಫಿಲ್, ಪಿ.ಹೆಚ್.ಡಿ, ಸಿ.ಎ., ಐಸಿಡಬ್ಲ್ಯೂಎ ಇತ್ಯಾದಿ ಎಲ್ಲಾ ಸ್ನಾತಕೋತ್ತರ ಪದವಿ (ಗ್ರೂಪ್ –1 ರಲ್ಲಿ ಸೇರದಿರುವ)	₹ 820–00	₹ 530–00
ಗ್ರೂಪ್ –3 : ಎಲ್ಲಾ ಪದವಿ ಕೋರ್ಸ್‌ಗಳು(ಗ್ರೂಪ್ –1 ಮತ್ತು 2 ರಲ್ಲಿ ಸೇರದಿರುವ)	₹ 570–00	₹ 300–00
ಗ್ರೂಪ್ –4 : ಉಳಿದ ಎಲ್ಲಾ ಪದವಿ ಪೂರ್ವ ಕೋರ್ಸ್‌ಗಳು ಡಿಪ್ಲಮೋ ಹತ್ತನೇ ತರಗತಿಯ ನಂತರದ ಕೋರ್ಸ್‌ಗಳು, ಪಿ.ಯು.ಸಿ 10+ 2 ,ಐ.ಟಿ.ಐ ಇತ್ಯಾದಿ ಮೇಲೆ ತಿಳಿಸಿದ ಗ್ರೂಪ್ –1, ಗ್ರೂಪ್ –2 ಹಾಗೂ ಗ್ರೂಪ್ –3 ರಲ್ಲಿ ಸೇರದೇ ಇರುವ ಕೋರ್ಸ್‌ಗಳು	₹ 380–00	₹ 230–00

3) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:– (2225–00–102–0–33)

ಈ ಕಾರ್ಯಕ್ರಮದಡಿ 1 ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ 50 ವಿದ್ಯಾರ್ಥಿಗಳಿಗೆ ಊಟ, ಸಮವಸ್ತ್ರ, ಲೇಖನಸಾಮಗ್ರಿ, ಹಾಸಿಗೆಹೊದಿಕೆ, ಸೋಪು, ಎಣ್ಣೆ ಇತ್ಯಾದಿ ಸೌಲಭ್ಯಗಳನ್ನು ನೀಡುವುದರ ನಿಲಯದ ನಿರ್ವಹಣೆಗಾಗಿ ₹. 19.21 ಲಕ್ಷಗಳನ್ನು ನಿಗಧಿಗೊಳಿಸಿದ್ದು, ₹. 15.28 ಗಳನ್ನು ವಿನಿಯೋಗಿಸಿದೆ.

4) ವಿದ್ಯಾರ್ಥಿ ನಿಲಯಗಳು, ಕಾನೂನು ಪದವೀಧರರಿಗೆ ಶಿಷ್ಯವೇತನ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಇತ್ಯಾದಿ :– (2225–00–102–0–38)

ಈ ಕಾರ್ಯಕ್ರಮದಡಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರದ ಪರಿಶಿಷ್ಟ ವರ್ಗದ ದ್ವಿತಿಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ರೂ.20,000/– ಪದವಿ ವಿದ್ಯಾರ್ಥಿಗಳಿಗೆ ರೂ.25,000/– ಸ್ನಾತಕೋತ್ತರ ಪದವಿಗೆ ರೂ.30,000/– ಇಂಜಿನಿಯರಿಂಗ್ ಮೆಡಿಕಲ್ ಕೋರ್ಸ್‌ಗಳಿಗೆ ರೂ.35,000/– ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಸಮಿತಿಯ ನಿರ್ಣಯದಂತೆ ಆಯ್ಕೆಯಾದ ಕಾನೂನು ಪದವಿಧರರಿಗೆ ಮಾಸಿಕ 10,000/– ರೂ. ಗಳನ್ನು 2 ವರ್ಷಗಳ ಅವಧಿಗೆ ನಿಯಮಾನುಸಾರ ಮಂಜೂರು ಮಾಡಲಾಗುವುದು, ಹಾಗೂ ಅಂತರಜಾತಿ ವಿವಾಹವಾದ ಅರ್ಹ ದಂಪತಿಗಳಿಗೆ ನಿಯಮಾನುಸಾರ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಸದರಿ ಲೆಕ್ಕಶೀರ್ಷಿಕೆಯಡಿ ರೂ.79.06 ಲಕ್ಷ ಬಿಡುಗಡೆಯಾಗಿದ್ದು, ರೂ.76.00 ಲಕ್ಷಗಳನ್ನು ವಿನಿಯೋಗಿಸಲಾಗಿರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

1) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:– (2225–00–102–68)

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಈ ಕಾರ್ಯಕ್ರಮದಡಿ ₹ 60.00 ಲಕ್ಷಗಳನ್ನು ನಿಗಧಿಗೊಳಿಸಿದ್ದು ₹ 60.00 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

2) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ:– (2225–00–102–71)

ಈ ಯೋಜನೆಯಲ್ಲಿ ₹12.11 ಲಕ್ಷಗಳು ನಿಗಧಿಯಾಗಿದ್ದು, ಇದರಲ್ಲಿ ಪರಿಶಿಷ್ಟ ವರ್ಗದ 130 ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚದ ಸವಲತ್ತು ನೀಡಲು ₹5.69 ಗಳನ್ನು ವಿನಿಯೋಗಿಸಲಾಗಿದೆ.

ಗಿರಿಜನ ಉಪ–ಯೋಜನೆ:

1) ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ:– (2225–00–102–69)

2020–21ನೇ ಸಾಲಿಗೆ ಈ ಯೋಜನೆಯಲ್ಲಿ ₹18.00 ಲಕ್ಷಗಳು ನಿಗಧಿಯಾಗಿದ್ದು, ಇದರಲ್ಲಿ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳಾದ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ, ರಸ್ತೆ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳಿಗೆ ₹ 17.96 ಲಕ್ಷಗಳನ್ನು ವಿನಿಯೋಸಲಾಗಿದೆ.

2) ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಆರ್ಥಿಕ ಸಹಾಯ:– (2225–00–102–70)

2020–21ನೇ ಸಾಲಿಗೆ ಈ ಯೋಜನೆಯಲ್ಲಿ ₹11.00 ಲಕ್ಷಗಳು ನಿಗಧಿಯಾಗಿದ್ದು, ಇದರಲ್ಲಿ ಪರಿಶಿಷ್ಟ ವರ್ಗದ ಕುಟುಂಬಗಳಿಗೆ ವಿವಿಧ ಅಭಿವೃದ್ಧಿ ಇಲಾಖೆಗಳ ಮುಖಾಂತರ ಇಲಾಖಾ ಕಾರ್ಯಕ್ರಮಗಳ ಸವಲತ್ತು ನೀಡಲು ₹10.99 ಲಕ್ಷಗಳ ಆರ್ಥಿಕ ಸಹಾಯಧನವಾಗಿ ವಿನಿಯೋಗಿಸಲಾಗಿದೆ.

6. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಜನರಿಗೆ ಶೈಕ್ಷಣಿಕ, ಔದ್ಯೋಗಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಿ, ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪ್ರಸಕ್ತ 2020–21ನೇ ಸಾಲಿಗೆ ಯೋಜನೇತರ ಅಡಿಯಲ್ಲಿ ರೂ. 1239.00 ಲಕ್ಷ ನಿಗಧಿಯಾಗಿದ್ದು, ರೂ. 1214.55 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಅದರಲ್ಲಿ ರೂ. 1158.13 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಜಿಲ್ಲಾ ವಲಯ ಕಾರ್ಯಕ್ರಮಗಳು

ವಿದ್ಯಾರ್ಥಿನಿಲಯಗಳ ನಿರ್ವಹಣೆ:–

ಮೆಟ್ರಿಕ್ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ 100 ಸಂಖ್ಯಾಬಲದ 3 ಬಾಲಕಿಯರ ಮತ್ತು 3 ಬಾಲಕರ ವಿದ್ಯಾರ್ಥಿನಿಲಯಗಳಿಗೆ ಒಟ್ಟು 600 ಮಂಜೂರಾತಿ ಸಂಖ್ಯೆಯಾಗಿರುತ್ತದೆ ಹಾಗೂ 4 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು 14 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಒಟ್ಟು 775 ವಿದ್ಯಾರ್ಥಿಗಳು ಒಟ್ಟಾರೆ 1375 ವಿದ್ಯಾರ್ಥಿಗಳ ನಿರ್ವಹಣೆ ಹಾಗೂ 109 ಸಿಬ್ಬಂದಿಗಳಿಗೆ ವೇತನ ಪಾವತಿಸಲು ರೂ. 709.29 ಲಕ್ಷ ಒದಗಿಸಿದ್ದು, ಅದರಲ್ಲಿ ರೂ. 654.93 ಲಕ್ಷ ವೆಚ್ಚ ಮಾಡಲಾಗಿದೆ.

ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮತ್ತು ವಿಶೇಷ ದುರಸ್ಥಿ:–

ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಮತ್ತು ವಿಶೇಷ ದುರಸ್ಥಿಗಾಗಿ ರೂ. 37.23 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಂತೆ ರೂ. 37.23 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ವಕೀಲರಿಗೆ ಪ್ರೋತ್ಸಾಹಧನ:–

ಕಾನೂನು ಪದವಿ ಪಡೆದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ ತರಬೇತಿ ಅವಧಿಯಲ್ಲಿ ಮಾಹೆಯಾನ ರೂ. 4000/–ಗಳ ಶಿಷ್ಯವೇತನ ನೀಡಲಾಗುತ್ತಿದೆ. ಈ ಸಾಲಿಗೆ ರೂ. 19.20 ಲಕ್ಷ ಬಿಡುಗಡೆಯಾಗಿದ್ದು, ಇದರಲ್ಲಿ 40 ಅಭ್ಯರ್ಥಿಗಳಿಗೆ ಒಟ್ಟು ರೂ. 17.16 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳು:–

ಇಲಾಖಾ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಲು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ವೇತನ ಹಾಗೂ ಇತರೆ ವೆಚ್ಚ ಪಾವತಿಸಲು ರೂ. 25.88 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಅದರಂತೆ ರೂ. 24.09 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಕಾರ್ಯನಿರ್ವಾಹಕ ಸಿಬ್ಬಂದಿ:–

ಜಿಲ್ಲಾ ಕಛೇರಿಯ ಸಿಬ್ಬಂದಿ ವೇತನ ಪಾವತಿಸಲು ಹಾಗೂ ಕಛೇರಿ ನಿರ್ವಹಣೆಗೆ ರೂ. 42.93 ಲಕ್ಷಗಳನ್ನು ಒದಗಿಸಲಾಗಿದ್ದು, ಅದರಲ್ಲಿ ರೂ. 42.91 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇತರೆ ಹಿಂದುಳಿದ ವರ್ಗಗಳಿಗೆ ರಿಯಾಯಿತಿ:–

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಜಾತಿ/ಸಮುದಾಯದ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ–1ಕ್ಕೆ ರೂ. 2.50 ಲಕ್ಷ, ಇತರೆ ವರ್ಗದವರಿಗೆ ರೂ. 1.00 ಲಕ್ಷದೊಳಗೆ ಹಾಗೂ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ ವಿನಾಯಿತಿ ನೀಡಲಾಗುತ್ತದೆ. 2020–21ನೇ ಸಾಲಿನಲ್ಲಿ ರೂ. 400.75 ಲಕ್ಷಗಳು ಬಿಡುಗಡೆಯಾಗಿದ್ದು, ಸರ್ಕಾರದ ಆದೇಶದ ಮೇರೆಗೆ ಮಾನ್ಯ ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ಬ್ಯಾಂಕ್ ಖಾತೆಗೆ ರೂ. 400.75 ಲಕ್ಷಗಳ ಅನುದಾನವನ್ನು ವರ್ಗಾಯಿಸಲಾಗಿರುತ್ತದೆ.

ಹೊಲಿಗೆ ತರಬೇತಿ ಕೇಂದ್ರಗಳು:–

ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಹೊಲಿಗೆ ಕಸುಬಿನಲ್ಲಿ ನುರಿತ ಸ್ವಯಂ ಉದ್ಯೋಗದಲ್ಲಿ ತೊಡಗಿ ಜೀವನ ನಡೆಸಲು ಅನುಕೂಲವಾಗುವಂತೆ ಹೊಲಿಗೆ ಕೇಂದ್ರಗಳ ಮೂಲಕ ಹೊಲಿಗೆ ತರಬೇತಿ ನೀಡಲಾಗುತ್ತದೆ. ಪ್ರಸಕ್ತ ಸಾಲಿಗೆ ವೇತನ ಮತ್ತು ವೇತನೇತರ ವೆಚ್ಚಕ್ಕಾಗಿ ರೂ. 6.97 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಅದರಲ್ಲಿ ರೂ. 6.97 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ:–

1ನೇ ತರಗತಿಯಿಂದ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 750/–, 6ನೇ ತರಗತಿಯಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 900/–, 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 1000/–, ವಾರ್ಷಿಕ ವಿದ್ಯಾರ್ಥಿವೇತನ ಮಂಜೂರು ಮಾಡಲಾಗಿದ್ದು, ಪೋಷಕರ ವಾರ್ಷಿಕ ಆದಾಯ ರೂ.1.00 ಲಕ್ಷ ಮಿತಿಯೊಳಗೆ ಇರಬೇಕು. ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಉತ್ತೇಜನ ನೀಡಲು ವಿದ್ಯಾರ್ಥಿ ವೇತನಕ್ಕಾಗಿ ರೂ. 46.48 ಲಕ್ಷಗಳ ಅಯವ್ಯಯ ಒದಗಿಸಲಾಗಿದ್ದು, ರೂ. 45.22 ಲಕ್ಷಗಳನ್ನು ಒಟ್ಟು 2261 ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ವೆಚ್ಚ ಮಾಡಲಾಗಿದೆ.

ಮೆಟ್ರಿಕ್ ನಂತರ ಪಿ.ಯು.ಸಿ/ಜೆ.ಓ,ಸಿ ವಿದ್ಯಾರ್ಥಿಗಳಿಗೆ ರೂ. 1600/–, ಪದವಿ ಡಿಪ್ಲೋಮೋ ವಿದ್ಯಾರ್ಥಿಗಳಿಗೆ ರೂ.2100/–, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 3300/–, ತಾಂತ್ರಿಕ ವೈದ್ಯಕೀಯ ವಿದ್ಯಾರ್ಥಿಗಳಿಗೆ ರೂ. 3500/– ರಂತೆ ಪೋಷಕರ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗೆ ಇರುವ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಉತ್ತೇಜನ ನೀಡಲು ವಿದ್ಯಾರ್ಥಿ ವೇತನಕ್ಕಾಗಿ ರೂ. 30.51 ಲಕ್ಷಗಳ ಅಯವ್ಯಯ ಒದಗಿಸಲಾಗಿದ್ದು, ರೂ. 28.95 ಲಕ್ಷಗಳನ್ನು ಒಟ್ಟು 2887 ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ವೆಚ್ಚ ಮಾಡಲಾಗಿದೆ.

ಅನಾಥಾಲಯಗಳಿಗೆ ಸಹಾಯಧನ:–

ಅನಾಥ ಮತ್ತು ನಿರ್ಗತಿಕ ಮಕ್ಕಳ ಶೈಕ್ಷಣಿಕ ಅನುಕೂಲವಾಗುವಂತೆ ಒಂದು ಸ್ವಯಂ ಸೇವಾ ಸಂಸ್ಥೆ ನಡೆಸುತ್ತಿರುವ 50 ಸಂಖ್ಯಾಬಲದ ಅನಾಥಾಲಯಗಳಿಗೆ ಪ್ರೋತ್ಸಾಹ/ನೆರವು ನೀಡುವ ಸಲುವಾಗಿ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 750/– ರಂತೆ ಸಹಾಯಧನ ನೀಡಲಾಗುತ್ತದೆ. 2020–21ನೇ ಸಾಲಿನಲ್ಲಿ ರೂ. 10.37 ಲಕ್ಷಗಳನ್ನು ಒದಗಿಸಿದ್ದು ಹಾಲಿ ಅನಾಥಾಲಯವು ಮುಚ್ಚಿರುವುದರಿಂದ ಅನುದಾನ ವೆಚ್ಚವಾಗದೆ ಹಾಗೇ ಸರ್ಕಾರದಲ್ಲೇ ಉಳಿದಿರುತ್ತದೆ.

7. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ವರದಿಯು ಅಂಗೀಕೃತವಾದ್ದರಿಂದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರತ್ಯೇಕ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯನ್ನು 1977ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ನಂತರ ಸರ್ಕಾರದ ಆದೇಶ ಕ್ರಮಾಂಕ:ಎಂ.ಡಬ್ಲ್ಯೂಡಿ 203/ಎಂಡಿಎಸ್/2014, ಬೆಂಗಳೂರು ದಿ:09/02/2015, ಮೇ–01 ರಿಂದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಪ್ರತ್ಯೇಕಗೊಳಿಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 2015–16ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಇಲಾಖೆ ಮೂಲಕ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ.

ಭಾರತೀಯ ಸಂವಿಧಾನದ ಅನುಚ್ಛೇದ 15(4)ರನ್ವಯ ಶೈಕ್ಷಣಿಕ ಕ್ಷೇತ್ರದಲ್ಲಿ, ಅನುಚ್ಛೇದ 16(4)ರನ್ವಯ ಔದ್ಯೋಗಿಕ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಜನಾಂಗದವರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ/ಸಕಇ/251/ಬಿಸಿಎ 94. ದಿನಾಂಕ–31–1–1995ರ ಅನುಸಾರ ಮೀಸಲಾತಿಯನ್ನು ಗ್ರಾಮಾಂತರ ಪ್ರದೇಶದ ಹಾಗೂ ನಗರ ಪ್ರದೇಶದ ಅಲ್ಪಸಂಖ್ಯಾತರ ಜನರಿಗೆ ಮೀಸಲಾತಿಯನ್ನು ನೀಡಲಾಗುತ್ತಿದೆ.

ಆಡಳಿತ ವಿಧಾನ

ಅಲ್ಪಸಂಖ್ಯಾತರ ಇಲಾಖೆಯ ಕಾರ್ಯಕ್ರಮಗಳನ್ನು ಪ್ರಸ್ತುತ ಜಿಲ್ಲಾ ಹಂತದಲ್ಲಿ ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳು, ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು (ಗ್ರಾ) ಜಿಲ್ಲೆ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧೀನದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುತ್ತಾರೆ. ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು ಸಹಾ ಜಿಲ್ಲಾ ಕಛೇರಿಯ ಅಧೀನದಲ್ಲಿ ನಿರ್ವಹಿಸಲಾಗುತ್ತದೆ.

ತಾಲ್ಲೂಕು ಹಂತದಲ್ಲಿ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳ ಕಛೇರಿ ಮತ್ತು ಮಾಹಿತಿ ಕೇಂದ್ರಗಳನ್ನು ತೆರೆದಿದ್ದು ವಿಸ್ತರಣಾಧಿಕಾರಿಗಳು, ಅಲ್ಪಸಂಖ್ಯಾತರ ಇಲಾಖಾ ಕಾರ್ಯಕ್ರಮಗಳ ಅನುಷ್ಟಾನಾಧಿಕಾರಿಗಳಾಗಿರುತ್ತಾರೆ. ವಿದ್ಯಾರ್ಥಿನಿಲಯಗಳ ತಪಾಸಣೆ, ಶೈಕ್ಷಣಿಕ ಸಂಸ್ಥೆಗಳ ತಪಾಸಣೆ, ಘಟಕ ಕಛೇರಿಗಳ ತಪಾಸಣೆ ನಡೆಸುವುದು, ನಿರ್ದೇಶನಾಲಯದಿಂದ ಜಿಲ್ಲಾ ಕಛೇರಿಗೆ ಸೂಚಿಸಲಾದ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಮಾಹಿತಿ ಸಲ್ಲಿಸುವುದು ಇತ್ಯಾದಿಗಳು ಇವರ ಪ್ರಮುಖ ಜವಬ್ದಾರಿಗಳಾಗಿರುತ್ತದೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಉಚಿತ ಊಟ, ವಸತಿ ಹಾಗೂ ಇತರೆ ಸೌಕರ್ಯಗಳನ್ನೊಳಗೊಂಡ 03 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ವಹಿಸಲಾಗುತ್ತಿದೆ. ಹಾಗೆಯೇ ಜಿಲ್ಲೆಯಲ್ಲಿ 02 ಮೊರಾರ್ಜಿ ದೇಸಾಯಿ ವಸತಿಶಾಲೆ ಮತ್ತು 03 ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿದೆ.

2020–21ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಛೇರಿಯಲ್ಲಿ ಅನುಷ್ಠಾನಗೊಳಿಸಲಾಗಿರುವ ಕಾರ್ಯಕ್ರಮಗಳ ವಿವರ

2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಕಾರ್ಯಕ್ರಮಗಳ ಅನುಷ್ಟಾನಕ್ಕಾಗಿ ಜಿಲ್ಲಾವಲಯ ಯೋಜನೆ ಕಾರ್ಯಕ್ರಮಗಳ ಅಡಿ ಜಿಲ್ಲಾ ಪಂಚಾಯತ್‌ನಿಂದ ಒಟ್ಟು ರೂ.95.69 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ರೂ.87.27 ಲಕ್ಷ ಅನುದಾನ ಖರ್ಚು ಮಾಡಿ ಶೇ.91ರಷ್ಟು ಪ್ರಗತಿ ಸಾಧಿಸಲಾಗಿದೆ. ಅಲ್ಲದೆ ಇಲಾಖೆಯ ರಾಜ್ಯವಲಯ

ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2020–21ನೇ ಸಾಲಿಗೆ ರೂ.77.39 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದ್ದು, ರೂ.76.66ಲಕ್ಷ ಖರ್ಚು ಭರಿಸಿ ಶೇ.99ರಷ್ಟು ಪ್ರಗತಿ ಸಾಧಿಸಲಾಗಿದೆ. ಕಾರ್ಯಕ್ರಮವಾರು ಪ್ರಗತಿ ಸಾಧಿಸಲಾದ ವಿವರ ಈ ಕೆಳಕಂಡಂತಿರುತ್ತದೆ.

1) ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು:–

ಪಿ.ಯು.ಸಿ ಮತ್ತು ಅದಕ್ಕಿಂತ ಎಲ್ಲಾ ಹೆಚ್ಚಿನ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ, ಗ್ರಂಥಾಲಯ, ಗಣಕಯಂತ್ರ ಸೌಲಭ್ಯ, ಕ್ರೀಡಾ ಸಾಮಾಗ್ರಿ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಈ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.1600/–ದರದಲ್ಲಿ ಆಹಾರ ನೀಡಲಾಗುತ್ತದೆ. ವಿದ್ಯಾರ್ಥಿಗಳು/ವಿದ್ಯಾರ್ಥಿನಿಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಈ ನಿಲಯಗಳಿಗೆ ಪ್ರವೇಶ ಕಲ್ಪಿಸುವಾಗ ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾಗಿರುವ ಸಂಖ್ಯಾ ಬಲಕ್ಕೆ ಶೇ.75 ರಷ್ಟು ಸ್ಥಾನಗಳನು ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡಲಾಗುವುದು. ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮುಸ್ಲಿಂ–ಶೇ.77, ಕ್ರಿಶ್ಚಿಯನ್ ಶೇ. 14, ಜೈನ್ ಶೇ.6, ಬೌದ್ಧ ಶೇ.2, ಮತ್ತು ಸಿಖ್‌ರಿಗೆ ಶೇ.1 ರಷ್ಟು ಮೀಸಲಾತಿ ಅನ್ವಯ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕಲ್ಪಿಸಲಾಗುವುದು ವಿದ್ಯಾರ್ಥಿಗಳನ್ನು ತಾಲ್ಲೂಕು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೆಲಮಂಗಲ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ತಾಲ್ಲೂಗಳಲ್ಲಿ ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ಒಟ್ಟು 03 ವಿದ್ಯಾರ್ಥಿನಿಲಯಗಳಿದ್ದು, 175 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಸದರಿ ವಿದ್ಯಾರ್ಥಿನಿಲಯ ನಿರ್ವಹಣೆಗೆ ಮತ್ತು ಸಿಬ್ಬಂದಿಗೆ 2020–21ನೇ ಸಾಲಿನಲ್ಲಿ 60.64 ಲಕ್ಷ ಅನುದಾನ ಒದಗಿಸಿದ್ದು, ರೂ.56.12ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2) ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ಶಿಷ್ಯವೇತನ:–

ಪ್ರತಿ ವರ್ಷ ಕಾನೂನು ಪದವಿ ಪಡೆದಿರುವ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ವಕೀಲ ವೃತ್ತಿಯಲ್ಲಿ ತರಬೇತಿ ಪಡೆಯಲು ತರಬೇತಿ ಭತ್ಯೆ ನೀಡುವ ಕಾರ್ಯಕ್ರಮವಾಗಿದೆ. ಪ್ರತಿ ವರ್ಷ 03 ಅಲ್ಪಸಂಖ್ಯಾತರ ಕಾನೂನು ಪದವೀಧರರನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ. ತರಬೇತಿ ಅವಧಿಯು 4 ವರ್ಷಗಳಾಗಿರುತ್ತದೆ. ಈ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 5000/–ರಂತೆ ತರಬೇತಿ ಭತ್ಯೆ ನೀಡಲಾಗುತ್ತದೆ. ಈ ಕಾರ್ಯಕ್ರಮಕ್ಕಾಗಿ 2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.1.50 ಲಕ್ಷ ಅನುದಾನ ಒದಗಿಸಿದ್ದು, ರೂ.1.50 ಲಕ್ಷಗಳನ್ನು ವೆಚ್ಚ ಮಾಡಲಾಗಿ 09 ಅಭ್ಯರ್ಥಿಗಳು ಇದರ ಪ್ರಯೋಜನ ಪಡೆಯುತ್ತಿರುತ್ತಾರೆ.

3) ಕಾರ್ಯನಿರ್ವಾಹಕ ಸಿಬ್ಬಂದಿ:–

ಅಲ್ಪಸಂಖ್ಯಾತರ ಜಿಲ್ಲಾ ಕಛೇರಿಯಲ್ಲಿ ಜಿಲ್ಲಾ ಅಧಿಕಾರಿಗಳು, 02 ಪ್ರಥಮ ದರ್ಜೆ ಸಹಾಯಕರು, 02 ದ್ವಿತೀಯ ಸಹಾಯಕರು, 01 ವಾಹನ ಚಾಲಕರು, 01 ಗ್ರೂಪ್ 'ಡಿ' ಹುದ್ದೆಗಳು ಮಂಜೂರಾಗಿದ್ದು, ಸದರಿ ಸಿಬ್ಬಂದಿಗಳ ವೇತನ ಪಾವತಿಸಲು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ವಿಸ್ತರಣಾಧಿಕಾರಿಗಳ ಕಛೇರಿಯ ನಿರ್ವಹಣೆಗೆ 2020–21ನೇ ಸಾಲಿಗೆ ರೂ.33.55 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ರೂ.29.65 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

4) ಬಿ.ಎಡ್ ಮತ್ತು ಡಿ.ಎಡ್ ಅಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ:–

Department of State Educational Research and Training ನಿಂದ ಮಾನ್ಯತೆ ಪಡೆದಿರುವ ಬಿ.ಎಡ್ ಹಾಗೂ ಸರ್ಕಾರಿ/ಅರೆ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಬಿ.ಎಡ್

ಮತ್ತು ಡಿ.ಎಡ್ ಕೋರ್ಸ್‌ಗಳಲ್ಲಿ ಅಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರತಿ ವರ್ಷಕ್ಕೆ ರೂ.25,000/–ದಂತೆ 2 ವರ್ಷಕ್ಕೆ ವಿಶೇಷ ಪ್ರೋತ್ಸಾಹಧನ ನೀಡಲಾಗುವುದು. 2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.2.50 ಲಕ್ಷಗಳು ಒದಗಿಸಿದ್ದು, 10 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿರುತ್ತಾರೆ.

5) ಕ್ರೈಸ್ತ ಸಮುದಾಯದ ಅಭಿವೃದ್ಧಿ (ಕ್ರಿಶ್ಚಿಯನ್ ಸಮುದಾಯ ಭವನ ನಿರ್ಮಾಣ ಸಹಾಯಧನ):–

ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ ಸಹಾಯಧನ ನೀಡಲಾಗುವುದು. 2020–21ನೇ ಸಾಲಿನಲ್ಲಿ ನೆಲಮಂಗಲ ಟೌನ್‌ನ ಇವ್ಯಾಂಜಲಿಕಲ್ ಚರ್ಚ್ ಆಫ್ ಇಂಡಿಯಾ ಸಂಸ್ಥೆಗೆ ಎರಡನೇ ಕಂತಾಗಿ ಸಮುದಾಯ ಭವನ ನಿರ್ಮಿಸಲು ರೂ.12.50 ಲಕ್ಷಗಳನ್ನು ಬಿಡುಗಡೆ ಮಾಡಿದೆ.

6) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು:–

ಕ್ರ.ಸಂ	ವಸತಿ ಶಾಲೆಯ ಹೆಸರು ಮತ್ತು ವಿಳಾಸ	ಮಾಧ್ಯಮ	ಶಿಕ್ಷಣ	ತರಗತಿ	ಕಟ್ಟಡ
1	ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ದಂಡುಪಾಳ್ಯ, ಹೊಸಕೋಟೆ ತಾಲ್ಲೂಕು.	**ಆಂಗ್ಲ ಮಾಧ್ಯಮ**	ಸಹ ಶಿಕ್ಷಣ	6 ರಿಂದ 10ನೇ ತರಗತಿ	ಸ್ವಂತ
2	ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ದೇವನಾಯಕನಹಳ್ಳಿ, ದೇವನಹಳ್ಳಿ ತಾಲ್ಲೂಕು.				ಸ್ವಂತ

ಮೇಲಿನ ಸದರಿ ವಸತಿ ಶಾಲೆಗಳ ನಿರ್ವಹಣೆ, ವಿದ್ಯುತ್, ಹೊರಗುತ್ತಿಗೆ ವೇತನ ಮತ್ತು ಇತರೆ ವೆಚ್ಚಕ್ಕೆ 2020–21ನೇ ಸಾಲಿನಲ್ಲಿ 27.75 ಲಕ್ಷ ಅನುದಾನ ಒದಗಿಸಿದ್ದು, ರೂ.27.14 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಒದಗಿಸುವ ಸೌಲಭ್ಯಗಳು

- 6 ನೇ ತರಗತಿಗೆ ಉಚಿತ ಪ್ರವೇಶ
- ಉಚಿತ ವಸತಿ ಮತ್ತು ಆಹಾರ, ಸುಸಜ್ಜಿತ ಕಟ್ಟಡ, ಶುದ್ದನೀರು.
- ಸೋಲಾರ್ ಲೈಟಿಂಗ್, ಸಮವಸ್ತ್ರಗಳು, ಬೂಟು/ಕಾಲುಚೀಲ, ಟ್ರಂಕ್, ಪಠ್ಯಪುಸ್ತಕಗಳು.
- ಮಂಚ, ಹಾಸಿಗೆ ಹೊದಿಕೆಗಳ ವ್ಯವಸ್ಥೆ.
- ಇ–ಲರ್ನಿಂಗ್, ಸ್ಮಾರ್ಟ್‌ಕ್ಲಾಸ್, ಕಂಪ್ಯೂಟರ್ ಲ್ಯಾಬ್, ಗ್ರಂಥಾಲಯ, ಸ್ಪೋಕನ್ ಇಂಗ್ಲೀಷ್.

7) ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆಗಳು:–

ಕ್ರ.ಸಂ	ವಸತಿ ಶಾಲೆಯ ಹೆಸರು ಮತ್ತು ವಿಳಾಸ	ಮಾಧ್ಯಮ	ಶಿಕ್ಷಣ	ತರಗತಿ	ಕಟ್ಟಡ
1.	ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆ, ವಿಜಯಪುರ, ದೇವನಹಳ್ಳಿ ತಾಲ್ಲೂಕು.	**ಆಂಗ್ಲ ಮಾಧ್ಯಮ**	ಸಹ ಶಿಕ್ಷಣ	6 ರಿಂದ 10ನೇ ತರಗತಿ	ಸರ್ಕಾರಿ
2.	ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆ, ಮುತ್ತೂರು, ದೊಡ್ಡಬಳ್ಳಾಪುರ ತಾಲ್ಲೂಕು.				ಸರ್ಕಾರಿ
3.	ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆ, ಇಸ್ಲಾಂಪುರ, ನೆಲಮಂಗಲ ತಾಲ್ಲೂಕು.				ಸರ್ಕಾರಿ

ಮೇಲಿನ ಸದರಿ ಮಾದರಿ ಶಾಲೆಗಳ ನಿರ್ವಹಣೆಗೆ, ಅತಿಥಿ ಶಿಕ್ಷಕರ ವೇತನ ಮತ್ತು ಇತರೆ ವೆಚ್ಚಕ್ಕೆ 2020–21ನೇ ಸಾಲಿನಲ್ಲಿ 8.85 ಲಕ್ಷ ಅನುದಾನ ಒದಗಿಸಿದ್ದು, ರೂ.8.77 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಒದಗಿಸುವ ಸೌಲಭ್ಯಗಳು

- 6ನೇ ತರಗತಿಗೆ ಉಚಿತ ಪ್ರವೇಶ
- ಮದ್ಯಾಹ್ನ ಬಿಸಿ ಊಟ, ಶುದ್ದನೀರು.
- ಸಮವಸ್ತ್ರಗಳು, ಬೂಟು/ಕಾಲುಚೀಲ, ಪಠ್ಯಪುಸ್ತಕಗಳು.

ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳು 2021–22ನೇ ಸಾಲಿಗೂ ಮುಂದುವರೆದಿರುತ್ತವೆ. ಕಾರ್ಯಕ್ರಮಗಳ ಬಗ್ಗೆ ಮಾಹಿತಿಗಾಗಿ ಜಿಲ್ಲಾ ಮಾಹಿತಿ ಕೇಂದ್ರ, ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಹಾಗೂ ಅಲ್ಪಸಂಖ್ಯಾತ ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಆಯಾ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳನ್ನು ಸಾರ್ವಜನಿಕರು ಸಂಪರ್ಕಿಸಿ ವಿವರ ಪಡೆಯಬಹುದಾಗಿರುತ್ತದೆ.

2020–21ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಜಿಲ್ಲಾವಲಯ ಯೋಜನೆಯಡಿ ಒದಗಿಸಿದ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ (ಯೋಜನೆ)	ಒದಗಿಸಿದ ಆಯವ್ಯಯ	ಬಿಡುಗಡೆಯಾದ ಅನುದಾನ			ಖರ್ಚು			ಒಟ್ಟು ಖರ್ಚು
			ವೇತನ (005)	ಹೊರ ಗುತ್ತಿಗೆ (034)	ವೇತ ನೇತರ (090)	ವೇತನ (005)	ಹೊರ ಗುತ್ತಿಗೆ (034)	ವೇತ ನೇತರ (090)	
1	ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು 2225–00–103–0 –34	60.64	4.54	14.86	41.24	3.60	11.29	41.23	**56.12**
2	ಅಲ್ಪಸಂಖ್ಯಾತರಿಗಾಗಿ ತರಬೇತಿ (ಕಾನೂನು ಪದವೀಧರರಿಗೆ ಶಿಷ್ಯವೇತನ) 2225–00–103–0 –44	1.50	–	–	1.50	–	–	1.50	**1.50**
3	ಕಾರ್ಯಕಾರಿ ಸಿಬ್ಬಂದಿ 2225–00–103–0 –51	33.55	18.19	7.18	8.18	17.22	4.27	8.16	**29.65**
ಒಟ್ಟು		**95.69**	**22.73**	**22.04**	**50.92**	**20.82**	**15.56**	**50.89**	**87.27**

8. ಖಾದಿ ಮತ್ತು ಗ್ರಾಮೋದ್ಯೋಗ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯವರು ಸ್ವಯಂ ಉದ್ಯೋಗಸ್ಥರಾಗಿ ಸ್ವಾವಲಂಬಿಯಾಗಲು ಮತ್ತು ವೃತ್ತಿನಿರತ ಕುಶಲಕರ್ಮಿಗಳು ಕುಶಲ ಕಸುಬುಗಳಲ್ಲಿ ಕಾರ್ಯನಿರತವಾಗಿರುವ ವೃತ್ತಿಗಳಾದ ಮರಗೆಲಸ, ಕಮ್ಮಾರಿಕೆ, ಗಾರೆಕೆಲಸ, ಕ್ಷೌರಿಕ, ದೋಬಿ, ಕಲ್ಲುಕೆಲಸ, ಟೈಲರಿಂಗ್ ಮತ್ತು ವಿಚಾರ ಸಂಕೀರ್ಣ/ ವಸ್ತುಪ್ರದರ್ಶನದ ಕಾರ್ಯಕ್ರಮದಡಿ, ಜಿಲ್ಲೆಯನ್ನು ಬಿಂಬಿಸುವ ಸ್ಥಬ್ದ ಚಿತ್ರ ನಿರ್ಮಿಸಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಪ್ರದರ್ಶಿಸುವುದು .

1. **ಜಿಲ್ಲಾ ಔದ್ಯಮಿಕ ಕೇಂದ್ರ (2851–00–107–0–27):**

ಈ ಯೋಜನೆಯಡಿ 2020–21 ನೇ ಸಾಲಿಗೆ ರೂ. 70.02 ಲಕ್ಷ ಆರ್ಥಿಕ ಗುರಿ ಮತ್ತು 715 ಭೌತಿಕ ಗುರಿ ನಿಗಧಿಪಡಿಸಿದ್ದು, ಸದರಿ ಅನುದಾನದಲ್ಲಿ ರೂ.60.86 ಲಕ್ಷ ವೆಚ್ಚ ಮಾಡಲಾಗಿದ್ದು. 4 ತಾಲ್ಲೂಕುಗಳಲಿನ 715 ಮಂದಿ ವೃತ್ತಿನಿರತ ನಿರುದ್ಯೋಗಿ ಯುವತಿ/ಮಹಿಳೆಯರಿಗೆ ಘಟಕ ವೆಚ್ಚ ಗರಿಷ್ಠ ರೂ.5000/– ಮೌಲ್ಯದ ಹೊಲಿಗೆ ಯಂತ್ರವನ್ನು ಉಚಿತವಾಗಿ ವಿತರಿಸಲಾಗಿದೆ.

2. ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಸರಬರಾಜು ಯೋಜನೆ (2851–00–107–0–32):

ಈ ಯೋಜನೆಯಡಿ 2020–21 ನೇ ಸಾಲಿಗೆ ರೂ.4.29 ಲಕ್ಷ ಆರ್ಥಿಕ ಗುರಿ ಮತ್ತು 92 ಭೌತಿಕ ಗುರಿ ನಿಗಧಿಪಡಿಸಿದ್ದು, ಸದರಿ ಗುರಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದೆ. ಸದರಿ ಯೋಜನೆಯಡಿ ಗ್ರಾಮೀಣ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ, ಅವರ ವೃತ್ತಿಗನುಗುಣವಾಗಿ ಅಂದರೆ ಮರಗೆಲಸ, ಕಮ್ಮಾರಿಕೆ, ಗಾರೆಕೆಲಸ, ಕ್ಷೌರಿಕ, ದೋಬಿ, ಕಲ್ಲುಕೆಲಸದ 92 ಮಂದಿ ಕುಶಲಕರ್ಮಿಗಳಿಗೆ ಘಟಕ ವೆಚ್ಚ ಗರಿಷ್ಠ ರೂ.5000/– ಬೆಲೆಯ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗಿದೆ.

3. ವಿಚಾರ ಸಂಕಿರಣ /ಕ್ಷೇತ್ರೋತ್ಸವ ಮತ್ತು ವಸ್ತುಪ್ರದರ್ಶನ (2851–00–107–0–34):

ಈ ಯೋಜನೆಯಡಿ 2020–21 ನೇ ಸಾಲಿಗೆ ರೂ.12.00 ಲಕ್ಷ ಆರ್ಥಿಕ ಗುರಿ ನಿಗದಿ ಪಡಿಸಿಲಾಗಿತ್ತು. ಅದರಂತೆ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ನಮ್ಮ ಜಿಲ್ಲೆಯನ್ನು ಬಿಂಬಿಸುವ ಸ್ಥಬ್ದ ಚಿತ್ರವನ್ನು ನಿರ್ಮಿಸಿ ಪ್ರದರ್ಶಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ,ಆದರೆ ಕೋವಿಡ್–19ರ ಹಿನ್ನಲೆಯಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ರದ್ದಾದ ಕಾರಣ, ಈ ಯೋಜನೆಯಡಿ ಲಭ್ಯವಿರುವ ಅನುದಾನ ರೂ 12 ಲಕ್ಷಗಳಲ್ಲಿ, ರೂ.10.00 ಲಕ್ಷಗಳನ್ನು ಮಾತ್ರ ಹೆಚ್ಚುವರಿಯಾಗಿ, ಜಿಲ್ಲಾ ಉದ್ಯಮ ಕೇಂದ್ರ (**2851–00–107–0–27**)ಲೆಕ್ಕ ಶೀರ್ಷಿಕೆಗೆ ಪುನರ್ ವಿನಯೋಗಿಸಲಾಗಿದೆ, ಉಳಿದ ರೂ 2 ಲಕ್ಷಗಳನ್ನು ಸರ್ಕಾರಕ್ಕೆ ಅದ್ಯರ್ಪಿಸಲಾಗಿದೆ.

4. ಕುಶಲಕರ್ಮಿ ತರಬೇತಿ ಸಂಸ್ಥೆ (2852–00–101–0–26):

ಕುಶಲಕರ್ಮಿ ತರಬೇತಿ ಸಂಸ್ಥೆಯ ನಿರ್ವಹಣೆಗೆ ಯಾವುದೇ ಅನುದಾನ ಲಭ್ಯವಿರುವುದಿಲ್ಲ. ಇಲಾಖೆಯ ಪುನರ್ ರಚನೆಯಿಂದಾಗಿ ಕುಶಲಕರ್ಮಿ ತರಬೇತಿ ಸಂಘದ ಸಿಬ್ಬಂದಿಗೆ ಉಪನಿರ್ದೇಶಕರ ಕಛೇರಿಯಿಂದಲೇ ವೇತನ/ಇತರೆ ವಚ್ಚಗಳನ್ನು ನೀಡುವ ವ್ಯವಸ್ಥೆಯಾದ ಹಿನ್ನೆಲೆಯಲ್ಲಿ ಸದರಿ ಲೆಕ್ಕಶೀರ್ಷಿಕೆಯಡಿ ಬಿಡುಗಡೆ ಮಾಡಲಾದ ರೂ 7.35 ಲಕ್ಷಗಳು ವೆಚ್ಚವಾಗದೆ ಸರಕಾರಕ್ಕೆ ಅದ್ಯರ್ಪಿಸಿದೆ.

9. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸರ್ವೇಜನಾ ಸುಖಿನೋ ಭವಂತು ಎಂಬ ನಾಣ್ಣುಡಿಯಂತೆ ಎಲ್ಲರಿಗೂ ಆರೋಗ್ಯ ಭಾಗ್ಯ ಎಂಬ ಸರ್ಕಾರದ ಘೋಷಣೆಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು 4 ತಾಲ್ಲೂಕುಗಳನ್ನೊಳಗೊಂಡು, ಪ್ರಾಥಮಿಕ ಆರೋಗ್ಯ ಸೇವಾ ಸೌಲಭ್ಯಗಳನ್ನು ಗ್ರಾಮಾಂತರ ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ 4 ತಾಲ್ಲೂಕ್ ಆಸ್ಪತ್ರೆಗಳು, 48 ಪ್ರಾಥಮಿಕ ಆರೋಗ್ಯ ಕೇಂದ್ರಗಳು 2 ಸಮುದಾಯ ಆರೋಗ್ಯ ಕೇಂದ್ರಗಳು, 2 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಗ್ರಾಮೀಣ ಮಟ್ಟದಲ್ಲಿ 199 ಉಪ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ರೂಪಿಸಿರುವ ಆರೋಗ್ಯ ಸೇವಾ ಸೌಲಭ್ಯಗಳು ಈ ರೀತಿ ಇರುತ್ತವೆ.

ಕುಟುಂಬ ಕಲ್ಯಾಣ ಕಾರ್ಯಕ್ರಮ :–

ಕುಟಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಪ್ರತಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಾಹೆಯಲ್ಲಿ 4 ಶಿಬಿರಗಳನ್ನು ಏರ್ಪಡಿಸಿ ಅರ್ಹದಂಪತಿಗಳಿಗೆ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗಳನ್ನು ನೆರವೇರಿಸಲಾಗುತ್ತಿದೆ. ಪುರುಷರಿಗೆ ನೋ–ಸ್ಕಾಲ್ಪೆಲ್ ವ್ಯಾಸೆಕ್ಟಮಿ ಶಿಬಿರಗಳನ್ನು ಪ್ರತಿ ತಿಂಗಳಲ್ಲಿ ಏರ್ಪಡಿಸಿ ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಜಿಲ್ಲೆಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಕಾರ್ಯಕ್ರಮದಲ್ಲಿ 2020–21ನೇ ಸಾಲಿನಲ್ಲಿ ಸಂತಾನಹರಣ ಶಸ್ತ್ರ ಚಕಿತ್ಸೆಯ ಗುರಿ 5694 ಇದ್ದು 3271 ಫಲಾನುಭವಿಗಳಿಗೆ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಈ ಪೈಕಿ 10 ಪುರುಷ ಫಲಾನುಭವಿಗಳಿಗೆ ನೋ–ಸ್ಕಾಲ್‌ಪಾಲ್ ವ್ಯಾಸೆಕ್ಟಮಿ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ. ಮಹಿಳೆಯರಿಗೆ ವಂಕಿ ಅಳವಡಿಕೆಯಲ್ಲಿ ವಾರ್ಷಿಕ ಗುರಿ 5100 ಇದ್ದು, 1475 ಫಲಾನುಭವಿಗಳಿಗೆ ಯಶಸ್ವಿಯಾಗಿ ವಂಕಿ ಅಳವಡಿಸಲಾಗಿದೆ. ನಿರೋದ್ ವಿತರಣೆಯಲ್ಲಿ ವಾರ್ಷಿಕ ಗುರಿ 8250 ನಿಗದಿಯಾಗಿದ್ದು, 4070 ಸಾಧನೆಯಾಗಿರುತ್ತದೆ. ಅಂತೆಯೇ ನುಂಗುವ ಗುಳಿಗೆಯಲ್ಲಿ 6100 ಗುರಿ ನಿಗಧಿಯಾಗಿದ್ದು 2761 ರಷ್ಟು ಸಾಧನೆಯಾಗಿರುತ್ತದೆ.

ಲಸಿಕಾ ಕಾರ್ಯಕ್ರಮ :–

ಲಸಿಕಾ ಕಾರ್ಯಕಮ್ರದಡಿಯಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವು ಪ್ರತಿ ಗುರುವಾರ ಉಪ–ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರ/ತಾಲ್ಲೂಕು ಆಸ್ಪತ್ರೆಗಳಲ್ಲಿ ನಡೆಯುತ್ತದೆ. ಸದರಿ ಆರೋಗ್ಯ ಸಂಸ್ಥೆಗಳಿಗೆ ಮಕ್ಕಳನ್ನು ಕರೆತರುವ ಆಶಾ ಕಾರ್ಯಕರ್ತಎಯರಿಗೆ ರೂ.100/–ಗಳನ್ನು ಒಂದು ಅಧಿವೇಶನಕ್ಕೆ (ಸೆಷನ್) ಹಾಗೂ ಲಸಿಕಾ ಸಾಗಣೆದಾರರಿಗೆ ರೂ.75=00 ನೀಡಲಾಗುತ್ತಿದೆ.

ಸದರಿ ಕಾರ್ಯಕ್ರಮದಡಿಯಲ್ಲಿ 2020–21ನೇ ಸಾಲಿನಲ್ಲಿ ಪೆಂಟಾವಲೆಂಟ್/ಪೋಲಿಯೋ ಲಸಿಕೆ ಹಾಕಲು ವಾರ್ಷಿಕ ಗುರಿ 14823 ಇದ್ದು, 13946 ಮಕ್ಕಳಿಗೆ ಲಸಿಕೆ ಹಾಕಲಾಗಿದೆ. ಅದೇ ರೀತಿ ಬಿ.ಸಿ.ಜಿ. ಲಸಿಕೆ ಹಾಕಲು ವಾರ್ಷಿಕ ಗುರಿ 13612 ನಿಗದಿಯಾಗಿದ್ದು, 9538 ಸಾಧನೆಯಾಗಿರುತ್ತದೆ. ಅಂತೆಯೇ ಗರ್ಭಿಣಿಯರಿಗೆ ಟಿ.ಟಿ. ಲಸಿಕೆಗಳನ್ನು ನೀಡುವಲ್ಲಿ ವಾರ್ಷಿಕ ಗುರಿ 15512 ನಿಗದಿಯಾಗಿದ್ದು, 15786 ರಷ್ಟು ಸಾಧನೆಯಾಗಿರುತ್ತದೆ.

ಪಲ್ಸ್ ಪೋಲಿಯೋ ಕಾರ್ಯಕ್ರಮ :–

2020–21 ನೇ ಸಾಲಿನ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವು ಭಾರತ ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಅನುಷ್ಠಾನಗೊಳಿಸಲಾಯಿತು. ಜನವರಿ–2021ರ ಸುತ್ತಿನಲ್ಲಿ ಒಟ್ಟು 105379 ಮಕ್ಕಳಿಗೆ ಲಸಿಕೆ ಹಾಕುವ ಗುರಿಯನ್ನು ಹೊಂದಿದ್ದು, 113265 ರಷ್ಟು ಮಕ್ಕಳಿಗೆ ಲಸಿಕೆ ಹಾಕಲಾಗಿದೆ. ಸಾಧನೆ ಶೇ.107%.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮ:–

1 ಗ್ರಾಮೀಣ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ Village Health Sanitation and Natriation ಸಮಿತಿಗಳಿಗೆ ಒಟ್ಟು ರೂ 47,95,000/– ಗಳಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

2 157 ಉಪಕೇಂದ್ರ ಸಮಿತಿಗಳಿಗೆ ಒಟ್ಟು ರೂ 20,60,000/–ರೂ ಗಳಂತೆ ಅನುಧಾನ ಬಿಡುಗಡೆ ಮಾಡಲಾಗಿದೆ.

3 ಆರೋಗ್ಯ ರಕ್ಷಾ ಸಮಿತಿ. ಯ 48 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೂ 84,00,000/– 2 ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒಟ್ಟು ರೂ 11.33,000/– ಅನುದಾನ ನೀಡಿದೆ ಹಾಗೂ 4 ಸಾರ್ವಜನಿಕ ಆಸ್ಪತ್ರೆಗಳಿಗೆ 22,76,000/– ಅನುದಾನವನ್ನು ನೀಡಿದೆ.

ಜನನಿ ಸುರಕ್ಷಾಯೋಜನೆ:

ಈ ಕಾರ್ಯಕ್ರಮದಡಿಯಲ್ಲಿ ಎಸ್.ಸಿ/ಎಸ್.ಟಿ ಮತ್ತು ಬಿ.ಪಿ.ಲ್ ಕುಟುಂಬಕ್ಕೆ ಸೇರಿದ ಬಾಣಂತಿ ಮಹಿಳಾ ಫಲಾನುಭವಿಗಳಿಗೆ ನಗರ ಪ್ರದೇಶದ ಆಸ್ಪತ್ರೆಗಳಲ್ಲಿ ಹೆರಿಗೆಯಾದಲ್ಲಿ ಪ್ರತಿ ಫಲಾನುಭವಿಗೆ ರೂ.600/– ರಂತೆ ಮತ್ತು ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ಹೆರಿಗೆಯಾದಲ್ಲಿ ಪ್ರತಿ ಫಲಾನುಭವಿಗೆ ರೂ.700/– ಹಾಗೂ ಮನೆಯಲ್ಲಿ ಹೆರಿಗೆಯಾದಲ್ಲಿ ಪ್ರತಿ ಫಲಾನುಭವಿಗೆ ರೂ.500/– ಗಳಂತೆ ನೀಡಲಾಗುವುದು. ಈ ಯೋಜನೆಯಡಿಯಲ್ಲಿ 2020–21 ನೇ ಸಾಲಿನಲ್ಲಿ ಒಟ್ಟು 5986 ಫಲಾನುಭಿಗಳಿಗೆ ರೂ 36,62,300/– ರೂ ಗಳನ್ನು ವಿತರಿಸಲಾಗಿದೆ.

ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮ (ಆರ್.ಬಿ.ಎಸ್.ಕೆ.):–

ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮದಡಿಯಲ್ಲಿ ಕ್ರಿಯಾ ಯೋಜನೆ ರೂಪಿಸಿರುವಂತೆ 1 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಲಾಯಿತು ಕೆಲವು ಮಕ್ಕಳಿಗೆ ವಿಶೇಷ ತಜ್ಞರಿಂದ ಆರೋಗ್ಯ ತಪಾಸಣೆ ಮಾಡಲಾಯಿತು ಜಿಲ್ಲೆಯಲ್ಲಿ ಒಟ್ಟು 1233 ಪ್ರಾಥಮಿಕ ಶಾಲೆಗಳು ಮತ್ತು 1230 ಅಂಗನವಾಡಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು ಮಕ್ಕಳ ಸಂಖ್ಯೆ: 107637 ಇದ್ದು, ಈ ಪೈಕಿ ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮದಡಿಯಲ್ಲಿ 98557 ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಮಾಡಲಾಗಿದೆ. ಶೇ% 92% ಆಗಿರುತ್ತದೆ 9080 ಉಳಿದ ಮಕ್ಕಳನ್ನು 2021–22 ನೇ ಸಾಲಿನಲ್ಲಿ ಆರೋಗ್ಯ ತಪಾಸಣೆ ಮಾಡಲಾಗುವುದು.

ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ:–

ಜಿಲ್ಲೆಯಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನ (ಎನ್,ಟಿ,ಇ,ಪಿ) ಕಾರ್ಯಕ್ರಮವು ಜಾರಿಗೆ ಬಂದಿರುತ್ತದೆ. ಸದರಿ ಕಾರ್ಯಕ್ರಮದಂತೆ ಜಿಲ್ಲೆಯನ್ನು 4 ಕ್ಷಯರೋಗ ಘಟಕಗಳನ್ನಾಗಿ ವಿಭಜಿಸಲಾಗಿದೆ. ಸರಾಸರಿ 2.5 ಲಕ್ಷಜನಸಂಖ್ಯೆಗೆ 1 ರಂತೆ ಕ್ಷಯರೋಗ ಘಟಕಗಳನ್ನು ಗುರ್ತಿಸಲಾಗಿದೆ. ನಮ್ಮ ಜಿಲ್ಲೆಯಲ್ಲಿ 39 ಕ್ಷಯರೋಗ ಸೂಕ್ಷ್ಮದರ್ಶಕ ಕೇಂದ್ರಗಳನ್ನು ಗುರ್ತಿಸಲಾಗಿದೆ.

ಸದರಿ ಕಾರ್ಯಕ್ರಮದಲ್ಲಿ 2020–21 ನೇ ಸಾಲಿನಲ್ಲಿ 1104 ರೋಗಿಗಳ ಪತ್ತೆ ಹಚ್ಚುವ ಗುರಿ ಇದ್ದು 737 ರಷ್ಟು ಸಾಧನೆಯಾಗಿದೆ ಅಂತೆಯೇ ಕಫ ಪರೀಕ್ಷೆಯಲ್ಲಿ ವಾರ್ಷಿಕ ಗುರಿ 11064 ನಿಗದಿಯಾಗಿದ್ದು 7253 ರಷ್ಟು ಸಾಧನೆಯಾಗಿರುತ್ತದೆ. Cured 74% ಸಾಧನೆಯಾಗಿರುತ್ತದೆ. MDR ಕ್ಷಯರೋಗಿಗಳು On hand MDR Cases 28 ಇರುತ್ತದೆ. ಹಾಗೂ ಮಾರ್ಚ್– 2018 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ CBNAAT ಯಂತ್ರವನ್ನು ಅಳವಡಿಸಲಾಗಿದೆ. ಪ್ರತಿ ತಿಂಗಳು 250 ರಷ್ಟು ಕಫ ಪರೀಕ್ಷೆ ನಡೆಸಲಾಗೂವುದು. ಡಿಸೆಂಬರ್–20 ರಲ್ಲಿ ಹೊಸಕೋಟೆ ಹಾಗೂ ನೆಲಮಂಗಲ ತಾಲ್ಲೂಕಿನಲ್ಲಿ TRUNAAT ಯಂತ್ರವನ್ನು ಅಳವಡಿಸಲಾಗಿದೆ. ಪ್ರತಿ ತಿಂಗಳು 125 ರಷ್ಟು ಕಫ ಪರೀಕ್ಷೆ ನಡೆಸಲಾಗೂವುದು.

ನಿಕ್ಷಯ ಪೋಷಣೆ ಯೋಜನೆ ಕಾರ್ಯಕ್ರಮದಡಿಯಲ್ಲಿ ಕ್ಷಯರೋಗಿಗಳಿಗೆ ಪೌಷ್ಠಿಕ ಆಹಾರಕ್ಕಾಗಿ ಮಾಸಿಕ 500 ರೂಗಳನ್ನು ನೀಡಲಾಗುವುದು. 2020 ನೇ ಸಾಲಿನಲ್ಲಿ ಒಟ್ಟು 631 ಫಲಾನುಭವಿಗಳಿಗೆ 1689500/– ರೂಗಳನ್ನು ಕ್ಷಯರೋಗಿಗಳಿಗೆ ಪೌಷ್ಠಿಕ ಆಹಾರಕ್ಕಾಗಿ ನೀಡಲಾಗಿರುತ್ತದೆ.

ಮಲೇರಿಯಾ ನಿಯಂತ್ರಣಕಾರ್ಯಕ್ರಮ :–

ಮಲೇರಿಯಾ ರೋಗವು ಆರೋಗ್ಯವಂತನಿಗೆ ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯ ಮೂಲಕ ಹರಡುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ಮೊದಲಿಗೆರೋಗ ಹರಡುವ ಸೊಳ್ಳೆಗಳನ್ನು ನಾಶಗೊಳಿಸುವುದು ಮತ್ತು ಆರೋಗ್ಯವಂತನನ್ನು ರೋಗಕ್ಕೆ ತುತ್ತಾಗದಂತೆರಕ್ಷಿಸುವುದು ಹಾಗೂ ಮನೆಯ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳುವುದು, ರೋಗಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಿ ರೋಗದಿಂದ ಮುಕ್ತನನ್ನಾಗಿ ಮಾಡುವುದು,(ಮಲೇರಿಯಾ ಪ್ಯಾರಸೈಟ್).

ಈ ನಿಟ್ಟಿನಲ್ಲಿ ಇಲಾಖೆಯ ಆರೋಗ್ಯ ಕಾರ್ಯಕರ್ತರು ಸಮೀಕ್ಷಾಕಾರ್ಯ ಕೈಗೊಂಡು, ಮನೆ ಮನೆಗೆ ಭೇಟಿ ನೀಡಿಜ್ವರ ಕಾಣಿಸಿಕೊಂಡವರ ರಕ್ತಲೇಪನ ತೆಗೆದುಅವರಿಗೆ ಮಾತ್ರೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಅಂತೆಯೇ ಆಸ್ಪತ್ರೆಗಳಲ್ಲಿಯೂ ಸಹಾ ಚಿಕಿತ್ಸೆ ನೀಡಲಾಗುವುದು.2020 ನೇ ವರ್ಷದಲ್ಲಿ 132624 ರಕ್ತ ಲೇಪನ ಸಂಗ್ರಹಣಾ ಗುರಿಇದ್ದು, 1112233 ರಷ್ಟು ಸಾಧನೆಯಾಗಿದೆ. 03 ದೃಡಪಟ್ಟ ಮಲೇರಿಯಾ ಪ್ರಕರಣಗಳು ದಾಖಲಾಗಿ ಅವರುಗಳಿಗೆ ಸಮರ್ಪಕವಾಗಿ ಸಂಪೂರ್ಣವಾಗಿ ತೀವ್ರಚಿಕಿತ್ಸೆ ನೀಡಲಾಗಿದೆ.

2020ನೇ ಸಾಲಿನಲ್ಲಿ 9 ದೃಡಪಟ್ಟ ಡೆಂಗ್ಯೂ ಪ್ರಕರಣಗಳು ವರದಿಯಾಗಿರುತ್ತದೆ. ದೃಡಪಟ್ಟ 8 ಚಿಕನ್‌ಗುನ್ಯಾ ಪ್ರಕರಣಗಳು ವರದಿಯಾಗಿರುತ್ತದೆ. ಈ ಪೈಕಿ ಯಾವುದೇ ಸಾವು ಸಂಭವಿಸಿರುವುದಿಲ್ಲ.

ಸಾಂಕ್ರಾಮಿಕ ರೋಗಗಳ ಕಾರ್ಯಕ್ರಮ :–

ಬೆಂಗಳೂರು ಗ್ರಾಮಾಂತರ ಜಿಲ್ಲಾ ವರದಿ									
ಕ್ರ. ಸಂ	ಸಾಂಕ್ರಾಮಿಕ ರೋಗಗಳು	ಡಿಸೆಂಬರ್–2020				ಡಿಸೆಂಬರ್–2019			
		ಪ್ರಸಕ್ತ ಮಾಹೆ		ಒಟ್ಟು ಜನವರಿ–ಡಿಸೆಂಬರ್		ಪ್ರಸಕ್ತ ಮಾಹೆ		ಒಟ್ಟು ಜನವರಿ–ಡಿಸೆಂಬರ್	
		ಹರಡಿದ್ದು	ಮರಣ	ಹರಡಿದ್ದು	ಮರಣ	ಹರಡಿದ್ದು	ಮರಣ	ಹರಡಿದ್ದು	ಮರಣ
1	ಕರಳುಬೇನೆ	50	0	369	0	119	0	3264	119
2	ಕಾಲರಾ	0	0	0	0	0	0	0	0
3	ಅರಿಶಿನ ಕಾಮಾಲೆ	0	0	0	0	0	0	0	0
4	ವಿಷಮಶೀತಜ್ವರ	51	0	387	0	168	0	3179	0
5	ಮಂಗನ ಕಾಯಿಲೆ	0	0	0	0	0	0	0	0
6	ಹಂದಿಗೋಡು	0	0	0	0	0	0	0	0
7	ಲೆಪ್ಟೋಸ್ಪೈರೋಸಿಸ್	0	0	0	0	0	0	0	0
8	ನಾರು ಹಣ್ಣು	0	0	0	0	0	0	0	0
9	ಪ್ಲೇಗು	0	0	0	0	0	0	0	0
10	ನಾಯಿಕಡಿತ *	760	0	1529	0	612	0	7942	0
11	ಹಾವುಕಡಿತ	5	0	13	0	3	0	87	0
12	ಅಂಥ್ರಾಕ್ಸ	0	0	0	0	0	0	0	0

(ರೂ.ಲಕ್ಷಗಳಲ್ಲಿ)

ದಾಸ್ತಾನು ವಿವರ	ಹಿಂದಿನ ಮೊತ್ತ	ಪಡೆದಿದ್ದು	ಒಟ್ಟು ದಾಸ್ತಾನು	ಖರ್ಚು	ಉಳಿದ ದಾಸ್ತನು
	OB	**RECEIPT**	**Total**	**Exp**	**Balance**
ಎ.ಆರ್.ವಿ ರ್ಯಾಬೀಪೂರ್	362	469	831	373	458
ಎ.ಎಸ್.ವಿ	298	05	303	05	298

ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ :–

ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಲ್ಲಿ ಮಾರ್ಪಡಿತ ಕುಷ್ಠರೋಗ ನಿವಾರಣಾ ಆಂಧೋಲನದಲ್ಲಿ ರೋಗಿಗಳು ಸ್ವಯಂ ಪ್ರೇರಿತರಾಗಿ ವರದಿ ಕೇಂದ್ರಗಳಿಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದಾರೆ. 2020–21ನೇ ಸಾಲಿನಲ್ಲಿ 17 ರೋಗಿಗಳನ್ನು ಪತ್ತೆಹಚ್ಚಲಾಗಿದೆ. ಅಂತೆಯೇ 39 ರೋಗಿಗಳನ್ನು ಗುಣಪಡಿಸಲಾಗಿದೆ. ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಕುಷ್ಠರೋಗಿಗಳಿಗೆ ಚಪ್ಪಲಿ ಮತ್ತು ಕಿಟ್‌ಗಳನ್ನು ಅಂಗವಿಕಲತೆ ತಡೆಗಟ್ಟುವ ವೈದ್ಯಾಕೀಯ ಪುರ್ನವಸತಿ ಶಿಬಿರ (ಡಿಪಿಎಂಆರ್ ಕ್ಯಾಂಪ್)ಗಳನ್ನು ಮಾಡಿ ವಿತರಿಸಲಾಗಿದೆ. ಪಿ.ಬಿ ಮತ್ತು ಎಂ.ಬಿ ಮಾತ್ರೆಗಳನ್ನು ಕುಷ್ಠರೋಗಿಗಳಿಗೆ ವಿತರಿಸಲಾಗುತ್ತದೆ. ಜಿಲ್ಲಾವಾರು ವೈದ್ಯಾಧಿಕಾರಿಗಳಿಗೆ ಹಾಗೂ ಆರೋಗ್ಯ ಸಿಬ್ಬಂದಿಗಳಿಗೆ ಮತ್ತು ಆಶಾಕಾರ್ಯಕರ್ತೆಯರಿಗೆ ಕುಷ್ಠರೋಗದ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ. ಪ್ರತಿ ವರ್ಷವು 5 ವರ್ಷದಲ್ಲಿ ಕಂಡುಬಂದಿರುವಂತಹ ಕುಷ್ಠರೋಗಿಗಳ ಹಳ್ಳಿಯನ್ನು ಗುರುತಿಸಿ ಸಕ್ರಿಯ ಕುಷ್ಠರೋಗ ಪತ್ತೆ ಮತ್ತು ನಿಯಮಿತ ಸಮೀಕ್ಷೆಯನ್ನು ವರ್ಷಕೊಮ್ಮೆ ಮಾಡಲಾಗುತ್ತದೆ.










ಅಂಧತ್ವ ನಿವಾರಣಾ ಕಾರ್ಯಕ್ರಮ :–



ಸದರಿ ಕಾರ್ಯಕ್ರಮದಲ್ಲಿಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಐ.ಓ.ಎಲ್. ಅಳವಡಿಕೆಯ ಸುಲಭಹಾಗೂ ಸುರಕ್ಷಿತ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.ಈ ಕಾರ್ಯಕ್ರಮದಡಿ 2020–21ಸಾಲಿನಲ್ಲಿ 1 ರಿಂದ 10 ನೇತರಗತಿಯಲ್ಲಿ ಓದುತ್ತಿರುವ 3000 ಮಕ್ಕಳಿಗೆ ಕಣ್ಣಿನತಪಾಸಣೆ ಮಾಡಲಾಗುತ್ತಿದೆ.ಗ್ರಾಮೀಣಮಟ್ಟದಲ್ಲಿ ಕಣ್ಣಿನ ತಪಾಸಣೆ ಮಾಡಲಾಗಿದ್ದು, ಇದರಲ್ಲಿ 1,936 ಮಕ್ಕಳಿಗೆ ಉಚಿತ ಕನ್ನಡಕಗಳು ವಿತರಣೆ ಮಾಡಲಾಗಿದೆ. ಗ್ರಾಮೀಣ ಮಟ್ಟದಲ್ಲಿಕಣ್ಣಿನ ಪೊರೆಇರುವ ಫಲಾನುಭವಿಗಳಿಗೆ ಉಚಿತವಾಗಿ ನುರಿತ ವೈದ್ಯರುಗಳಿಂದ ಬೆಂಗಳೂರು ಗ್ರಾಮಾಂತರಜಿಲ್ಲೆಯ ಆಸ್ಪತ್ರೆಗಳಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ನಿಗದಿಪಡಿಸಿದ ದಿನಾಂಕಗಳಂದು ಮಾಡಲಾಗುತ್ತಿದೆ. ಈ ದಿಸೆಯಲ್ಲಿ ಗ್ಲೋಬಲ್ ಐ ಫೌಂಟೇಷನ್, ಲಯನ್ಸ್ ಐ ಆಸ್ಪತ್ರೆ, ಪ್ರಾಜೆಕ್ಟ್‌ದೃಷ್ಟಿ, ಎಂ.ವಿ.ಜೆ ಮೆಡಿಕಲ್‌ಕಾಲೇಜ್ ಹೊಸಕೋಟೆ,ಶಂಕರ್ ಐ ಆಸ್ಪತ್ರೆ, ದೃಷಿ ಐ ಆಸ್ಪತ್ರೆ, ಶ್ರದ್ದ ಐಆಸ್ಪತ್ರೆ, ಇವರ ವತಿಯಿಂದಲೂ ಸಹ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವುದು. 2020–21ನೇ ಸಾಲಿನಲ್ಲಿ ಜಿಲ್ಲೆಗೆ 606 ರಷ್ಟು ಫಲಾನುಭವಿಗಳಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಲಾಗಿದೆ. ಹಾಗೂ ವಯಸ್ಸಾದ ವಯೋವೃದ್ದರಿಗೆ ಹತ್ತಿರದ ದೃಷ್ಟಿ ದೋಷದಿಂದ ಬಳಲುತ್ತಿರುವವರಿಗೆ 8,255 ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಗಿದೆ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ಪ್ರಾ.ಆ.ಕೇಂದ್ರ ಎರಡು Vision Center ನಿಂದ ಕಣ್ಣಿನ್ನು ಪರಿಕ್ಷೀಸಲು ಎರಡು ತಾಲೂಕಿನ ನೇತ್ರಾಧಿಕಾರಿಗಳಿಗೆ ಸಲಕರಣೆಗಳನ್ನು ನೀಡಲಾಗಿರುತ್ತದೆ. ಹಾಗೂ ದಿನಾಂಕ:07/03/2021 ರಿಂದ 13/03/2021 ರವರೆಗೆ ವಿಶ್ವ ಗ್ಲೋಕೋಮ ಸಪ್ತಾಹ ದಿನಾಚಣೆಯನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಕಣ್ಣನ್ನು ಪರಿಕ್ಷೀಸಿಕೋಳ್ಳಲು ಮಾಹಿತಿಯನ್ನು ನೀಡಲಾಗುತ್ತದೆ.

Vision Center



NGOS CAMP



ರಾಷ್ಟ್ರೀಯ ಮಾನಸಿಕ ಆರೋಗ್ಯಕಾರ್ಯಕ್ರಮ:–

ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 2020–21 ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಮಾನಸಿಕ ಆರೋಗ್ಯಕಾರ್ಯಕ್ರಮದ ಶಿಬಿರಗಳನ್ನು ನಿಗದಿತ ದಿನಗಳಂದು ಎಲ್ಲಾತಾಲ್ಲೂಕು ಆಸ್ಪತ್ರೆಗಳಲ್ಲಿ (ಪ್ರತಿ ಮಂಗಳವಾರ ಹಾಗು ಗುರುವಾರ ಮನೋಚೈತನ್ಯಕ್ಲಿನಿಕ್) ಸಮುದಾಯಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕಆರೋಗ್ಯ ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೃಂದದ ಸಿಬ್ಬಂದಿಗಳಿಗೆ ಹಾಗೂ ವಿವಿಧ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರಿಗೆ 1 ದಿನದ ಕಾರ್ಯಗಾರವನ್ನು ಹಮ್ಮಿಕೊಂಡಿದ್ದು ಈ ಕಾರ್ಯಗಾರದಲ್ಲಿ ಮಾನಸಿಕ ಖಾಯಿಲೆಯ ಲಕ್ಷಣಗಳು, ಲಭ್ಯವಿರುವ ಚಿಕಿತ್ಸಾ ಕ್ರಮಗಳು, ಒತ್ತಡ ನಿರ್ವಹಣೆ, ಜೀವನಕೌಶಲ್ಯ, ಆತ್ಮಹತ್ಯೆತಡೆಗಟ್ಟುವ ಬಗ್ಗೆ ಹಾಗೂ ಇತರೆ ಸೌಲಭ್ಯಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು.

ಅದೇ ರೀತಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಶಾಲಾ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜೀವನ ಕೌಶಲ್ಯಗಳ ತರಬೇತಿ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಅರಿವು ಹಾಗೂ ತಿಳುವಳಿಕೆಯನ್ನು ನೀಡಲಾಗಿರುತ್ತದೆ. ತಾಲ್ಲೂಕು ಆಪ್ತ ಸಮಾಲೋಚಕರಿಂದ ವಾರದಲ್ಲಿ ಒಂದು ದಿನ ಶಾಲಾ/ ಕಾಲೇಜು, ಒಂದು ದಿನ ಅಲ್ಲದೆ ಕೊಳಚೆ ಪ್ರದೇಶಗಳಿಗೆ ಹಾಗೂ ಒಂದು ದಿನ ಕಾರ್ಮಿಕರು ಕರ್ತವ್ಯ ನಿರ್ವಹಿಸುವ ಕಾರ್ಖಾನೆಗಳಿಗೆ ಭೇಟಿ ನೀಡಿ ಅವರುಗಳಿಗೆ ಮಾನಸಿಕ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಮತ್ತು ಸಮಾಲೋಚನೆಯನ್ನು ಮಾಡಲಾಗಿರುತ್ತದೆ. ಈ ಎಲ್ಲಾ ಕಾರ್ಯಕ್ರಮ ಅಲ್ಲದೇ ಕೆಳಕಂಡ ಸದರಿ ಐ.ಇ.ಸಿ ಕಾರ್ಯಕ್ರಮಗಳಾದ 26ನೇ ಜೂನ್‌ರಂದು "International Day Against Drug Abuse & Illicit Trafficking" ದಿನಾಚರಣೆ 10ನೇ ಸೆಪ್ಟೆಂಬರ್‌ರಂದು ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚಾರಣೆ 10ನೇ ಆಕ್ಟೋಬರ್ ರಂದು ವಿಶ್ವ ಮಾನಸಿಕ ಆರೋಗ್ಯ ದಿನಾಚಾರಣೆ

ಜಿಲ್ಲಾ/ ತಾಲ್ಲೂಕು/ ಪ್ರಾ. ಆ.ಕೇಂದ್ರಗಳಲ್ಲಿ ಸಾರ್ವಜನಿಕರಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ರೇಡಿಯೋಟಾಕ್ ಹಾಗೂ ಇತರೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇ–ಆಸ್ಪತ್ರೆ:–

ಬೆಂಗಳೂರು ಗ್ರಾಮಾಂತರ ಜಿಲ್ಲೆಯ 04 ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳ ದಾಖಲಾತಿಗಳನ್ನು ಗಣಕೀಕೃತಗೊಳಿಸಲಾಗುವುದು. ಸದರಿ ರೋಗಿಗಳನ್ನು ಮೊಬೈಲ್ ಸಂಖ್ಯೆ, ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಕಾರ್ಡ್, ಪಡಿತರಚೀಟಿ, ಆಧಾರ್‌ಕಾರ್ಡ್ ಗಳನ್ನು ಪಡೆದು ನೊಂದಾಯಿಸಿಕೊಳ್ಳಲಾಗುವುದು. ಆಸ್ಪತ್ರೆಯಲ್ಲಿ ರೋಗಿಗಳು ಕಾಯುವ ಸಮಯವನ್ನು ಕಡಿಮೆಗೊಳಿಸಲು ಮತ್ತು ಸರ್ಕಾರದ ಯೋಜನೆಯ ಲಾಭ ಪಡೆಯಲು ಗಣಕಯಂತ್ರದಲ್ಲಿ ನೊಂದಣಿ ಮಾಡಲಾಗುತ್ತದೆ.

2020–21 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿ ಪಡಿಸಿರುವ ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ಒಟ್ಟಾರೆ ಅನುದಾನದ ವಿವರ

(ಲಕ್ಷ ರೂ.ಗಳಲ್ಲಿ)

ಮುಖ್ಯ ಲೆಕ್ಕ ಶೀರ್ಷಿಕೆ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ
2210 ವೈದ್ಯಕೀಯ ಮತ್ತು ಜನಾರೋಗ್ಯ	3105.46	2957.80	2697.38
2211 ಕೇಂದ್ರ ಪುರಸ್ಕೃತ ಯೋಜನೆ	1220.28	1746.80	1350.92
2210–(ತಾ.ಪಂ.)	93.86	93.86	88.03
ಒಟ್ಟು	**4419.60**	**4798.46**	**4136.33**

2020–21 ನೇ ಸಾಲಿನಲ್ಲಿ ಕಟ್ಟಡಗಳ ದುರಸ್ಥಿ ಮತ್ತು ಔಷದಿ ಖರೀದಿಗೆ ನಿಗದಿಯಾದ ಅನುದಾನದ ವಿವರ

ಕ್ರ.ಸ	ಲೆಕ್ಕ ಶೀರ್ಷಿಕೆ	ನಿಗಧಿಯಾದ ಅನುದಾನ (ಲಕ್ಷಗಳಲ್ಲಿ)	ಖರ್ಚಾದ ಮೊತ್ತ (ಲಕ್ಷಗಳಲ್ಲಿ)
1	2210–00–101–0–36 ಯೋಜನೆ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ	70.00	66.85
2	2210–00–103–0–43 ಯೋಜನೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯಕೀಯ ಚಿಕಿತ್ಸೆ ಉಪಕರಣಗಳು/ ಸಲಕರಣೆಗಳ ಖರೀದಿ	50.00	49.70

ಕ್ರ.ಸ	ಲೆಕ್ಕ ಶೀರ್ಷಿಕೆ	ನಿಗಧಿಯಾದ ಅನುದಾನ (ಲಕ್ಷಗಳಲ್ಲಿ)	ಖರ್ಚಾದ ಮೊತ್ತ (ಲಕ್ಷಗಳಲ್ಲಿ)
3	2210–00–103–0–44 ಯೋಜನೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯಕೀಯಚಿಕಿತ್ಸೆ, ಉಪಕರಣಗಳು/ ಸಲಕರಣೆಗಳ ಖರೀದಿ	15.00	14.99
4	2210–00–102–0–40 ಯೋಜನೆ ಸಲಕರಣೆಗಳು ಮತ್ತು ಪಿಠೋಪಕರಣಗಳ ದುರಸ್ತಿ	10.00	9.71
5	*2210–00–106–0–53(ಯೋಜನೆ)* ಯೋಜನೆ ಕುಟುಂಬ ಕಲ್ಯಾಣ ಕಾರ್ಯಕ್ರಮಕ್ಕೆ ಔಷಧಿ ಪೂರೈಕೆಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ	10.00	9.96
	ಒಟ್ಟು	**155.00**	**151.21**

2020–21 ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಮಾಹಿತಿ

ಆಸ್ಪತ್ರೆಗಳ ಹಂತಗಳು	ಆರೋಗ್ಯ ಸಂಸ್ಥೆಗಳ ಸಂಖ್ಯೆ	ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳ ಮೇಲಿನ ಪ್ರಗತಿ.		
		ಸಿ.ಟಿ.ಎಫ್ ಟೈಅಪ್ ಹೆಚ್.ಸಿ.ಎಫ್ ಸಂಖ್ಯೆ	ಲಿಕ್ವಿಡ್ ವೇಸ್ಟ್ ಡಿಸ್‌ಇನ್ಫೆಕ್ಷನ್ ಯುನಿಟ್ ಪೂರ್ಣಗೊಂಡಿದೆ	ಡೀಪ್ ಬ್ಯುರಿಯಲ್ & ಶಾರ್ಪ್ ಪಿಟ್ ಪೂರ್ಣಗೊಂಡಿರುವುದು
ಜಿಲ್ಲಾ ಆಸ್ಪತ್ರೆ	0	0	0	ಸಿ.ಟಿ.ಎಫ್ ಟೈಅಪ್ ಆಗಿರುವುದರಿಂದ ಎಲ್ಲಿಯೂ ಶಾರ್ಪ್ ಪಿಟ್ ಬಳಕೆಮಾಡುತ್ತಿಲ್ಲ.
ತಾಲ್ಲೂಕು ಮಟ್ಟದ ಆಸ್ಪತ್ರೆ	4	4	4	
ಸಮುದಾಯ ಆರೋಗ್ಯ ಕೇಂದ್ರ	2	2	1	
ಪ್ರಾಥಮಿಕ ಆರೋಗ್ಯ ಕೇಂದ್ರ	48	48	32	
ನಗರ ಪ್ರಾಥಮಿಕ ಆರೋಗ್ಯ ಕೇಂದ್ರ	2	2	1	

10. ಆಯುಷ್ ಇಲಾಖೆ

ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ವಿಭಾಗವು ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆಯಿಂದ 1971 ರಲ್ಲಿ ಪ್ರತ್ಯೇಕಗೊಂಡು **ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆ ಎಂದು ನಾಮಕರಣಗೊಂಡು ಪ್ರತ್ಯೇಕ ಇಲಾಖೆಯಾಗಿ** ಕಾರ್ಯಾರಂಬಿಸಿತು. ಕೇಂದ್ರದಲ್ಲಿಯು ಸಹ **"**ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ**"** ಎಂದು ಪ್ರತ್ಯೇಕ ಇಲಾಖೆಯಾಗಿ ಮಾರ್ಚ್–1995ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ನವೆಂಬರ್–2003ರಲ್ಲಿ ಸದರಿ ಇಲಾಖೆಯನ್ನು ಆಯುರ್ವೇದ, ಯೋಗ & ನ್ಯಾಚುರೋಪತಿ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ (**"ಆಯುಷ್"**) ಇಲಾಖೆಯೆಂದು ಮರು ನಾಮಕರಣಗೊಳಿಸಲಾಯಿತು.

ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರಗಳು ***"ರಾಷ್ಟ್ರೀಯ ಆರೋಗ್ಯ ಅಭಿಯಾನ"*** ಮತ್ತು ***"ರಾಷ್ಟ್ರೀಯ ಆಯುಷ್ ಅಭಿಯಾನದ"*** ಮೂಲಕ ಆಯುಷ್ ಪದ್ಧತಿಯನ್ನು ಮುಖ್ಯ ವಾಹಿನಿಗೆ ತರಲುವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆಧುನಿಕ ಜೀವನ ಶೈಲಿಯಿಂದ ಉಂಟಾಗುವ ಆರೋಗ್ಯದ ಸಮಸ್ಯೆಗಳು ಇಂದು ಸರ್ವರಿಗೂ ಆರೋಗ್ಯವನ್ನು ಒದಗಿಸವ ನಿಟ್ಟಿನಲ್ಲಿ ತಲೆನೋವಾಗಿ ಪರಣಮಿಸಿವೆ. ಆಯುಷ್ ಪದ್ಧತಿಗಳಲ್ಲಿ ಸಹಸ್ರಾರು ವರುಷಗಳಿಂದ ಹೇಳಲಾದ ಜೀವನ ಕ್ರಮ, ಆಹಾರ ಸೇವನಾ ಕ್ರಮ ಹಾಗೂ ಔಷಧಿಗಳು ಈ ಸಮಸ್ಯಯನ್ನು ನಿವಾರಿಸಿಲು ಪ್ರಮುಖ ಪಾತ್ರವಹಿಸಲಿದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಆಯುಷ್ ಇಲಾಖೆಯು ಆರೋಗ್ಯ ಮತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ***ಆಯುರ್ವೇದ, ಯೋಗ& ಪ್ರಕೃತಿ ಚಿಕಿತ್ಸೆ ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ*** ಎಂಬ ಐದು ವಿವಿಧ ಪದ್ಧತಿಗಳ ಮುಖಾಂತರ ರಾಜ್ಯದ್ಯಂತ ಸೇವೆ ಸಲ್ಲಿಸುತ್ತಿದೆ.

ಆಯುಷ್ ಇಲಾಖೆಯ ಮುಖ್ಯ ಉದ್ದೇಶಗಳು:

- ಆಯುಷ್ ವೈದ್ಯಪದ್ಧತಿಗಳ ಮೂಲಕ ಸಾರ್ವಜನಿಕರಿಗೆ ಆರೋಗ್ಯ ಸೇವೆ ನೀಡುವದು.
- ಆಯುಷ್‌ವೈದ್ಯಪದ್ಧತಿಗಳ ಶಿಕ್ಷಣ ಸೇವೆಯನ್ನು ನೀಡುವುದು,
- ಆಯುಷ್‌ವೈದ್ಯಪದ್ಧತಿಗಳ ಸಂಶೋಧನೆಗಳಿಗೆಉತ್ತೇಜಿಸುವುದು.
- ಔಷಧಿ ಸಸ್ಯಗಳನ್ನು ಬೆಳೆಸಲು ಉತ್ತೇಜನ ನೀಡುವುದು ಹಾಗೂ
- ಆಯುಷ್ ವೈದ್ಯಪದ್ಧತಿಗಳ ಜನ ಸಾಮಾನ್ಯರಿಗೆ ಅರಿವು ಮೂಡಿಸುವದು.

ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಮತ್ತು ಆರೋಗ್ಯ ಕಾಪಾಡಿಕೊಳ್ಳಲು ಆಯುಷ್ ಪದ್ಧತಿಗಳು ಸಮಗ್ರವಾದ ವಿಧಾನಗಳಾಗಿರುವದರಿಂದ ಈ ಪದ್ಧತಿಗಳನ್ನು ಜನಪ್ರಿಯಗೊಳಿಸಲು ಹಾಗೂ ಪುನರುಜ್ಜೀವನಗೊಳಿಸಲು, ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು, ಮಾನವ ಸಂಪನ್ಮೂಲವನ್ನು ಹಾಗೂ ತರಬೇತಿ ನೀಡಿ ಅಭಿವೃದ್ಧಿ ಪಡಿಸಬೇಕಾಗಿದೆ.

ಆಯುಷ್ ಪದ್ಧತಿಯುಜನ ಸಾಮಾನ್ಯರು ಸುಲಭವಾಗಿ ಒಪ್ಪಿಕೊಳ್ಳುವ ಪದ್ಧತಿಯಾಗಿದೆ. ಮುಖ್ಯವಾಗಿ ಗ್ರಾಮೀಣ ಭಾಗದ ಜನರು ಇದನ್ನು ಸಾಮಾಜಿಕವಾಗಿ ಒಪ್ಪಿಕೊಂಡ ಪದ್ದತಿಯಾಗಿದೆ. ಬೇರೆ ಪದ್ಧತಿಗಳಿಗೆ ಹೋಲಿಸಿದ್ದಲ್ಲಿ ಇದು ಸುರಕ್ಷಿತವಾಗಿದ್ದು, ಪರಿಣಾಮಕಾರಿ ಹಾಗೂ ಜನರಿಗೆ ಸುಲಭವಾಗಿ ಕೈಗೆಟುವಂತಿದೆ. ಆಯುಷ್ ಪದ್ಧತಿಯು ಔಷಧಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಂದ ತಯಾರಿಸಬಹುದಾಗಿದೆ. ಜನರಿಗೆ ಹಾಗೂ ಮುಖ್ಯವಾಗಿ ರೋಗಿಗಳಿಗೆ ಸುಲಭವಾಗಿ ದೊರೆಯುವಂತೆ ಮಾಡಬಹುದಾಗಿದೆ.

ಆಯುಷ್ ಪದ್ಧತಿಯ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳು ಗ್ರಾಮ, ತಾಲ್ಲೂಕ ಮತ್ತು ಜಿಲ್ಲಾ ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಚಿಕಿತ್ಸಾಲಯಗಳಲ್ಲಿ ಹೊರರೋಗಿ ಚಿಕಿತ್ಸೆಯನ್ನು ಮತ್ತು ಆಸ್ಪತ್ರೆಯಲ್ಲಿ ಹೊರರೋಗಿ & ಒಳರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತದೆ.

ಆಸ್ಪತ್ರೆ/ಚಿಕಿತ್ಸಾಲಯಗಳ ವೈದ್ಯಾಧಿಕಾರಿಗಳು **ಮನೆಮದ್ದು,** ಆಯುಷ್‌ಅರಿವು, ಆಯುಷ್ ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು, ಉಚಿತಆರೋಗ್ಯ ಶಿಬಿರಗಳನ್ನು ವಿವಿಧ ಪ್ರದೇಶಗಳಲ್ಲಿ ಆಯೋಜಿಸಿ ಜನರಿಗೆಆರೋಗ್ಯದ ಬಗ್ಗೆ ತಿಳುವಳಿಕೆ ನೀಡುತ್ತಾರೆ. ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದಆಯುಷ್ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಆಯುಷ್‌ನ ಪ್ರಮುಖ ಆಸ್ಪತ್ರೆಗಳಲ್ಲಿ ಆಯುರ್ವೇದದ ವಿಶೇಷ ಚಿಕಿತ್ಸೆಗಳಾದ ಪಂಚಕರ್ಮಚಿಕಿತ್ಸೆ, ಶಲ್ಯಚಿಕಿತ್ಸೆ (ಶಸ್ತ್ರಚಿಕಿತ್ಸೆ) ಗಳನ್ನು ಸಾರ್ವಜನಿಕರಿಗೆಒದಗಿಸಲಾಗುತ್ತಿದೆ.

ಪ್ರತಿಯೊಬ್ಬರು ತಮ್ಮ ದಿನನಿತ್ಯದ ಜೀವನದಲ್ಲಿ ದಿನಚರ್ಯ, ಋತುಚರ್ಯ, ಸ್ವಸ್ಥ ವೃತ್ತಗಳನ್ನು ಅನುಸರಿಸಿದಲ್ಲಿ ಎಷ್ಟೋಂದು ಖಾಯಿಲೆಗಳನ್ನು ಬಾರದಂತೆ ತಡೆಹಿಡಿಯಬಹುದಾಗಿದೆ ಹಾಗೂ ತಮ್ಮ ಇಮ್ಯೂನಿಟಿ (ರೋಗ ನಿರೋಧಕ ಶಕ್ತಿ) ಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ಎಲ್ಲಾ ಚಿಕಿತ್ಸಾಲಯಗಳಲ್ಲಿನ ವೈದ್ಯರುಗಳು ಆರೋಗ್ಯ ಮತ್ತುಕುಟುಂಬ ಕಲ್ಯಾಣ ಅಧಿಕಾರಿಗಳು ನಡೆಸುವ ಎಲ್ಲಾ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಯೋಜನೆ ಅಡಿಯಲ್ಲಿ ಬರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವರು, ಆಯುಷ್ ಇಲಾಖೆ ಕಾಲಕಾಲಕ್ಕೆ ನೀಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವರು. ಉದಾ: ಅಂತರಾಷ್ಟ್ರೀಯ ಯೋಗ ದಿನಾಚರಣೆ, ರಾಷ್ಟ್ರೀಯ ಆಯುರ್ವೇದ ದಿನಾಚರಣೆ, ರಾಷ್ಟ್ರೀಯ ಹೋಮಿಯೋಪತಿ ದಿನಾಚರಣೆ, ರಾಷ್ಟ್ರೀಯ ಯುನಾನಿ ದಿನಾಚರಣೆ, ಆಚರಿಸಿ ಈ ವೈದ್ಯಪದ್ಧತಿಗಳ ಅರಿವನ್ನು ಸಾರ್ವಜನಿಕರಿಗೆ ಮೂಡಿಸುವುದು ಇಲಾಖೆಯ ಮುಖ್ಯಕಾರ್ಯವಾಗಿದೆ.

ಕೇಂದ್ರ ಸರ್ಕಾರದ **ರಾಷ್ಟ್ರೀಯ ಆಯುಷ್ ಅಭಿಯಾನದಡಿ** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಒಟ್ಟು 04 ಆಯುರ್ವೇದ ಚಿಕಿತ್ಸಾಲಗಳಾದ ***ದೇವನಹಳ್ಳಿ ತಾಲ್ಲೂಕಿನ ಹೆಗ್ಗನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕಿನ ಕೋಡಿಹಳ್ಳಿ & ಹಣಬೆ ಹಾಗೂ ನೆಲಮಂಗಲ ತಾಲ್ಲೂಕಿನ ಯಂಟಗಾನಹಳ್ಳಿ ಚಿಕಿತ್ಸಾಲಯಗಳನ್ನು ಆಯುಷ್ ಆರೋಗ್ಯ*** & **ವೆಲ್‌ನೆಸ್ ಕೇಂದ್ರಗಳಾಗಿ** ಮೇಲ್ದರ್ಜೆಗೇರಿಸಲಾಗಿದ್ದು, ಸದರಿ ಕೇಂದ್ರಗಳ ಮುಖಾಂತರ ಯೋಗ ತರಬೇತಿದಾರರನ್ನು ನೇಮಿಸಿಕೊಂಡು ಸಾರ್ವಜನಿಕರಿಗೆ ಗಂಡು, ಹೆಣ್ಣು ಮತ್ತು ಮಕ್ಕಳಿಗೆ ಯೋಗ ತರಬೇತಿ ನೀಡುವುದರ ಜೊತೆಗೆ ದಿನನಿತ್ಯದ ಜೀವನದಲ್ಲಿ ದಿನಚರ್ಯ, ಋತುಚರ್ಯ, ಸ್ವಸ್ಥ ವೃತ್ತಗಳನ್ನು ಅನುಸರಿಸುವ ಕುರಿತು ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್.ಸಿ.ಡಿ(ನಾನ್‌ಕಮ್ಯುನಿಕೆಬಲ್ ಡಿಸೀಸ್) ಕ್ಲೀನಿಕ್ / ಎನ್.ಹೆಚ್.ಎಂಆಯುಷ್ ವೈದ್ಯಾಧಿಕಾರಿಗಳ ಮುಖಾಂತರ ಮಧುಮೇಹ ಮತ್ತು ರಕ್ತದೊತ್ತಡ ರೋಗಿಗಳಿಗೆ ಆಯುರ್ವೇದದ ಪೂರಕ ಔಷಧಿಗಳನ್ನು ನೀಡಿ ಸದರಿ ಕಾಯಿಲೆಗಳನ್ನು ಹತೋಟಿಯಲ್ಲಿ ತರಲು ಸಹಕಾರಿಯಾಗಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 50 ದೈಹಿಕ ಶಿಕ್ಷಕರಿಗೆ ಆಯುಷ್ ಇಲಾಖಾ ವತಿಯಿಂದ ಎರಡು ದಿನದ ಯೋಗ ಕಾರ್ಯಾಗಾರವನ್ನು ದೇವನಹಳ್ಳಿಯಲ್ಲಿ ಅತ್ಯಂತ ಯಶ್ವಸಿಯಾಗಿ ಹಮ್ಮಿಕೊಳ್ಳಲಾಗಿತ್ತು.

ಕೋವಿಡ್–19 ರಂತಹಜಾಗತಿಕ ಮಹಾಮಾರಿಯನ್ನು ನಿಯಂತ್ರಣ ಕಾರ್ಯದಲ್ಲಿ ಆಯುಷ್ ಪದ್ಧತಿಗಳಲ್ಲಿ ಹೇಳಲಾದ ವಿವಿಧ ರೋಗ ನಿರೋಧಕ ಔಷಧಿಗಳು ಇಂದು ಅತ್ಯಂತ ಜನಪ್ರಿಯವಾಗಿದ್ದು ಇಲಾಖಾ ವತಿಯಿಂದ ಕಳೆದ ಒಂದು ವರುಷದಿಂದ ಈ ಔಷಧಿಗಳನ್ನು ವಿತರಿಸುವ ಕಾರ್ಯವನ್ನು ಜಿಲ್ಲಾ ಆಯುಷ್ ಕಚೇರಿಯ ಮೂಲಕ ಹಾಗೂ ಎಲ್ಲಾ ಆಯುಷ್ ಸಂಸ್ಥೆಗಳ ಮೂಲಕ ಹಮ್ಮಿಕೊಳ್ಳಲಾಗಿದೆ.

ರಾಜ್ಯ ವಲಯದ ಎಸ್.ಸಿ.ಪಿ ಟಿ.ಎಸ್.ಪಿ ಯೋಜನೆಯ ಅನುದಾನದಿಂದ 2020–21ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಆಯುಷ್ ಇಲಾಖಾ ಕಾರ್ಯಕ್ರಮಗಳು.

ಅ)ಆಯುಷ್ ಸೇವಾಗ್ರಾಮ:– : ಈ ಕೆಳಕಂಡ ಚಿಕಿತ್ಸಾಲಯಗಳ ಸಮೀಪವಿರುವ 03 ಗ್ರಾಮಗಳನ್ನು ಆಯುಷ್ ಸೇವಾಗ್ರಾಮಗಳಾಗಿ ಆಯ್ಕೆ ಮಾಡಿಕೊಂಡು ಸದರಿ ಗ್ರಾಮಗಳಲ್ಲಿ ಗ್ರಾಮದ ಸಮೀಕ್ಷೇ, ಮನೆಮದ್ದು, ವೈದ್ಯಕೀಯ ಚಿಕಿತ್ಸೆ, ಆಯುಷ್ ಅರಿವು ಕಾರ್ಯಕ್ರಮ, ಗಿಡಮೂಲಿಕಾ ಸಸ್ಯ ವಿತರಣೆ, ದಿನಚರ್ಯ,

ಋತುಚರ್ಯ, ಯೋಗ, ನೈರ್ಮಲ್ಯದ ಬಗ್ಗೆ ಮಾಹಿತಿ ಹಾಗೂ ಆಯುಷ್ ಇಮ್ಯುನಿಟಿ (ರೋಗ ನಿರೋಧಕ ಶಕ್ತಿ ಹೆಚ್ಚಿಸುವ) ಕಿಟ್‌ಗಳ ವಿತರಣೆ ಇತ್ಯಾದಿ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

1	***ದೇವನಹಳ್ಳಿ ತಾಲ್ಲೂಕಿನ ಹೆಗ್ಗನಹಳ್ಳಿ***	***ಕೆಂಪ ತಿಮ್ಮನಹಳ್ಳಿ***
2	***ದೊಡ್ಡಬಳ್ಳಾಪುರ ತಾಲ್ಲೂಕಿನ ಕೋಡಿಹಳ್ಳಿ***	***ಸೊಣ್ಣಪ್ಪನಹಳ್ಳಿ***
3	***ನೆಲಮಂಗಲ ತಾಲ್ಲೂಕಿನ ಯಂಟಗಾನಹಳ್ಳಿ***	***ಮಲ್ಲರ ಬಾಣವಾಡಿ***

ಆ) ಆಯುಷ್ ಔಷಧಿ ಸಸ್ಯಗಳ ವನ ಅಭಿವೃದ್ಧಿ:–ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಳಕಂಡ ಸಮಾಜ ಕಲ್ಯಾಣ ಇಲಾಖೆಯ 06 ವಸತಿ ನಿಲಯದ ಆವರಣದಲ್ಲಿ ಆಯುಷ್ ಔಷಧಿ ಸಸ್ಯಗಳನ್ನು ನೆಟ್ಟು ಅವುಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಕ್ರ.ಸಂ	ವಸತಿ ನಿಲಯದ ಹೆಸರು	ತಾಲ್ಲೂಕು
1	ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ, ತ್ಯಾಮಗೊಂಡ್ಲು	ನೆಲಮಂಗಲ
2	ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ, ನರಸೀಪುರ	ನೆಲಮಂಗಲ
3	ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ, ಭೈರನಾಯಕನಹಳ್ಳಿ	ನೆಲಮಂಗಲ
4	ಮೊರಾರ್ಜಿದೇಸಾಯಿ ಮಾದರಿ ವಸತಿ ಶಾಲೆ, ಇಸ್ಕೂರು	ದೊಡ್ಡಬಳ್ಳಾಪುರ
5	ಮೊರಾರ್ಜಿದೇಸಾಯಿ ಮಾದರಿ ವಸತಿ ಶಾಲೆ, ಕುಂದಾಣ	ದೇವನಹಳ್ಳಿ
6	ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ, ಎಲೆಯೂರು	ದೇವನಹಳ್ಳಿ

ಇ) ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ಸಿಬ್ಬಂದಿಗೆ ಆನ್‌ಲೈನ್ ತರಬೇತಿ:–

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ವಸತಿ ನಿಲದ ಮೇಲ್ವಿಚಾರಕರಿಗೆ, ಅಡುಗೆಯವರಿಗೆ ಹಾಗೂ ಇತರೆ ಸಿಬ್ಬಂದಿ ವರ್ಗದವರಿಗೆ ಆಯುಷ್ ಕುರಿತು ಮಾಹಿತಿ ಔಷಧಿ ಸಸ್ಯಗಳ ಕುರಿತು ಅರಿವು, ಆಹಾರ ಸಂಸ್ಕರಣೆ ಮತ್ತು ತಯಾರಿಸುವಲ್ಲಿ ಆಯುಷ್ ಸಲಹೆಗಳು ಸೇರಿದಂತೆ ಮಕ್ಕಳ ದೈಹಿಕ ಮತ್ತು ಬೌದ್ಧಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಆಯುಷ್ ವೈದ್ಯ ಪದ್ಧತಿಗಳ ಮಹತ್ವದ ಕುರಿತು ಹಾಗೂ ದಿನನಿತ್ಯ ಇವುಗಳ ಪ್ರಯೋಗದ ಕುರಿತು ಆನ್‌ಲೈನ್ ಮುಖಾಂತರ ತರಬೇತಿ ನೀಡಲಾಯಿತು.

ಈ) ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಆಯುಷ್ ಇಮ್ಯುನಿಟಿ ಕಿಟ್ ವಿತರಿಸುವುದು:

ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಇರುವ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಕೋವಿಡ್–19 ಮಹಾಮಾರಿ ಸಮಯದಲ್ಲಿ ಇಮ್ಯೂನಿಟಿ ಹೆಚ್ಚಿಸುವ ಉದ್ದೇಶದಿಂದ ಆಯುಷ್ ಇಲಾಖೆ ವತಿಯಿಂದ ಚ್ಯವನ್ ಪ್ರಾಷ್, ಅಶ್ವಗಂಧ ಮಾತ್ರೆ ಹಾಗೂ ಸಂಶಮನ ವಟಿ ಯುಳ್ಳ ಇಮ್ಯನಿಟಿ ಕಿಟ್‌ಗಳನ್ನು ನೀಡಲು ಕ್ರಮವಹಿಸಲಾಗಿದೆ.

ಆಯುಷ್ ಇಲಾಖೆಯ ಅಧೀನದಲ್ಲಿ ಹಾಗೂ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಒಬ್ಬರು ಜಿಲ್ಲಾ ಆಯುಷ್ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ಆಯುಷ್ ಕಛೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧೀನದಲ್ಲಿ 08 ಆಯುಷ್ ಚಿಕಿತ್ಸಾಲಯಗಳು ಹಾಗೂ 01 ಆಸ್ಪತ್ರೆಯು ಕಾರ್ಯ ನಿರ್ವಹಿಸುತ್ತಿರುತ್ತದೆ. ಹಾಗೂ ಎರಡು ತಾಲ್ಲೂಕು ಆಸ್ಪತ್ರೆಗಳು ರಾಜ್ಯ ವಲಯದಡಿ ಕಾರ್ಯನಿರ್ವಹಿಸುತ್ತಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಬರುವ ಜಿಲ್ಲಾ ಆಯುಷ್ ಕಛೇರಿ ಜಿಲ್ಲಾ ವ್ಯಾಪ್ತಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಿಕಿತ್ಸಾಲಯಗಳ ಮತ್ತು ಆಸ್ಪತ್ರೆಗಳ ವಿವರ

ಕ್ರ.ಸಂ	ಆಯುಷ್‌ಆಸ್ಪತ್ರೆ& ಚಿಕಿತ್ಸಾಲಯಗಳ ವಿವರ	ಸ್ಥಳ	ತಾಲ್ಲೂಕು	ವಲಯ
1	ಸರ್ಕಾರಿಆಯುರ್ವೇದಆಸ್ಪತ್ರೆ, (6 ಹಾ)	ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ	ಜಿಲ್ಲಾ ವಲಯ

ಕ್ರ.ಸಂ	ಆಯುಷ್ ಆಸ್ಪತ್ರೆ& ಚಿಕಿತ್ಸಾಲಯಗಳ ವಿವರ	ಸ್ಥಳ	ತಾಲ್ಲೂಕು	ವಲಯ
2	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಕೋಡಿಹಳ್ಳಿ	ದೊಡ್ಡಬಳ್ಳಾಪುರ	ಜಿಲ್ಲಾ ವಲಯ
3	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಹಣಬೆ	ದೊಡ್ಡಬಳ್ಳಾಪುರ	ಜಿಲ್ಲಾ ವಲಯ
4	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಕೋಲಿಗೆರೆ	ದೊಡ್ಡಬಳ್ಳಾಪುರ	ಜಿಲ್ಲಾ ವಲಯ
5	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಯಂಟಗಾನಹಳ್ಳಿ	ನೆಲಮಂಗಲ	ಜಿಲ್ಲಾ ವಲಯ
6	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಮಂಟನಕುರ್ಚಿ	ನೆಲಮಂಗಲ	ಜಿಲ್ಲಾ ವಲಯ
7	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ	ಬೈರಸಂದ್ರ	ನೆಲಮಂಗಲ	ಜಿಲ್ಲಾ ವಲಯ
8	ಸರ್ಕಾರಿ ಯುನಾನಿ ಚಿಕಿತ್ಸಾಲಯ	ಇಸ್ಲಾಂಪುರ	ನೆಲಮಂಗಲ	ಜಿಲ್ಲಾ ವಲಯ
9	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಹೆಗ್ಗನಹಳ್ಳಿ	ದೇವನಹಳ್ಳಿ	ಜಿಲ್ಲಾ ವಲಯ
10	ಸರ್ಕಾರಿ ಆಯುರ್ವೇದ ಆಸ್ಪತ್ರೆ	ನೆಲಮಂಗಲ	ನೆಲಮಂಗಲ	ರಾಜ್ಯ ವಲಯ
11	ಸರ್ಕಾರಿ ಆಯುರ್ವೇದ ಆಸ್ಪತ್ರೆ	ಹೊಸಕೋಟೆ	ಹೊಸಕೋಟೆ	ರಾಜ್ಯ ವಲಯ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವತಿಯಿಂದ 2020–21ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ರಾಜ್ಯ ವಲಯದ ಆರೋಗ್ಯ ಐ.ಇ.ಸಿ & ತರಬೇತಿ ಕಾರ್ಯಕ್ರಮಗಳ ಉದ್ದೇಶ ಮತ್ತು ಪ್ರಗತಿಯ ವಿವರ (ರಾಜ್ಯ ವಲಯ)

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾರ್ಯಕ್ರಮಗಳು	ವಾರ್ಷಿಕಗುರಿ		ಸಾಧಿಸಿದ ಪ್ರಗತಿ		ಶೇಕಡವಾರು
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಪ್ರಗತಿ (%)
1	ವಸತಿ ನಿಯಲಗಳ ಮೇಲ್ವೀಚಾರಕರಿಗೆ ಆನ್‌ಲೈನ್ ತರಬೇತಿ	1	0.06	1	0.06	100 %
2	ವಿದ್ಯಾರ್ಥಿ ನಿಲಯಗಳ ಆವರಣಗಳಲ್ಲಿ ಆಯುಷ್ ಔಷಧಯುಕ್ತ ಗಿಡಮೂಲಿಕಾ ಸಸ್ಯಗಳನ್ನು ಬೆಳೆಸುವುದು	6	1.20	6	1.20	100 %
3	ಆಯುಷ್ ಸೇವಾಗ್ರಾಮ	3	6.00	3	6.00	100 %

ಆಯುಷ್ ಇಲಾಖೆಯ ಇತರೆ ಕಾರ್ಯಕ್ರಮಗಳು

- ಆಯುಷ್ ಪದ್ಧತಿಯನ್ನು ಮನೆ ಮನೆಗೆ ತಲುಪಿಸುವುದು.
- ಮನೆಮದ್ದು ಮೂಲಕ ಆರೋಗ್ಯದ ವಿಷಯದಲ್ಲಿ ಆಸಕ್ತಿ ಮೂಡಿಸುವುದು
- ಆಯುಷ್ ವೈದ್ಯಪದ್ಧತಿಗಳಲ್ಲಿ ಜೀವನ ಶೈಲಿ ಮತ್ತುರೋಗ ಬಾರದಂತೆ ತಡೆಯುವ ಕುರಿತು ವಿಶೇಷ ಜ್ಞಾನವಿದ್ದು, ಇದನ್ನು ಜನಸಾಮಾನ್ಯರಿಗೆ ತಲುಪಿಸುವುದು.
- ಪ್ರಾಥಮಿಕ ಆರೋಗ್ಯವನ್ನು ಮನೆಯಲ್ಲಿಯೇ ಅತಿ ಕಡಿಮೆ ಖರ್ಚಿನಲ್ಲಿ ಕಾಪಾಡಿಕೊಳ್ಳಲು ಅನುಕೂಲ ಮಾಡಿಕೊಡುವುದು.
- ಮನೆ ಸುತ್ತಮುತ್ತ ದೊರೆಯುವ ಔಷಧಿ ಸಸ್ಯಗಳ ಪರಿಚಯ ಮತ್ತು ಉಪಯೋಗ ತಿಳಿಸುವುದು.
- ಮನೆಯಲ್ಲಿ ದೊರೆಯುವ ಔಷಧಿ ದ್ರವ್ಯಗಳಿಂದ ಮನೆಯಲ್ಲಿಯೇ ಔಷಧಿಗಳನ್ನು ತಯಾರಿಸುವ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿ ಈ ಕುರಿತು ಆಸಕ್ತಿ ಮೂಡಿಸುವುದು.
- ಆಧುನಿಕ ಜೀವನ ಶೈಲಿಯಿಂದ ಬರುವ ಒತ್ತಡ, ಖಿನ್ನತೆ, ಚಿಂತೆ ನಿದ್ರಾಹೀನತೆ ಇತ್ಯಾದಿ ಮಾನಸಿಕ ಒತ್ತಡ / ಸಮಸ್ಯೆಗಳಿಗೆ ಯೋಗ, ಪ್ರಾಣಾಯಾಮ, ಧ್ಯಾನ, ಮುದ್ರೆಗಳಿಂದ ಸಿಗುವ ಪರಿಹಾರೋಪಯಗಳ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವುದು.

ಕ್ರ.ಸಂ	ಲೆಕ್ಕ ಶಿರ್ಷಿಕೆ ವಿವರ	ಕಾರ್ಯಕ್ರಮದ ವಿವರ
1	**2210–00–101–0–29** ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳು ತೆರೆಯುವುದು ಮತ್ತು ನಿರ್ವಹಣೆ	ಈ ಕಾರ್ಯಕ್ರಮದಡಿಯಲ್ಲಿ 2020–21ನೇ ಸಾಲಿನಲ್ಲಿ ಒಟ್ಟು ರೂ. 156.84 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದ್ದು, ಈ ಯೋಜನೆಯಡಿ 8 ಆಯುಷ್ ಚಿಕಿತ್ಸಾಲಯಗಳು 01 ಆಯುಷ್ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿರುವ 08 ವೈದ್ಯಾಧಿಕಾರಿಗಳು ಮತ್ತು 05 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರ ವೇತನಕ್ಕಾಗಿ ರೂ. 146.04 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ವೇತನೇತರ ಕಾರ್ಯಕ್ರಮಗಳಿಗೆ ರೂ. 9.35 ಲಕ್ಷ ವೆಚ್ಚಮಾಡಲಾಗಿದೆ.
2	**2210–00–101–0–35** ಆಯುಷ್‌ಜಿಲ್ಲಾ ಆಸ್ಪತ್ರೆಗಳು & ಹೋಮಿಯೋಪತಿಜಿಲ್ಲಾ ಖಾಸಗಿ ಆಸ್ಪತ್ರೆಗಳ ಸಹಾಯಾನುದಾನ	ಈ ಕಾರ್ಯಕ್ರಮದಡಿಯಲ್ಲಿ 2020–21ನೇ ಸಾಲಿನಲ್ಲಿ ಒಟ್ಟು ರೂ. 11.02 ಲಕ್ಷರೂ ಗಳ ಅನುದಾನ ನಿಗಧಿಪಡಿಸಲಾಗಿದ್ದು, ಈ ಯೋಜನೆಯಡಿ ಜಿಲ್ಲಾ ಆಯುಷ್ ಕಛೇರಿ 01 ಸಿಬ್ಬಂದಿ ವೇತನಕ್ಕಾಗಿ ರೂ. 6.22 ಲಕ್ಷ ಮತ್ತು ಈ ಡಿ.ಎ.ಓಕಛೇರಿ ಹಾಗೂ ಇದರಡಿ ಬರುವ ಆಯುಷ್ ಚಿಕಿತ್ಸಾಲಯಗಳ ವೇತನೇತರ ಕಾರ್ಯಕ್ರಮಗಳಿಗೆ ರೂ. 4.50 ಲಕ್ಷ ವೆಚ್ಚ ಮಾಡಲಾಗಿದೆ.
3	**2210–00–101–0–37** ಆಯುಷ್‌ಇಲಾಖೆಯ ಔಷಧಗಳು ಮತ್ತು ರಸಾಯನಿಕಗಳ ಖರೀದಿ	ಈ ಲೆಕ್ಕ ಶೀರ್ಷಿಕೆ ಅಡಿ 2020–21ನೇ ಸಾಲಿನಲ್ಲಿರೂ. 10.00 ಲಕ್ಷಗಳನ್ನು ಆಯುಷ್ ಇಲಾಖೆಯ ಔಷಧಗಳು ಮತ್ತು ರಾಸಯನಿಕಗಳ ಖರೀದಿಗಾಗಿ ನಿಗಧಿಪಡಿಸಲಾಗಿದ್ದು, ಬೆಂಗಳೂರು ಗ್ರಾಮಾಂತರಜಿಲ್ಲಾ ವ್ಯಾಪ್ತಿಯಡಿಯಲ್ಲಿ 01ಆಸ್ಪತ್ರೆ ಮತ್ತು 08 ಆಯುಷ್ ಚಿಕಿತ್ಸಾಲಯಗಳಿಗೆ ಅವಶ್ಯವಿರುವ ಔಷಧಗಳು ಮತ್ತು ರಾಸಯನಿಕಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿಸಿ ರೂ. 10.00 ಲಕ್ಷಗಳ ವೆಚ್ಚ ಮಾಡಲಾಗಿದೆ.
4	**2201–00–101–0–41** ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ	ಈ ಕಾರ್ಯಕ್ರಮದಡಿಯಲ್ಲಿ 2020–21ನೇ ಸಾಲಿನಲ್ಲಿ ಒಟ್ಟು ರೂ. 21.69 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದ್ದು, ಈ ಯೋಜನೆಯಡಿ 01 ಚಿಕಿತ್ಸಾಲಯಗಳ 01 ವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರ ವೇತನಕ್ಕಾಗಿ ರೂ. 9.66 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ವೇತನೇತರ ಕಾರ್ಯಕ್ರಮಗಳಿಗೆ ರೂ. 4.96 ಲಕ್ಷ ವೆಚ್ಚ ಮಾಡಲಾಗಿದೆ.
5	**2210–00–105–0–36** ಆರೋಗ್ಯ ಇಲಾಖೆ ಕಟ್ಟಡಗಳು 140–ಸಣ್ಣ ಕಾಮಗಾರಿಗಳು	ಈ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರಿಂದ ಆಯುಷ್ ಇಲಾಖೆಯ ಚಿಕಿತ್ಸಾಲಯಗಳ ಕಟ್ಟಡಗಳನ್ನು ದುರಸ್ಥಿ/ನಿರ್ಮಾಣ ಮಾಡಲು 2020–21ನೇ ಸಾಲಿನಲ್ಲಿ ರೂ. 34.90 ಲಕ್ಷಗಳು ನಿಗಧಿಪಡಿಸಿದ್ದು, ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆ ಮೇರೆಗೆ ಈ ಕೆಳಕಂಡ ಚಿಕಿತ್ಸಾಲಯಗಳ ಕಟ್ಟಡ ನಿರ್ಮಾಣಕ್ಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 1. ದೊಡ್ಡಬಳ್ಳಾಪುರ ತಾಲ್ಲೂಕಿನ ಸ.ಆ.ಚಿ ಹಣಬೆ & ಸ.ಆ.ಚಿ ಕೋಡಿಹಳ್ಳಿ, ಯೋಗ ಹಾಲ್ ಕಟ್ಟಡದ ನಿರ್ಮಾಣ ಮಾಡಲು ಕ್ರಮವಾಗಿ ರೂ. 6.50 ಲಕ್ಷಗಳನ್ನು & 8.00 ಲಕ್ಷಗಳು ನಿಗಧಿಪಡಿಸಿಕೊಂಡು, ವೆಚ್ಚ ಮಾಡಿದೆ.. 2. ದೇವನಹಳ್ಳಿ ತಾಲ್ಲೂಕು ಸ.ಆ.ಚಿ ಹೆಗ್ಗನಹಳ್ಳಿ, ಇಲ್ಲಿ ಯೋಗ ಹಾಲ್ ನಿರ್ಮಾಣ ಮಾಡಲು ರೂ. 9.00 ಲಕ್ಷಗಳು ನಿಗಧಿಪಡಿಸಿಕೊಂಡು, ವೆಚ್ಚ ಮಾಡಿದೆ. 3. ದೊಡ್ಡಬಳ್ಳಾಪುರ ತಾಲ್ಲೂಕಿನ ಸ.ಆ.ಆ ದೊಡ್ಡಬಳ್ಳಾಪುರ, ಸ.ಆ.ಚಿ ಕೋಲಿಗೆರೆ ಇಲ್ಲಿ 2019–20ನೇ ಸಾಲಿನಲ್ಲಿ ಕೈಗೊಂಡ ದುರಸ್ಥಿ ಕಾಮಗಾರಿಗಳಿಗೆ ನಿಗಧಿಪಡಿಸಿಕೊಂಡ ಬಾಕಿ ಮೊತ್ತ ಕ್ರಮವಾಗಿ ರೂ. 2.48 & 2.88 ಲಕ್ಷಪಾವತಿಗಾಗಿ ವೆಚ್ಚ ಮಾಡಿದೆ

ಕ್ರ.ಸಂ	ಲೆಕ್ಕ ಶಿರ್ಷಿಕೆ ವಿವರ	ಕಾರ್ಯಕ್ರಮದ ವಿವರ
		4. ನೆಲಮಂಗಲ ತಾಲ್ಲೂಕಿನ ನೆಲಮಂಗಲ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿರುವ ಆಯುಷ್‌ಆಸ್ಪತ್ರೆ ದುರಸ್ಥಿ ಹಾಗೂ ಬಣ್ಣ ಬಳಿಯುವ ಕಾರ್ಯಕ್ಕೆ & ಸ.ಯು.ಚಿ. ಇಸ್ಲಾಂಪುರ, ಇಲ್ಲಿ 2019–20ನೇ ಸಾಲಿನಲ್ಲಿ ಕೈಗೊಂಡ ದುರಸ್ಥಿ ಕಾಮಗಾರಿಗಳಿಗೆ ನಿಗಧಿಪಡಿಸಿಕೊಂಡ ಬಾಕಿ ಮೊತ್ತರೂ. 1.50 & ರೂ. 4.54 ಲಕ್ಷಪಾವತಿಗಾಗಿ ವೆಚ್ಚ ಮಾಡಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ 2020–21ನೇ ಸಾಲಿನ ಒಳ/ಹೊರ ರೋಗಿಗಳ ಸಂಖ್ಯೆ

ಕ್ರ.ಸಂ	ತಾಲ್ಲೂಕಿನ ಹೆಸರು	ಒಳ ರೋಗಿಗಳ ಸಂಖ್ಯೆ	ಹೊರ ರೋಗಿಗಳ ಸಂಖ್ಯೆ	ಒಟ್ಟು
1	ದೇವನಹಳ್ಳಿ	–	8035	8035
2	ದೊಡ್ಡಬಳ್ಳಾಪುರ	2235	97623	101345
3	ಹೊಸಕೋಟೆ	–	8276	8276
4	ನೆಲಮಂಗಲ	2	68767	68769
	ಸಮಗ್ರಒಟ್ಟು	**2237**	**182701**	**186425**

11.ತೋಟಗಾರಿಕೆ ಇಲಾಖೆ

ಪ್ರಸ್ತುತ ತೋಟಗಾರಿಕೆ ಬೆಳೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿದ್ದು, ರೈತರ ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಸಫಲವಾಗಿವೆ. ತೋಟಗಾರಿಕೆಯ ಹೊಸ ತಾಂತ್ರಿಕತೆಗಳ ಅಳವಡಿಕೆಗೆ ರೈತರು ಉತ್ಸಾಹ ತೋರಿ ಮುಂದೆ ಬರುತ್ತಿರುವ ಹಿನ್ನೆಲೆಯಲ್ಲಿ ರೈತ ಸಮುದಾಯದಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಜಿಲ್ಲೆಯ ರೈತರಿಗೆ ವಿವಿಧ ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ತುಂಬಾ ಆಸಕ್ತಿ ಇದ್ದು ಸಕ್ರಿಯವಾಗಿ ವಾಣಿಜ್ಯ ತೋಟಗಾರಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಜಿಲ್ಲೆಯು ನಾಲ್ಕು ತಾಲ್ಲೂಕುಗಳನ್ನು ಒಳಗೊಂಡಿದ್ದು ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳು ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಗೆ ಬರುತ್ತವೆ. ಜಿಲ್ಲೆಯಲ್ಲಿ ಸರಾಸರಿ ವಾರ್ಷಿಕ ಮಳೆ 824 ಮಿ.ಮಿ.ಇದ್ದು ವಿವಿಧ ಹಣ್ಣು ತರಕಾರಿ ಹಾಗೂ ಹೂವಿನ ಬೆಳೆಗಳಿಗೆ ಸೂಕ್ತವಾದ ಹವಾಮಾನ ಮತ್ತು ಮಣ್ಣಿನ ಗುಣಲಕ್ಷಣಗಳನ್ನು ಹೊಂದಿದೆ.

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

I. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1. ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ : (ಡಿ–02)
(ಲೆಕ್ಕ ಶೀರ್ಷಿಕೆ:2435–00–101–0–28)

2020–21ನೇ ಸಾಲಿನ ಹನಿ ನೀರಾವರಿಗಾಗಿ ರೂ 54.00 ಲಕ್ಷಗಳ ಗುರಿಯಿದ್ದು, ಬಿಡುಗಡೆಯಾದ ರೂ 54.00 ಲಕ್ಷಗಳಲ್ಲಿ ರೂ 53.97 ಲಕ್ಷಗಳ ಉಪಯೋಗಿಸಿಕೊಂಡು ಪ್ರಗತಿಯನ್ನು (ಭೌತಿಕ 67.35ಹೆ) ಸಾಧಿಸಲಾಗಿರುತ್ತದೆ.

2. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (ಡಿ–04) (ಲೆಕ್ಕ ಶೀರ್ಷಿಕೆ: 2435–00–101–0–35)

2020–21ನೇ ಸಾಲಿನ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಯೋಜನೆಯಡಿ ರೂ.10.00ಲಕ್ಷಗಳು ಗುರಿಯಿದ್ದು, ಬಿಡುಗಡೆಯಾದ ರೂ. 10.00ಲಕ್ಷಗಳಲ್ಲಿ ದಂಡುಪಾಳ್ಯ ತೋಟಗಾರಿಕೆ ಕ್ಷೇತ್ರದ ನಿರ್ವಹಣೆಗೆ ರೂ. 10.00 ಲಕ್ಷಗಳನ್ನು ಉಪಯೋಗಿಸಿಕೊಂಡು ಪೂರ್ಣ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

3. ಜೇನು ಕೃಷಿ ಅಭಿವೃದ್ದಿ ಯೋಜನೆ: (ಡಿ–08) (ಲೆಕ್ಕ ಶೀರ್ಷಿಕೆ:2851–00–107–0–33)

ಸದರಿ ಯೋಜನೆಯಡಿ ರೂ 11.08 ಲಕ್ಷಗಳ ಗುರಿಯಿದ್ದು. ಬಿಡುಗಡೆಯಾದ ರೂ 10.78 ಲಕ್ಷಗಳನ್ನು ಉಪಯೋಗಿಸಿಕೊಂಡು ರೂ 7.99ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

II. ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

ರೈತರಿಗಾಗಿ ತರಬೇತಿ: (ಡಿ–10) (ಲೆಕ್ಕ ಶೀರ್ಷಿಕೆ:2435–00–101–0–64)

ತೋಟಗಾರಿಕಾ ಕ್ಷೇತ್ರಗಳಲ್ಲಿ ವೃದ್ದಿಪಡಿಸಲಾದ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ಮನದಟ್ಟು ಮಾಡುವ ಸಲುವಾಗಿ ರೂ.1.39 ಲಕ್ಷ ಅನುದಾನದಲ್ಲಿ 348 ರೈತರಿಗೆ ತರಬೇತಿ ಕಾರ್ಯಕ್ರಮ ನೀಡುವ ಗುರಿಯಿದ್ದು, ಈ ಪೈಕಿ 2020–21ನೇ ಸಾಲಿನಲ್ಲಿ ಬಿಡುಗಡೆಯಾದ ರೂ.1.39ಲಕ್ಷಗಳ ಅನುದಾನದಲ್ಲಿ ರೂ. 1.39 ಲಕ್ಷಗಳನ್ನು ಖರ್ಚುಮಾಡಿದ್ದು, ಜಿಲ್ಲೆಯ ಒಟ್ಟು 348 ರೈತರು ಹಾಗೂ ರೈತ ಮಹಿಳೆಯರಿಗೆ ತರಬೇತಿ ನೀಡಲಾಗಿದೆ.

12. ರೇಷ್ಮೆ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರೇಷ್ಮೆ ಇಲಾಖೆಯ ಅಸ್ತಿತ್ವದಲ್ಲಿ **4** ತಾಲ್ಲೂಕುಗಳಲ್ಲಿ **3** ರೇಷ್ಮೆ ಸಹಾಯಕ ನಿರ್ದೇಶಕರುಗಳ ಕಛೇರಿಗಳು, **10** ಸಾಮಾನ್ಯ ತಾಂತ್ರಿಕ ಸೇವಾ ಕೇಂದ್ರಗಳು 1 ರೇಷ್ಮೆ ಬಿತ್ತನೆ ಕೋಠಿ, **1** ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಇದ್ದು, ರೇಷ್ಮೆ ಕೃಷಿಯ ಅಭಿವೃದ್ಧಿಗಾಗಿ ಕೆಲಸ ನಿರ್ವಹಿಸುತ್ತಿವೆ.

ಜಿಲ್ಲೆಯಲ್ಲಿ ಒಟ್ಟು **6289.72** ಹೆಕ್ಟೇರ್ ಪ್ರದೇಶದಲ್ಲಿ **6321** ರೇಷ್ಮೆ ಬೆಳೆಗಾರರು ಮಿಶ್ರತಳಿ ಮತ್ತು ದ್ವಿತಳಿ ಗೂಡನ್ನು ಉತ್ಪಾದಿಸುತ್ತಿದ್ದಾರೆ. ಒಟ್ಟು ರೇಷ್ಮೆ ಬೆಳೆಗಾರರ ಪೈಕಿ **246** ಜನ ಪರಿಶಿಷ್ಟ ಜಾತಿ, **388** ಪರಿಶಿಷ್ಟ ಪಂಗಡ, **58** ಜನ ಅಲ್ಪಸಂಖ್ಯಾತರು ಹಾಗೂ **5,629** ಜನ ಇತರೆ ರೇಷ್ಮೆ ಬೆಳೆಗಾರರಿರುತ್ತಾರೆ. ಒಟ್ಟು ರೇಷ್ಮೆ ಬೆಳೆಗಾರರ ಪೈಕಿ **2,354** ಅತಿ ಸಣ್ಣ ರೈತರು, **2,859** ಸಣ್ಣ ರೈತರು, **1,044** ಮದ್ಯಮ ರೈತರು, **64** ದೊಡ್ಡ ರೈತರಾಗಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು **458** ಮಹಿಳಾ ರೇಷ್ಮೆ ಬೆಳೆಗಾರರು ಪ್ರತ್ಯೇಕವಾಗಿ ರೇಷ್ಮೆ ಹುಳು ಸಾಕಾಣಿಕೆಯನ್ನು ಕೈಗೊಂಡಿರುತ್ತಾರೆ.

2020–21ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ **105.00** ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹೊಸತಳಿ ಹಿಪ್ಪುನೇರಳೆ ಕಡ್ಡಿಯನ್ನು ನಾಟಿ ಮಾಡಿಸಲು ಗುರಿಯಿದ್ದು, ಸಾಧನೆ– **108.10** ಹೆಕ್ಟೇರ್ ಆಗಿದೆ. **3893.500** ಮೆಟ್ರಿಕ್ ಟನ್ ಮಿಶ್ರತಳಿ ಮತ್ತು **461.500** ಮೆಟ್ರಿಕ್ ಟನ್ ದ್ವಿತಳಿ ಗೂಡು ಉತ್ಪಾದನಾ ಗುರಿಯನ್ನು ನೀಡಿದ್ದು, **3319.426** ಮೆಟ್ರಿಕ್ ಟನ್ ಮಿಶ್ರತಳಿ ಮತ್ತು **294.403** ಮೆಟ್ರಿಕ್ ಟನ್ ದ್ವಿತಳಿ ಗೂಡು ಉತ್ಪಾದನೆಯಾಗಿದೆ.

ಇಲಾಖೆಯ ಹೆಸರು:– ರೇಷ್ಮೆ ಇಲಾಖೆ		ವರ್ಷ:–2020–21					ಮಾಹೆ:– ಮಾರ್ಚ್–2021		
ಕ್ರ. ಸಂ	ಕಾರ್ಯಕ್ರಮ	ಭೌತಿಕ	ವಾರ್ಷಿಕ ಗುರಿ	ಪ್ರಸ್ತುತ ಮಾಹೆಯಲ್ಲಿ			ಪ್ರಸ್ತುತ ಮಾಹೆಯ ಅಂತ್ಯಕ್ಕೆ		
				ಗುರಿ	ಸಾಧನೆ	ಶೇಕಡಾ	ಗುರಿ	ಸಾಧನೆ	ಶೇಕಡಾ
1	ಮಿಶ್ರ ತಳಿ ರೇಷ್ಮೆ ಉತ್ಪಾದನೆ	ಮೆಟ್ರಿಕ್ ಟನ್	540.77	37.86	35.53	94	540.77	535.40	99
2	ದ್ವಿತಳಿ ರೇಷ್ಮೆ ಉತ್ಪಾದನೆ	ಮೆಟ್ರಿಕ್ ಟನ್	71.00	4.97	4.65	93	71.00	53.53	75

ಈ ಸಂಬಂಧ ಯೋಜನೆ ಕಾರ್ಯಕ್ರಮಗಳ ಪ್ರಗತಿಯ ವಿವರಗಳು

ಜಿಲ್ಲಾ ಪಂಚಾಯತ್ ಕಾರ್ಯಕ್ರಮ

1. ವಿಸ್ತರಣಾ ಕಾರ್ಯಕ್ರಮಗಳು:

2020–21ನೇ ಸಾಲಿನಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ನಡುವೆಯು ಸಹ ಜಿಲ್ಲೆಯ 400 ಜನರೇಷ್ಮೆ ಬೆಳೆಗಾರರನ್ನು ಕೋಲಾರ ಜಿಲ್ಲೆಯ ಪ್ರಗತಿ ಪರ ರೇಷ್ಮೆ ಕೃಷಿಕರನ್ನು ತೋರಿಸಲು ಕರೆದುಕೊಂಡು ಹೋಗಿಬರಲಾಗಿದೆ ಹಾಗೂ ರೈತರಿಂದ ರೈತರಿಗೆ 10 ತರಬೇತಿಯನ್ನು ಕೇಂದ್ರ ರೇಷ್ಮೆ ಮಂಡಳಿ ಹಾಗೂ ಕೃಷಿ ವಿಶ್ವವಿಧ್ಯಾನಿಲಯದ ವಿಜ್ಞಾನಿಗಳ ಜೊತೆಗೂಡಿ ನಡೆಸಲಾಗಿದೆ. ಇದರ ಜೊತೆಗೆ 25 ಗುಂಪು ಚರ್ಚೆಗಳನ್ನು ಸಂದರ್ಭಕ್ಕನುಗುಣವಾಗಿ ನಡೆಸಲಾಗಿದೆ.

2. ರೇಷ್ಮೆ ಬೆಳೆಗಾರರಿಗೆ ಸಹಾಯ

ಈ ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ/ವಿಚಾರ ಸಂಕಿರಣ ಹಾಗೂ ರೇಷ್ಮೆಗೆ ಸಂಬಂಧಿಸಿದಂತೆ ಸಾಹಿತ್ಯ ಹಾಗೂ ಕಾರ್ಯಾಗಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಭೌತಿಕ ಗುರಿ **1516** ಇದ್ದು,ಸಾಧನೆ **1516** ಆಗಿದೆ. ಜಿಲ್ಲೆಯಲ್ಲಿ ಹಿಪ್ಪುನೇರಳೆ ನಾಟಿ ಹಾಗೂ ವಸ್ತುಪ್ರದರ್ಶನಕ್ಕೆ ನಿಗದಿಯಾದ ಗುರಿಯನ್ನು ರೇಷ್ಮೆ ಬೆಳೆಗಾರರಿಗೆ ಸೋಂಕುನಿವಾರಕಗಳನ್ನು ನೀಡಲಾಗಿದೆ ಈ ಎಲ್ಲಾ ಕಾರ್ಯಕ್ರಮಗಳಿಗೂ ಒಟ್ಟು **ರೂ.45.53** ಲಕ್ಷಗಳ ಆರ್ಥಿಕ ಗುರಿಯಿದ್ದು, ವಂಟನೆ ರೂ:45.53 ಲಕ್ಷಗಳು ಖರ್ಚಾಗಿದೆ.

3. ತಾಲ್ಲೂಕ್ ಪಂಚಾಯತ್ ಕಾರ್ಯಕ್ರಮ:– ಹೊಸತಳಿ ಹಿಪ್ಪುನೇರಳೆ ನರ್ಸರಿ ಹಾಗೂ ನಾಟಿಗೆ ಪ್ರೋತ್ಸಾಹಧನ

ಈ ಕಾರ್ಯಕ್ರಮದಡಿ ಹೊಸದಾಗಿ ಹಿಪ್ಪುನೇರಳೆ ತಳಿ ನಾಟಿ ಮಾಡಿದ **33** ಜನ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ರೂ:**6,26,000**/–ಗಳನ್ನು ನೀಡಲಾಗಿದೆ. ಹಿಪ್ಪುನೇರಳೆ ನರ್ಸರಿ ನಾಟಿ ಮಾಡಲಾದ ಮೂರು ಜನ ರೇಷ್ಮೆ ಬೆಳೆಗಾರನಿಗೆ ಪ್ರೋತ್ಸಾಹಧನ ರೂ:**3,45,000**/–ಗಳನ್ನು ನೀಡಲಾಗಿದೆ. ಈ ಕಾರ್ಯಕ್ರಮಗಳಿಗೂ ಒಟ್ಟು ರೂ.**9.71** ಲಕ್ಷಗಳ ಆರ್ಥಿಕ ಗುರಿಯಿದ್ದು, ರೂ:**9.71** ಲಕ್ಷಗಳು ಖರ್ಚಾಗಿದೆ.

ಇದಲ್ಲದೆ ಜಿಲ್ಲಾ ಪಂಚಾಯತ್‌ನಿಂದ ಯೋಜನೇತರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೇತನಕ್ಕೆ ರೂ.270.45ಲಕ್ಷಗಳಲ್ಲಿ ರೂ.243.39ಲಕ್ಷಗಳು ಮತ್ತು ವೇತನೇತರ ಕಾರ್ಯಕ್ರಮದ ಬಾಬ್ತಿಗೆ ರೂ.275.27 ಲಕ್ಷಗಳಲ್ಲಿ ರೂ.275.24 ಲಕ್ಷಗಳು ಖರ್ಚಾಗಿರುತ್ತದೆ.

4. ವಿಶೇಷ ಘಟಕ ಯೋಜನೆ (ರಾಜ್ಯ ನೆರವು ಯೋಜನೆ ಅಡಿಯಲ್ಲಿ)

ಪರಿಶಿಷ್ಠ ಜಾತಿಯ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆ ಮಾಡಲು ಸಾಕಷ್ಟು ಸಲಕರಣೆ ಹೊಂದಿಲ್ಲದ ರೇಷ್ಮೆ ಬೆಳೆಗಾರರಿಗೆ ಹುಳು ಸಾಕುವ ಸಲಕರಣೆಗಳನ್ನು ಉಚಿತವಾಗಿ ನೀಡುವ ಕಾರ್ಯಕ್ರಮವಾಗಿರುತ್ತದೆ. ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ತಾಲ್ಲೂಕುಗಳಿಗೆ ವಂಟನೆ ಬಿಡುಗಡೆಯಾಗದ ಪ್ರಯುಕ್ತ ಸಾಧನೆ ಶೂನ್ಯವಾಗಿರುತ್ತದೆ.

5. ಗಿರಿಜನ ಉಪಯೋಜನೆ (ರಾಜ್ಯ ನೆರವು ಯೋಜನೆ ಅಡಿಯಲ್ಲಿ):–

ಪರಿಶಿಷ್ಠ ಪಂಗಡದ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆ ಮಾಡಲು ಸಾಕಷ್ಟು ಸಲಕರಣೆ ಹೊಂದಿಲ್ಲದ ರೇಷ್ಮೆ ಬೆಳೆಗಾರರಿಗೆ ಹುಳು ಸಾಕುವ ಸಲಕರಣೆಗಳನ್ನು ಉಚಿತವಾಗಿ ನೀಡುವ ಕಾರ್ಯಕ್ರಮವಾಗಿರುತ್ತದೆ. ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ತಾಲ್ಲೂಕುಗಳಿಗೆ ವಂಟನೆ ಬಿಡುಗಡೆಯಾಗದ ಪ್ರಯುಕ್ತ ಸಾಧನೆ ಶೂನ್ಯವಾಗಿರುತ್ತದೆ.

ಇದಲ್ಲದೆ ಜಿಲ್ಲಾ ಪಂಚಾಯತ್‌ನಿಂದ ಯೋಜನೇತರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೇತನಕ್ಕೆ ರೂ.270.45ಲಕ್ಷ ಮತ್ತು ವೇತನೇತರ ಕಾರ್ಯಕ್ರಮದ ಬಾಬ್ತಿಗೆ ರೂ.275.27 ಲಕ್ಷಗಳು ಲಿಂಕ್ ಡಾಕ್ಯೂಮೆಂಟ್‌ನಂತೆ ಒಟ್ಟು ರೂ.545.72 ಲಕ್ಷಗಳು ನಿಗಧಿಯಾಗಿರುತ್ತದೆ. ಇದರಲ್ಲಿ ರೂ.275.27 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆದು ರೋಗಗಳು ಉಲ್ಬಣಿಸುವ ಕಡೆ ಔಷಧಿಗಳನ್ನು ನೀಡಿ ಸೋಂಕು ನಿವಾರಣೆ ಕ್ರಮ ಕೈಗೊಂಡು ರೋಗಗಳನ್ನು ತಡೆಗಟ್ಟಿ ರೋಗ ನಿರೋಧಕಗಳನ್ನು ಹಾಗೂ ಅವಶ್ಯವಿರುವ ಹುಳು ಸಾಕಾಣಿಕಾ ಸಲಕರಣೆಗಳನ್ನು ಉಚಿತವಾಗಿ ರೇಷ್ಮೆ ಬೆಳೆಗಾರರಿಗೆ ನೀಡಿ ಉತ್ತಮ ಇಳುವರಿ ಪಡೆದು ಗೂಡನ್ನು ಉತ್ಪಾದಿಸಲಾಗಿರುತ್ತದೆ.

ರೇಷ್ಮೆ ಅಭಿವೃದ್ಧಿ ಯೋಜನೆ (ಸಾಮಾನ್ಯ) (ರೂ. ಲಕ್ಷಗಳಲ್ಲಿ)

ರೇಷ್ಮೆ

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ)
1	ಹುಳುಸಾಕಾಣಿಕಾ ಮನೆ	18	45.00	18	45.00
	ಒಟ್ಟು	**18**	**45.00**	**18**	**45.00**

ಅಭಿವೃದ್ಧಿ ವಿಶೇಷ ಘಟಕ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಳು ಸಾಕಾಣಿಕಾ ಮನೆ	2	5.40	2	5.40
2	ಹುಳು ಸಾಕಾಣಿಕಾ ಸಲಕರಣೆ	65	15.67	39	15.67
	ಒಟ್ಟು	**67**	**21.07**	**41**	**21.07**

ರೇಷ್ಮೆ ಅಭಿವೃದ್ಧಿ ಗಿರಿಜನ ಉಪ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಳು ಸಾಕಾಣಿಕಾ ಮನೆ	4	11.70	4	11.70
2	ಹುಳು ಸಾಕಾಣಿಕಾ ಸಲಕರಣೆ	32	11.25	32	11.25
	ಒಟ್ಟು	**36**	**22.95**	**36**	**22.95**

ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ಯಾತ್ವ ಶಕ್ತಿ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ದ್ವಿತಳಿ ಚಾಕಿಗೆ ಪ್ರೋತ್ಸಾಹಧನ	1551	24.73	1551	24.73
	ಒಟ್ಟು	**1551**	**24.73**	**1551**	**24.73**

ರಾಷ್ಟ್ರೀಯ ಕೃಷಿ ವಿಕಾಸ ಸಾಮಾನ್ಯ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಟ್ರಂಚಿಂಗ್& ಮಲ್ಚಿಂಗ್	21	3.15	21	3.15
	ಒಟ್ಟು	**21**	**3.15**	**21**	**3.15**

ರಾಷ್ಟ್ರೀಯ ಕೃಷಿ ವಿಕಾಸ ವಿಶೇಷ ಘಟಕ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಟ್ರಂಚಿಂಗ್& ಮಲ್ಚಿಂಗ್	27	4.050	27	4.050
2	ಮಣ್ಣಿನ ಫಲವತ್ತತೆ	45	4.054	45	4.052
	ಒಟ್ಟು	**72**	**8.104**	**72**	**8.102**

ರಾಷ್ಟ್ರೀಯ ಕೃಷಿ ವಿಕಾಸ ಗಿರಿಜನ ಉಪ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಟ್ರಂಚಿಂಗ್& ಮಲ್ಚಿಂಗ್	9	1.350	9	1.350
2	ಮಣ್ಣಿನ ಫಲವತ್ತತೆ	22	1.938	22	1.937
	ಒಟ್ಟು	**31**	**3.288**	**31**	**3.287**

ಪ್ರಧಾನ ಕೃಷಿ ಸಿಂಚಾಯಿ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹನಿನೀರಾವರಿ	333	228.00	333	227.574
	ಒಟ್ಟು	**333**	**228.00**	**333**	**227.574**

ಜಿಲ್ಲಾ ಪಂಚಾಯತ್ ಯೋಜನೆ (ಸಾಮಾನ್ಯ)

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ	1152	34.57	1152	34.56
	ಒಟ್ಟು	**1152**	**34.57**	**1152**	**34.56**

ಜಿಲ್ಲಾ ಪಂಚಾಯತ್ ವಿಶೇಷ ಘಟಕ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ	292	8.78	292	8.78
	ಒಟ್ಟು	**292**	**8.78**	**292**	**8.78**

ಜಿಲ್ಲಾ ಪಂಚಾಯತ್ ಗಿರಿಜನ ಉಪ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ	72	2.18	72	2.18
	ಒಟ್ಟು	**72**	**2.18**	**72**	**2.18**

ತಾಲ್ಲೂಕು ಪಂಚಾಯತ್ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹೊಸತಳಿ ನಾಟಿ & ಹಿಪ್ಪುಮೇರಳೆ ನರ್ಸರಿಗೆ ಪ್ರೋತ್ಸಾಹಧನ,	36	9.71	36	9.71
	ಒಟ್ಟು	**36**	**9.71**	**36**	**9.71**

ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ ಸಾಮಾನ್ಯ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಳು ಸಾಕಾಣಿಕಾ ಮನೆ	50	135.000	50	135.000
2	ಹುಳು ಸಾಕಾಣಿಕಾ ಸಲಕರಣೆ	464	70.313	464	70.277
3	ಸೋಂಕುನಿವಾರಣೆ	25	0.938	25	0.935
	ಒಟ್ಟು	**539**	**206.251**	**539**	**206.212**

ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ ವಿಶೇಷ ಘಟಕ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಳು ಸಾಕಾಣಿಕಾ ಮನೆ	7	19.800	7	19.800
2	ಹುಳು ಸಾಕಾಣಿಕಾ ಸಲಕರಣೆ	313	75.600	313	75.600
3	ಸೋಂಕುನಿವಾರಣೆ	180	8.100	180	8.100
	ಒಟ್ಟು	**500**	**103.500**	**500**	**103.500**

ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ ಗಿರಿಜನ ಉಪ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಮಾರ್ಚ್–2021ರ ಅಂತ್ಯಕ್ಕೆ ಗುರಿ		ಮಾರ್ಚ್–2021ರ ಅಂತ್ಯಕ್ಕೆ ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಳು ಸಾಕಾಣಿಕಾ ಸಲಕರಣೆ	70	16.875	68	16.875
2	ಸೋಂಕುನಿವಾರಣೆ	12	5.940	12	5.940
	ಒಟ್ಟು	**82**	**22.815**	**80**	**22.815**

13. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 4 ತಾಲ್ಲೂಕುಗಳಿದ್ದು, ಅವುಗಳು ದೇವನಹಳ್ಳಿ: ದೊಡ್ಡಬಳ್ಳಾಪುರ: ಹೊಸಕೋಟೆ: ನೆಲಮಂಗಲ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ನಗರಗಳ ಜನ ಸಂಖ್ಯೆಯನ್ನು ಹೊರತುಪಡಿಸಿ, ಗ್ರಾಮೀಣ ಪ್ರದೇಶಗಳಲ್ಲಿ 7,54,345 ಜನಸಂಖ್ಯೆ ಇರುತ್ತದೆ. ಈ ಜಿಲ್ಲೆಯ ಭೌಗೋಳಿಕ ಪ್ರದೇಶವು 2,295.15 ಚದರ ಕಿ.ಮೀ.ಗಳಾಗಿದ್ದು, ಒಟ್ಟು 1,271 ಜನವಸತಿಗಳಲ್ಲಿ 951 ಕಂದಾಯ ಗ್ರಾಮಗಳಿರುತ್ತವೆ. ಜಿಲ್ಲೆಯಲ್ಲಿ ಸರಾಸರಿ ವಾರ್ಷಿಕ ಮಳೆಯು ಪ್ರಮಾಣ 748 ಮಿ.ಮೀ.ಅಗಿರುತ್ತದೆ. ಜಿಲ್ಲೆಯಲ್ಲಿ ಸದಾ ಕಾಲ ಹರಿಯುವ ನೀರಿನ ಜಲಮೂಲ ಇರುವುದಿಲ್ಲ. ಜಿಲ್ಲೆಯು ಮುಖ್ಯವಾಗಿ ಅಂತರ್ಜಲದ ನೀರಿನ ಮೇಲೆ ಅವಲಂಬಿತವಾಗಿದೆ. ಅಂತರ್ಜಲ ಮಟ್ಟ ದಿನೇದಿನೇ ಕುಸಿಯುತ್ತಿರುತ್ತದೆ,

1. 2020–21 ನೇ ಸಾಲಿನ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವರದಿ:

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 2659.65 ಕಿ.ಮೀ.ಉದ್ದದ ಗ್ರಾಮಾಂತರ ರಸ್ತೆಗಳು ಈ ವಿಭಾಗದ ಉಸ್ತುವಾರಿಯಲ್ಲಿರುತ್ತದೆ. ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ನಿರ್ವಹಣೆ ಮಾಡಲು 2020–21ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಯಡಿ ವಿವರಗಳು ಈ ಕೆಳಕಂಡಂತಿ ಇರುತ್ತವೆ. ಸದರಿ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆಯಡಿ ಅನುಮೋದನೆ ಗೊಂಡಿರುವ ರಸ್ತೆಗಳನ್ನು ನಿರ್ವಹಣೆ ಹಾಗೂ ಅಭಿವೃದ್ದಿಪಡಿಸಿ ವಾಹನಗಳ ಸುಗಮ ಓಡಾಟಕ್ಕೆ ಅನುಕೂಲ ಮಾಡಲಾಗವುದು.

ರಸ್ತೆಗಳ ಘೋಶ್ವಾರೆ: **(ರೂ.ಲಕ್ಷಗಳಲ್ಲಿ)**

ಕ್ರ. ಸಂ	ಲೆಕ್ಕ ಶೀರ್ಷಿಕೆ	ನಿಗಧಿತ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ	ಪೂರ್ಣಗೊಂಡ ಕಾಮಗಾರಿಗಳು	ಒಟ್ಟು ವೆಚ್ಚ
1.	3054 ಸಿ.ಎಂ.ಜಿ.ಎಸ್.ವೈ	153.16	61.34	59	59	61.34
2.	3054 ಗ್ರಾಮೀಣ ರಸ್ತೆಗಳ ನಿರ್ವಹಣೆ / ದುರಸ್ಥಿ	2020–21 ನೇ ಸಾಲಿಗೆ ಅನುದಾನ ಘೋಷಣೆಯಾಗಿರುವುದಿಲ್ಲ.				

2. 2020–21ನೇ ಸಾಲಿನ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವರದಿ:

2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ರೂ. 258.56 ಲಕ್ಷಗಳ ಅನುದಾನದಲ್ಲಿ 67 ವಿವಿಧ ಇಲಾಖೆ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಗಳು ಹಾಗೂ 2059– ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ ಯೋಜನೆಯಡಿ ರೂ. 156.81 ಲಕ್ಷಗಳ ಅನುದಾನದಲ್ಲಿ 81 ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ ಒಟ್ಟಾರೆ 148 ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕ ಶೀರ್ಷಿಕೆ	ನಿಗಧಿತ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ	ಪೂರ್ಣಗೊಂಡ ಕಾಮಗಾರಿಗಳು	ಒಟ್ಟು ವೆಚ್ಚ
1	ವಿವಿಧ ಇಲಾಖೆ ಕಟ್ಟಡಗಳ ನಿರ್ವಹಣೆ / ದುರಸ್ಥಿ	258.56	234.52	67	67	234.52
2	ವಿವಿಧ ಇಲಾಖೆಯ ಯೋಜನೆಯ ಸಿವಿಲ್ ಕಾಮಗಾರಿಗಳು	156.81	156.81	81	81	155.32

3. 2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಲ್ಲಿ 2515–00–101–0–31 ಶಾಸನ ಬದ್ದ ಅನುದಾನದಲ್ಲಿ ರೂ. 497.82 ಲಕ್ಷಗಳು ಅನುದಾನದಲ್ಲಿ ರಸ್ತೆ ಹಾಗೂ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆಗಾಗಿ 195 ಕಾಮಗಾರಿಗಳು ಕೈಗೊಳ್ಳಲಾಗಿದ್ದು ಅವುಗಳಲ್ಲಿ 195 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕ ಶೀರ್ಷಿಕೆ	ನಿಗಧಿತ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ	ಪೂರ್ಣಗೊಂಡ ಕಾಮಗಾರಿಗಳು	ಒಟ್ಟು ವೆಚ್ಚ
1	2515–00–101–0–31 ಶಾಸನ ಬದ್ದ ಅನುದಾನದ ಕಾಮಗಾರಿಗಳು	497.82	497.82	195	195	492.67

4. 2020–21ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಲ್ಲಿ 15ನೇ ಹಣಕಾಸು ಯೋಜನೆ ಅನುದಾನದಲ್ಲಿ ರೂ. 149.615 ಲಕ್ಷಗಳು ಅನುದಾನದಲ್ಲಿ ರಸ್ತೆ ಹಾಗೂ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆಗಾಗಿ 90 ಕಾಮಗಾರಿಗಳು ಕೈಗೊಳ್ಳಲಾಗಿದ್ದು ಅವುಗಳಲ್ಲಿ 90 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕ ಶೀರ್ಷಿಕೆ	ನಿಗಧಿತ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ	ಪೂರ್ಣಗೊಂಡ ಕಾಮಗಾರಿಗಳು	ಒಟ್ಟು ವೆಚ್ಚ
1	15ನೇ ಹಣಕಾಸು ಯೋಜನೆ ಅನುದಾನದ ಕಾಮಗಾರಿಗಳು	149.615	0.00	90	90	0.00

5. ಸಣ್ಣ ನೀರಾವರಿ ಕೆರೆ ಕಾಮಗಾರಿಗಳಿಗೆ ಸಂಬಂಧಿಸಿದ ವರದಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವಿಭಾಗದ 4 ತಾಲ್ಲೂಕುಗಳಲ್ಲಿ 40 ಹೆಕ್ಟೇರ್‌ಗಿಂತ ಕಡಿಮೆ ಇರುವ ಒಟ್ಟು 611 ಸಣ್ಣ ನೀರಾವರಿ ಕೆರೆಗಳಿರುತ್ತವೆ. ಲೆಕ್ಕ ಶೀರ್ಷಿಕೆ: 2702–10–101–0–26 ಯೋಜನೇತರ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಅಡಿಯಲ್ಲಿ ರೂ. 99.62 ಲಕ್ಷಗಳ ಅನುದಾನದಲ್ಲಿ ಒಟ್ಟು 29 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಅವುಗಳಲ್ಲಿ 29 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ರೂ. 94.66 ಲಕ್ಷಗಳ ವೆಚ್ಚವನ್ನು ಭರಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸದರಿ ಕೆರೆಗಳಲ್ಲಿನ ಒತ್ತುವರಿಯನ್ನು ತೆರವುಗೊಳಿಸಲು ಬೌಂಡರಿ ಟ್ರಂಚ್ ಹಾಗೂ ಗಡಿ ಕಲ್ಲುಗಳನ್ನು ನೆಡಲು ಕ್ರಮ ಕೈಗೊಳ್ಳಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕ ಶೀರ್ಷಿಕೆ	ನಿಗಧಿತ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ	ಪೂರ್ಣಗೊಂಡ ಕಾಮಗಾರಿಗಳು	ಒಟ್ಟು ವೆಚ್ಚ
1	2702–10–101–0–26 ಯೋಜನೇತರ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ 'ಕಾಮಗಾರಿಗಳು	99.62	99.62	29	29	94.66

14. ಸಾರ್ವಜನಿಕ ಶಿಕ್ಷಣ ಇಲಾಖೆ

1. ಶಾಲಾ/ ಕಾಲೇಜು:

ಈ ಜಿಲ್ಲೆಯಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿವರ

ಕ್ರ. ಸಂ.	ವಿವರ	ಸರ್ಕಾರಿ	ಅನುದಾನಿತ	ಅನುದಾನ ರಹಿತ	ಒಟ್ಟು
1.	ಕಿರಿಯ ಪ್ರಾಥಮಿಕ ಶಾಲೆಗಳು(1–5)	641	0	22	663
2.	ಹಿರಿಯ ಪ್ರಾಥಮಿಕ ಶಾಲೆಗಳು(1–7/8)	435	15	57	507
3.	ಪ್ರೌಢಶಾಲೆಗಳು(1–10,8–10)	63	49	185	297

ಶಿಕ್ಷಕರ ವಿವರ: ಪ್ರಾಥಮಿಕ ಶಾಲಾ ವಿಭಾಗ

ಕ್ರ. ಸಂ.	ಶಿಕ್ಷಕರು	ಸರ್ಕಾರದಿಂದ ಮಂಜೂರಾದ ಹುದ್ದೆ	ಕಾರ್ಯ ನಿರ್ವಹಿ ಸುತ್ತಿರುವವರು	ಖಾಲಿ ಹುದ್ದೆ	ಖಾಸಗಿ ಅನುದಾನಿತ ಮಂಜೂರಾದ ಹುದ್ದೆ	ಖಾಸಗಿ ಅನುದಾನಿತ ಕಾರ್ಯನಿರ್ವಹಿ ಸುತ್ತಿರುವವರು	ಖಾಲಿ ಹುದ್ದೆ
1.	ಸರ್ವ ಶಿಕ್ಷಣ ಅಭಿಯಾನ	185	159	26	0	0	0
2.	ಪ್ರಾಥಮಿಕ (ಯೋಜನೇತರ)	3309	3145	164	0	0	0
ಶಿಕ್ಷಕರ ವಿವರ: ಪ್ರೌಢಶಾಲಾ ವಿಭಾಗ							
1.	ಯೋಜನೆ	0	0	0	0	0	0
2.	ಯೋಜನೇತರ	741	705	36	0	0	0

ವಿದ್ಯಾರ್ಥಿಗಳ ಸಂಖ್ಯೆ:

ಕ್ರ.ಸಂ.	ತರಗತಿ	ಗಂಡು	ಹೆಣ್ಣು	ಒಟ್ಟು
1.	1 ರಿಂದ 5ನೇ ತರಗತಿ	14153	14945	29098
2.	6 ರಿಂದ 7ನೇ ತರಗತಿ	6578	6826	13404
3.	8 ರಿಂದ 10ನೇ ತರಗತಿ	7570	7493	15063

2. ಆಯವ್ಯಯ: 2020–21

2020–21ನೇ ಸಾಲಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳಡಿಯಲ್ಲಿ ವೇತನ ಮತ್ತು ಇತರೆ ಬಾಬ್ತುಗಳಿಗೆ ಪ್ರಸ್ತಾಪಿತ ಹಣ ಬಿಡುಗಡೆಯಾದ ಬಗ್ಗೆ ಮಾಹಿತಿ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವಿವರ	ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚು
ಸರ್ಕಾರಿ ವೇತನ				
1.	ಪ್ರಾಥಮಿಕ ಶಿಕ್ಷಣ	20062.12	18089.87	17336.92
2.	ಪ್ರೌಢಶಿಕ್ಷಣ	5359.56	4860.07	4669.68
ಅನುದಾನಿತ /ಖಾಸಗಿ ಶಾಲೆಗಳಿಗೆ ವೇತನ				
1.	ಪ್ರಾಥಮಿಕ ಶಿಕ್ಷಣ	506.00	473.07	450.05
2.	ಪ್ರೌಢಶಿಕ್ಷಣ	2698.00	2614.07	2608.85

ಪರೀಕ್ಷಾ ಫಲಿತಾಂಶ:

ಕ್ರ. ಸಂ.	ವಿವರ	ಪರೀಕ್ಷೆಗೆ ಕುಳಿತವರು			ಪಾಸಾದವರು			ಶೇಕಡ ವಾರು
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
1.	ಎಸ್.ಎಸ್.ಎಲ್.ಸಿ.	6299	6109	12408	5572	5650	11222	90.44

ಜಿಲ್ಲೆಯ ಫಲಿತಾಂಶ ರಾಜ್ಯದಲ್ಲಿ 2ನೇ ಸ್ಥಾನ ಪಡೆದಿರುತ್ತದೆ.

ಸರ್ವ ಶಿಕ್ಷಣ ಅಭಿಯಾನ:– ಸರ್ವ ಶಿಕ್ಷಣ ಅಭಿಯಾನವು ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದೊಂದಿಗೆ ಹಾಗೂ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವಾಗಿದೆ. ಸಮುದಾಯವು ಶಾಲಾ ವ್ಯವಸ್ಥೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದರ ಮೂಲಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಕಾರ್ಯಕ್ರಮವಾಗಿದೆ. ಈ ಸಾಲಿನಲ್ಲಿ ಲಕ್ಷ ರೂ. **1898.09** ಗಳಿಗೆ ಯೋಜನೆ ಸಿದ್ದಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ರೂ. **2228.26**ಲಕ್ಷ ಬಿಡುಗಡೆಯಾಗಿ ನಿಗದಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಅನುಷ್ಠಾನಗೊಳಿಸಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು

ಕ್ರ.ಸಂ.	ಯೋಜನೆ	ವಿವರ
1.	ಅಕ್ಷರ ದಾಸೋಹ	1 ರಿಂದ 10ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ಒಟ್ಟು **68407** ಮಕ್ಕಳಿಗೆ ಬಿಸಿಯೂಟ ಮತ್ತು ಕ್ಷೀರ ಭಾಗ್ಯ ಯೋಜನೆಯಡಿ ಬಿಸಿ ಹಾಲು ನೀಡಲಾಗಿದೆ.
2.	ಪಠ್ಯ ಪುಸ್ತಕ	1 ರಿಂದ 10ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ಒಟ್ಟು **68407** ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಣೆ ಮಾಡಲಾಗಿದೆ.
3.	ಸಮವಸ್ತ್ರ	1 ರಿಂದ 10ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಶಾಲಾ ಒಟ್ಟು **57565** ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ ಮಾಡಲಾಗಿದೆ.
4.	ಷೂ & ಸಾಕ್ಸ್	1 ರಿಂದ 10ನೇ ತರಗತಿಯವರೆಗಿನ ಎಲ್ಲಾ ಸರ್ಕಾರಿ ಶಾಲಾ ಒಟ್ಟು **57565** ವಿದ್ಯಾರ್ಥಿಗಳಿಗೆ ಉಚಿತ ಷೂ & ಸಾಕ್ಸ್ ವಿತರಣೆ ಮಾಡಿರುವುದಿಲ್ಲ.

ನಮೂನೆ–8

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ 2020–21ನೇ ಸಾಲಿನ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯಾಬಲ

ಶಾಲೆಯ ವಿಧ	ಶಾಲೆಗಳ ಸಂಖ್ಯೆ		ಸರ್ಕಾರಿ ಶಾಲೆಗಳ ಲ್ಲಿರುವ ಸಂಖ್ಯಾಬಲ		ಖಾಸಗಿ ಶಾಲೆಗಳ ಸಂಖ್ಯೆ/ಅನುದಾನಿತ/ ಅನುದಾನ ರಹಿತ		ಎಲ್ಲಾ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ		ಒಟ್ಟು
	ಸರ್ಕಾರಿ	ಖಾಸಗಿ	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	
ಹಿ.ಪ್ರಾ.ಶಾಲೆಗಳು	435	72	6578	6878	15583	13251	22161	20129	42290
ಕಿ.ಪ್ರಾ.ಶಾಲೆಗಳು	641	22	14153	14945	26116	22270	29098	37215	66313

ನಮೂನೆ–9

2020–21ನೇ ಸಾಲಿನ ಪ್ರೌಢಶಾಲೆಗಳ ಸಂಖ್ಯಾಬಲ

ಶಾಲೆಯ ವಿಧ	ಶಾಲೆಗಳ ಸಂಖ್ಯೆ		ಜಿ.ಪಂ. ಶಾಲೆಗಳಲ್ಲಿರುವ ಸಂಖ್ಯಾಬಲ		ಇತರೆ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ		ಎಲ್ಲಾ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ		ಒಟ್ಟು
	ಸರ್ಕಾರಿ	ಖಾಸಗಿ	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	
ಪ್ರೌಢ ಶಾಲೆಗಳು	63	234	7570	7493	15885	13802	23455	21295	44750

ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು

ತಾಲ್ಲೂಕು	ಶಾಲೆಗಳ ಸಂಖ್ಯೆ	ಲಭ್ಯವಿರುವ ಮೂಲಭೂತ ಸೌಲಭ್ಯಗಳು				
		ನೀರು	ಶೌಚಾಲಯ	ಶಾಲಾ ಕೊಠಡಿಗಳು	ವಿದ್ಯುತ್	ಕಾಂಪೌಂಡ್
ದೇವನಹಳ್ಳಿ	208	208	208	798	208	196
ದೊಡ್ಡಬಳ್ಳಾಪುರ	336	336	336	1096	336	319
ಹೊಸಕೋಟೆ	252	252	252	971	252	239
ನೆಲಮಂಗಲ	280	280	280	1000	280	257
ಒಟ್ಟು	**1076**	**1076**	**1076**	**3865**	**1076**	**1011**

ಸರ್ಕಾರಿ ಪ್ರೌಢಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು

ತಾಲ್ಲೂಕು	ಶಾಲೆಗಳ ಸಂಖ್ಯೆ	ಲಭ್ಯವಿರುವ ಮೂಲಭೂತ ಸೌಲಭ್ಯಗಳು				
		ನೀರು	ಶೌಚಾಲಯ	ಶಾಲಾ ಕೊಠಡಿಗಳು	ವಿದ್ಯುತ್	ಕಾಂಪೌಂಡ್
ದೇವನಹಳ್ಳಿ	17	17	17	141	17	15
ದೊಡ್ಡಬಳ್ಳಾಪುರ	16	16	16	204	16	15
ಹೊಸಕೋಟೆ	19	19	19	218	19	18
ನೆಲಮಂಗಲ	11	11	11	101	11	10
ಒಟ್ಟು	**63**	**63**	**63**	**664**	**63**	**58**

ಅಕ್ಷರ ದಾಸೋಹ

ಉದ್ದೇಶ: ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಒಪ್ಪಂದದಲ್ಲಿ ಘೋಷಿಸಲ್ಪಟ್ಟಿರುವಂತೆ ಪ್ರತಿಯೊಬ್ಬ ಹಸಿದ ಮಗುವಿಗೂ ಆಹಾರವನ್ನು ಒದಗಿಸಬೇಕಾಗಿದೆ. ಮಧ್ಯಾಹ್ನ ಉಪಹಾರ ಯೋಜನೆಯು ಒಂದು ಪ್ರತಿಷ್ಠಿತ ಯೋಜನೆಯಾಗಿದ್ದು, ಮಕ್ಕಳು ಆರೋಗ್ಯಪೂರ್ಣವಾಗಿ ಶಕ್ತಿವಂತರು ಹಾಗೂ ದೃಢಕಾಯರಾಗಿ ಬೆಳೆಯಲು ಒಂದು ಸದವಕಾಶ ಕಲ್ಪಿಸುವ ಬದ್ಧತೆಯಿಂದ ಕೂಡಿದ್ದು, ಸಹಕಾರಿಯಾಗಿದೆ. ಸದರಿ ಕಾರ್ಯಕ್ರಮದ ಪ್ರಮುಖ ಉದ್ದೇಶವು ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಸಿವು ನೀಗಿಸಿ ತನ್ಮೂಲಕ ಅವರ ಕಲಿಕಾ ಸಾಮರ್ಥ್ಯಗಳನ್ನೂ ಮತ್ತು ಸಾಧನೆಗಳನ್ನು ಹೆಚ್ಚಿಸುವುದಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ 04 ತಾಲ್ಲೂಕುಗಳಲ್ಲಿ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಒಟ್ಟು 1200 ಸರ್ಕಾರಿ ಮತ್ತು ಅನುದಾನಿತ ಶಾಲೆಗಳು ಇರುತ್ತವೆ. ಇವುಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳು, ಕಿರಿಯ ಪ್ರಾಥಮಿಕ ಶಾಲೆಗಳು 1 ರಿಂದ 5 ನೇ ತರಗತಿ ಒಟ್ಟು:641 ಹಿರಿಯ ಪ್ರಾಥಮಿಕ ಶಾಲೆಗಳು 1 ರಿಂದ 8 ನೇ ತರಗತಿ ಒಟ್ಟು: 443 ಮತ್ತು ಪ್ರೌಢ ಶಾಲೆಗಳು ಒಟ್ಟು: 116 ಇರುತ್ತವೆ. ಈ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ಒಟ್ಟು 68302 ಮಕ್ಕಳು ವ್ಯಾಸಂಗ ಮಾಡುತ್ತಿರುತ್ತಾರೆ, ಹಾಗೂ ಎಲ್ಲಾ ಮಕ್ಕಳು ಫಲಾನುಭವಿಗಳಾಗಿರುತ್ತಾರೆ. 1200 ಅಡುಗೆ ಕೆಂದ್ರಗಳಲ್ಲಿ ಆಯಾ ಶಾಲಾ ಹಂತದಲ್ಲಿಯೇ ಅಡುಗೆ ತಯಾರಿಸುತ್ತಿರುತ್ತಾರೆ. ಕೋವಿಡ್–19ನಿಂದಾಗಿ ಶಾಲಾ ಅಡುಗೆ ಕೇಂದ್ರಗಳಲ್ಲಿ ಬಿಸಿಯೂಟ ತಯಾರಿಸುವ ಬದಲು ಆಹಾರ ಭದ್ರತಾ ಭತ್ಯೆ ರೂಪದಲ್ಲಿ ಆಹಾರ ಧಾನ್ಯಗಳನ್ನು ಮಕ್ಕಳಿಗೆ/ಪೋಷಕರಿಗೆ ವಿತರಿಸಲಾಗಿದೆ.

ಅಡುಗೆಯವರು: ಜಿಲ್ಲೆಯಲ್ಲಿ 2076 ಅಡುಗೆಯವರು ಕಾರ್ಯ ನಿರ್ವಹಿಸುತ್ತಿದ್ದು ಮುಖ್ಯ ಅಡುಗೆಯವರಿಗೆ ರೂ.2700/– ಹಾಗೂ ಸಹಾಯಕ ಅಡುಗೆಯವರಿಗೆ ರೂ.2600/– ಮಾಸಿಕ ಗೌರವಧನ 01–01–2018 ರಿಂದ ಅನ್ವಯವಾಗುವಂತೆ ನೀಡಲಾಗುತ್ತಿದೆ.

ಮಧ್ಯಾಹ್ನ ಉಪಹಾರ ಯೋಜನೆಯ ಅಂಕಿ ಅಂಶಗಳ ವಿವರ								
ಶಾಲೆಗಳ ವಿವರ			ವಿದ್ಯಾರ್ಥಿಗಳ ವಿವರ			ಅಡುಗೆಯವರ ವಿವರ		
ಸರ್ಕಾರಿ	ಅನುದಾನಿತ	ಒಟ್ಟು	ಸರ್ಕಾರಿ	ಅನುದಾನಿತ	ಒಟ್ಟು	ಮುಖ್ಯ ಅಡುಗೆಯವರ	ಸಹಾಯಕ ಅಡುಗೆಯವರ	ಒಟ್ಟು
1136	64	1200	57473	10829	68302	1200	873	2076







ಕೋವಿಡ್–19 ಸುರಕ್ಷಿತ ನಿಯಮ ಪಾಲಿಸಿ ಆಹಾರ ಧಾನ್ಯಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು / ಪೋಷಕರು




ಪೋಷಣಾ ಅಭಿಯಾನದಲ್ಲಿ ಭಾಗವಹಿಸಿರುವ ಮಕ್ಕಳು.

ಆಹಾರ ಧಾನ್ಯ: ಬಿಸಿಯೂಟ ಯೋಜನೆಯಡಿಯಲ್ಲಿ ಭಾರತ ಆಹಾರ ನಿಗಮದಿಂದ ಅಕ್ಕಿ ಎತ್ತುವಳಿ ಮಾಡುತ್ತಿದ್ದು, ಕೆ.ಎಫ್.ಸಿ.ಎಸ್.ಸಿ ಯವರಿಂದ ಬೇಳೆ ಎಣ್ಣೆ ಮತ್ತು ಆಯೋಡಿಕರೀಸಿದ ಉಪ್ಪು ಖರೀದಿಸುತ್ತಿದ್ದು, ಮಕ್ಕಳ ಆಹಾರ ತಯಾರಿಕೆಗೆ ತಗಲುವ ಸಾದಿಲ್ವಾರು ವೆಚ್ಚಕ್ಕೆ ಅನುಗುಣವಾಗಿ ಆಹಾರ ಭದ್ರತ

ಭತ್ಯೆ ರೂಪದಲ್ಲಿ ಆಹಾರ ಧಾನ್ಯಗಳನ್ನು ಕೋವಿಡ್–19 ಮುಂಜಾಗ್ರತ ಕ್ರಮಗಳನ್ನು ಅನುಸರಿಸುತ್ತ ಪೋಷಕರು/ಮಕ್ಕಳಿಗೆ ವಿತರಣೆಮಾಡಲಾಗಿದೆ.





ರಾಜ್ಯ ಸಮಿತಿಯಿಂದ ಆಹಾರ ಧಾನ್ಯದ ಗುಣಮಟ್ಟದ ಪರಿಶೀಲನೆ (ಜಂಟಿ ನಿರ್ದೇಶಕರು, ಸಾ.ಶಿ.ಇ)

ಪಾತ್ರೆ ಪರಿಕರ: 2020–21 ನೇ ಸಾಲಿನಲ್ಲಿ ಅಕ್ಷರ ದಾಸೋಹ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ನೆಲಮಂಗಲ ತಾಲ್ಲೂಕಿನ 2 ಪ್ರೌಢ ಶಾಲೆಗಳಿಗೆ ಅವಶ್ಯಕತೆಯಿರುವ ಪಾತ್ರೆ ಪರಿಕರ ಖರೀದಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. (ಪ್ರತಿ ಶಾಲೆಗೆ ರೂ. 10,000/– ನಂತೆ)

ಅನುದಾನ: 2020–21 ನೇ ಸಾಲಿನಲ್ಲಿ ಅಕ್ಷರ ದಾಸೋಹ ಯೋಜನೆಗೆ ರೂ.2628.27 ಲಕ್ಷಗಳು ನಿಗಧಿಯಾಗಿದ್ದು, ಆರ್ಥಿಕ ಇಲಾಖೆಯಿಂದ ಒಟ್ಟಾರೆ ನಿಗದಿಯಾದ ಅನುದಾನದಲ್ಲಿ ರೂ.803 ಲಕ್ಷಗಳು ಕಡಿತಗೊಳಿಸಿರುತ್ತದೆ ಹಾಗೂ ರೂ.1825.27 ಲಕ್ಷಗಳು ಅನುದಾನವನ್ನು ಪರಿಷ್ಕೃತಗೊಳಿಸಿ ನಿಗದಿಗೊಳಿಸಿರುತ್ತದೆ. ಸದರಿ ಅನುದಾನದಲ್ಲಿ ರೂ.1824.57 ಲಕ್ಷಗಳು ಸರ್ಕಾರದಿಂದ ಬಿಡುಗಡೆಗೊಂಡಿದ್ದು ಮಾರ್ಚ್–2021 ರ ಅಂತ್ಯಕ್ಕೆ ಮರುಮೌಲ್ಯೀಕರಿಸಿದ ಅನುದಾನ ಸಹಿತ ರೂ.1873.38 ಲಕ್ಷಗಳನ್ನು ವೆಚ್ಚಮಾಡಲಾಗಿರುತ್ತದೆ.

15. ಜಿಲ್ಲಾ ಲೋಕ ಶಿಕ್ಷಣ (ಅಕ್ಷರ ಬೆಳಕು)

ಗ್ರಾಮೀಣ ಪ್ರದೇಶದಲ್ಲಿನ ವಯಸ್ಕ ಅನಕ್ಷರಸ್ಥರು, ಪ್ರಮುಖವಾಗಿ ಮಹಿಳೆಯರು, ವ್ಯವಸಾಯ ದಿನಗೂಲಿ, ಮತ್ತಿತರೆ ಗ್ರಾಮೀಣ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ವತಿಯಿಂದ ಮಹಿಳಾ ಸಬಲೀಕರಣ ಮತ್ತು ಉಳಿತಾಯ ಮನೋಭಾವ ಬೆಳೆಸುವ ಉದ್ದೇಶದಿಂದ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿದ್ದು, ಈ ಸಂಘದ ಸದಸ್ಯರಲ್ಲಿ ಹಲವು ಮಂದಿ ಇನ್ನೂ ಅನಕ್ಷರಸ್ಥರಾಗಿಯೇ ಉಳಿದಿರುವುದು ಕಂಡು ಬಂದಿದೆ. ಇವರನ್ನು ಸಾಕ್ಷರರನ್ನಾಗಿ ಮಾಡುವುದು ಮತ್ತು ಅರ್ಥಿಕ ಸಾಕ್ಷರತೆ ಒದಗಿಸುವುದರಿಂದ ಅವರ ಜೀವನ ಮಟ್ಟ ಸುಧಾರಣೆಗೆ ಆಗುತ್ತದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪಡೆದ ಅಂಕಿ ಅಂಶದಂತೆ ಕರ್ನಾಟಕದಲ್ಲಿ ಒಟ್ಟು 1,50,000 ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿದ್ದು, 22,13,505 ಸದಸ್ಯರಿರುತ್ತಾರೆ. ಇವರಲ್ಲಿ 16,60,129 ಸದಸ್ಯರು ಅನಕ್ಷರಸ್ಥರಾಗಿರುತ್ತಾರೆ. ಇದರಿಂದ ಸ್ವಸಹಾಯ ಗುಂಪುಗಳ ಉದ್ದೇಶ ಸಫಲಗೊಳ್ಳುತ್ತಿಲ್ಲ. ಅಲ್ಲದೆ ಸರ್ಕಾರದ ಹಲವು ಅಭಿವೃದ್ಧಿ ಯೋಜನೆಗಳ ಪ್ರಯೋಜನೆ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಸ್ತ್ರೀ ಶಕ್ತಿ ಸ್ವಸಹಾಯ ಗುಂಪು ಸಮೂಹದಲ್ಲಿಯೇ ಸಂಪೂರ್ಣ ಸಾಕ್ಷರತೆ ಉಂಟುಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮತ್ತು ಜಿಲ್ಲಾ ಪಂಚಾಯತಿಯ ಲಿಂಕ್ ಡಾಕ್ಯುಮೆಂಟ್ ಅನುದಾನದಡಿಯಲ್ಲಿ ಅನಕ್ಷರಸ್ಥ ಪುರುಷ ಹಾಗೂ ಮಹಿಳೆಯರಿಗೆ ಸಂಪೂರ್ಣ ಸಾಕ್ಷರತೆ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ

2011 ರ ಜನಗಣತಿ ಪ್ರಕಾರ ತಾಲ್ಲೂಕುವಾರು ಸಾಕ್ಷರತಾ ಪ್ರಮಾಣ

ಕ್ರ.ಸಂ	ತಾಲ್ಲೂಕುಗಳ ವಿವರ	ಒಟ್ಟು ಸಾಕ್ಷರತೆ ಪ್ರಮಾಣ			ನಗರ			ಗ್ರಾಮೀಣ			ಶ್ರೇಣಿ
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	
1	ದೇವನಹಳ್ಳಿ	83.84	69.24	76.76	86.10	75.37	80.84	82.89	66.58	75.02	4
2	ದೊಡ್ಡಬಳ್ಳಾಪುರ	85.18	70.44	78.00	89.98	81.19	85.74	82.71	65.07	74.07	3
3	ಹೊಸಕೋಟೆ	84.45	71.01	77.98	89.58	82.68	86.22	83.11	67.89	75.79	2
4	ನೆಲಮಂಗಲ	85.76	71.79	78.91	93.26	85.68	89.52	83.59	67.70	75.81	1
ಒಟ್ಟು		**84.82**	**70.63**	**77.93**	**89.57**	**80.95**	**85.37**	**83.06**	**66.80**	**75.16**	

*ಒಟ್ಟು ದೇಶದ ಸಾಕ್ಷರತೆ ಪ್ರಮಾಣ:74.04%

*ಒಟ್ಟು ರಾಜ್ಯದ ಸಾಕ್ಷರತೆ ಪ್ರಮಾಣ:75.81%

*ಒಟ್ಟು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾಕ್ಷರತಾ ಪ್ರಮಾಣ 77.93%

ಸಾಕ್ಷರ ಭಾರತ ಕಾರ್ಯಕ್ರಮದ 2011 ರಿಂದ 2018 ರವರೆಗಿನ ಗುರಿ ಮತ್ತು ಸಾಧನೆ

ಗ್ರಾಮೀಣ ಪ್ರದೇಶ

ಕ್ರ.ಸಂ	ತಾಲ್ಲೂಕುಗಳ ವಿವರ	ಒಟ್ಟು ಅನಕ್ಷರಸ್ಥರು	ಭೌತಿಕ ಗುರಿ	ಸಾಧನೆ	ಉಳಿಕೆ
1	ದೇವನಹಳ್ಳಿ	32765	31350	26394	6371
2	ದೊಡ್ಡಬಳ್ಳಾಪುರ	48085	39773	25347	22738
3	ಹೊಸಕೋಟೆ	45408	40342	34778	10630
4	ನೆಲಮಂಗಲ	29308	25162	21085	8223
	ಒಟ್ಟು	**155566**	**136627**	**107604**	**47962**

ನಗರ ಪ್ರದೇಶ

ಕ್ರ.ಸಂ	ತಾಲ್ಲೂಕುಗಳ ವಿವರ	ಒಟ್ಟು ಅನಕ್ಷರಸ್ಥರು	ಭೌತಿಕ ಗುರಿ	ಸಾಧನೆ	ಉಳಿಕೆ
1	ದೇವನಹಳ್ಳಿ	10677	1280	810	9867
2	ದೊಡ್ಡಬಳ್ಳಾಪುರ	12300	3111	1544	10756
3	ಹೊಸಕೋಟೆ	6909	1158	0	6909
4	ನೆಲಮಂಗಲ	10551	1014	5952	4599
	ಒಟ್ಟು	**40437**	**6563**	**7852**	**32131**

ಉದ್ದೇಶಗಳು:

- ಎಲ್ಲಾ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸುವುದು
- ಸ್ತ್ರೀ ಶಕ್ತಿ ಸಂಘಗಳ ಅನಕ್ಷರಸ್ಥ ಮಹಿಳಾ ಸದಸ್ಯರನ್ನು ಸಾಕ್ಷರರನ್ನಾಗಿಸುವುದು.
- ಮಹಿಳಾ ಸದಸ್ಯರಿಗೆ ಸಂಘದ ಉದ್ದೇಶಗಳ ಹಾಗೂ ಪ್ರಯೋಜನಗಳ ಉತ್ತಮ ತಿಳುವಳಿಕೆ ಮೂಡಿಸುವುದು.
- ಮಹಿಳಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು ಮತ್ತು ಪುರುಷ ಹಾಗೂ ಮಹಿಳಾ ಸಾಕ್ಷರತಾ ಪ್ರಮಾಣದ ನಡುವಿನ ಅಂತರವನ್ನು ಕಡಿಮೆಗೊಳಿಸುವುದು.
- ಸಾಮಾಜಿಕ ಮತ್ತು ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವುದರ ಮೂಲಕ ಮಹಿಳಾ ಸಬಲೀಕರಣ ಸಾಧಿಸುವುದು.
- ಮಹಿಳೆಯರಲ್ಲಿ ಪರಸ್ಪರ ಸಹಕಾರ ಮನೋಭಾವನೆ ಬೆಳೆಸುವುದು.
- ಸಾಕ್ಷರತೆ ಮೂಲಕ ಮಹಿಳಾ ಸ್ವಸಹಾಯ ಗುಂಪುಗಳು ಹೆಚ್ಚು ಸದೃಢಗೊಳ್ಳುವಂತೆ ನೋಡಿಕೊಳ್ಳುವುದು.

ಗುರಿ:

ಜಿಲ್ಲೆಗಳ 15 ರಿಂದ 50ರ ವರೆಗಿನ ವಯೋಮಿತಿಯ ಮಹಿಳಾ ಸ್ವಸಹಾಯ ಗುಂಪುಗಳ, ಲಿಂಕ್ ಡಾಕ್ಯುಮೆಂಟ್ ಮತ್ತು ನಗರ/ಕೊಳಚೆ ಪ್ರದೇಶದ ಅನಕ್ಷರಸ್ಥರಿಗೆ ಕಲಿಕಾ ಕೇಂದ್ರಗಳ ಮೂಲಕ ಸಾಕ್ಷರತೆ ಒದಗಿಸುವ ಗುರಿ ಹೊಂದಲಾಗಿದೆ.

2020–21ನೇ ಸಾಲಿನ ಸಾಕ್ಷರತಾ ಕಾರ್ಯಕ್ರಮ ಅನುಷ್ಠಾನದ ಶೂನ್ಯ ವರದಿ

2020–21ನೇ ಸಾಲಿನಲ್ಲಿ ಈ ಕೆಳಕಂಡಂತೆ ಲಿಂಕ್ ಡಾಕ್ಯುಮೆಂಟ್ ಅನುದಾನದಲ್ಲಿ ಲೋಕ ಶಿಕ್ಷಣ ನಿರ್ದೇಶನಾಲಯದಿಂದ ನಿಗದಿಪಡಿಸಿದ್ದ ಒಟ್ಟು 2056 ಅನಕ್ಷರಸ್ಥರಿಗೆ ಸಾಕ್ಷರತಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಸಂಪೂರ್ಣ ಸಾಕ್ಷರತಾ ಗ್ರಾಮ ಪಂಚಾಯತಿಗಳೆಂದು ಘೋಷಿಸಲು ಯೋಜಿಸಲಾಗಿತ್ತು.

ಕ್ರ.ಸಂ	ತಾಲ್ಲೂಕು	ಗ್ರಾಮ ಪಂಚಾಯತಿ ಹೆಸರು	ಗ್ರಾಮಗಳ ಸಂಖ್ಯೆ	ಅನಕ್ಷರಸ್ಥರ ಸಂಖ್ಯೆ		
				ಪು	ಮ	ಒಟ್ಟು
1	ದೇವನಹಳ್ಳಿ	ಬಿಜ್ಜವಾರ	5	177	266	443
2	ದೊಡ್ಡಬಳ್ಳಾಪುರ	ಎಸ್.ಎಸ್ ಘಾಟಿ (ಮೇಲಿನಜೂಗಾನಹಳ್ಳಿ)	10	280	580	860
3	ಹೊಸಕೋಟೆ	ನೆಲವಾಗಿಲು	12	70	166	236
4	ನೆಲಮಂಗಲ	ಹಸಿರುವಳ್ಳಿ	8	198	319	517
ಒಟ್ಟು				**725**	**1331**	**2056**

ಆದರೆ ಸಾಂಕ್ರಮಿಕ ರೋಗ ಕೋವಿಡ್–19 ಹರಡುವಿಕೆಯಿಂದ ಸರ್ಕಾರದ ಸೂಚನೆಯನ್ವಯ 19/03/2020 ರಿಂದ ಡಿಸೆಂಬರ್–2020 ಮಾಹೆಯವರೆಗೆ ಸಾಕ್ಷರತಾ ಕಾರ್ಯಕ್ರಮದ ಅನುಷ್ಠಾನವನ್ನು ಸ್ಥಗಿತಗೊಳಿಸಲಾಗಿತ್ತು. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಅನಕ್ಷರಸ್ಥರ ಕಲಿಕೆಗೆ ಆರು ತಿಂಗಳ ಕಾಲಾವಧಿ ಬೇಕಾಗಿದ್ದು, 31 ನೇ ಮಾರ್ಚ್–2021 ರೊಳಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸಾಧ್ಯವಾಗದ ಕಾರಣ ನಿಗದಿಯಾಗಿದ್ದ 2056 ಅನಕ್ಷರಸ್ಥರ ಸಾಕ್ಷರತಾ ಕಾರ್ಯಕ್ರಮದ ಪ್ರಗತಿ ಶೂನ್ಯವಾಗಿರುತ್ತದೆ.

ಕಾರ್ಯಕ್ರಮ ಅನುಷ್ಠಾನದ ಮಾರ್ಗೋಪಾಯಗಳು:

- ಸಮಿತಿಗಳ ರಚನೆ
- ವಾತಾವರಣ ನಿರ್ಮಾಣ
- ಕಲಿಕಾ ಬೋಧನಾ ಸಾಮಗ್ರಿ ಒದಗಿಸುವುದು
- ತರಬೇತಿ
- ಕಲಿಕಾ ಮತ್ತು ಬೋಧನಾ ಪ್ರಕ್ರಿಯೆ
- ಪರಿವೀಕ್ಷಣೆ
- ಮೌಲ್ಯ ಮಾಪನ/ಪರೀಕ್ಷೆ
- ಅನುದಾನ
- ಬೋಧಕರಿಗೆ ಪ್ರೋತ್ಸಾಹ ಧನ
- ಸಹಯೋಗ
- ಪಾತ್ರ ಸ್ಪಷ್ಟತೆ

- ಜಿಲ್ಲಾ ಲೋಕ ಶಿಕ್ಷಣ ಸಮಿತಿ
- ತಾಲ್ಲೂಕು ಲೋಕ ಶಿಕ್ಷಣ ಸಮಿತಿ
- ಗ್ರಾಮ ಪಂಚಾಯತಿ ಲೋಕ ಶಿಕ್ಷಣ ಸಮಿತಿ
- ಜಿಲ್ಲಾ ಮತ್ತು ತಾಲ್ಲೂಕು ನಗರ ಸಾಕ್ಷರತಾ ಸಮಿತಿ

ಕ್ರ.ಸಂ	ಕಾರ್ಯಕ್ರಮದ ವಿವರ	ನಿಗಧಿ ಪಡಿಸಿದ ಗುರಿ	ಸಾಧನೆ	ಬಿಡುಗಡೆಯಾದ ಅನುದಾನ	ಖರ್ಚು	ಉಳಿಕೆ
1	ಲಿಂಕ್ ಡಾಕ್ಯುಮೆಂಟ್ ಮೂಲ ಸಾಕ್ಷರತಾ	2056	0	5,14,000/–	0	5,14,000/–

ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ

08/09/2020 ರಂದು ಜಿಲ್ಲಾ ಮಟ್ಟದ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಜಿಲ್ಲಾಡಳಿತ ಭವನದಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಂ.ಎನ್. ನಾಗರಾಜ ರವರಿಂದ ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತ್ತು, ಮುಖ್ಯ ಆತಿಥಿಗಳಾಗಿ ಉಪಾಧ್ಯಕ್ಷರು ಬೆಂ.ಗ್ರಾ.ಜಿಲ್ಲಾ ಪಂಚಾಯತ್ ರವರು ಭಾಗವಹಿಸಿದ್ದರು. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಾದ ಶ್ರೀ ಹನುಮಂತಪ್ಪ ರವರು ಎಲ್ಲರಿಗೂ ಸ್ವಾಗತ ಕೋರಿ ಪ್ರಾಸ್ತವಿಕವಾಗಿ ಕಾರ್ಯಕ್ರಮದ ಬಗ್ಗೆ ತಿಳಿಸುತ್ತಾ. ರಾಷ್ಟ್ರೀಯ, ರಾಜ್ಯ ಮತ್ತು ನಮ್ಮ ಜಿಲ್ಲೆಯ ಸಾಕ್ಷರತಾ ಪ್ರಮಾಣ, ಲಿಂಗಾನುಪಾತದ ಸಾಕ್ಷರತಾ ಪ್ರಮಾಣ, ಇದುವರೆಗು ಜಿಲ್ಲೆಯಲ್ಲಿ

ನವಸಾಕ್ಷರರಾಗಿರುವವರ ಸಂಖ್ಯೆ ಹಾಗೂ ಉಳಿಕೆ ಅನಕ್ಷರಸ್ಥರ ಸಂಖ್ಯೆಯ ಆಂಕಿ ಅಂಶಗಳನ್ನು ವಿವರಿಸಿದರು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಂ.ಎನ್ ನಾಗರಾಜ ರವರು ಮಾತನಾಡಿ ರಾಷ್ಟ್ರ, ರಾಜ್ಯಮಟ್ಟದಿಂದ ಹಿಡಿದು ಗ್ರಾಮ ಪಂಚಾಯಿತಿ ಮಟ್ಟದವರೆಗೆ ಅನಕ್ಷರಸ್ಥರನ್ನು, ಅಕ್ಷರಸ್ಥರನ್ನಾಗಿ ಪರಿವರ್ತಿಸಬೇಕು, ಗ್ರಾಮೀಣ ಮಟ್ಟದಲ್ಲಿನ ಅಲ್ಪಸಂಖ್ಯಾತರ, ಪರಿಶಿಷ್ಟ ವರ್ಗಗಳ ಮಹಿಳೆಯರ ಮತ್ತು ಪುರುಷರ ಶೈಕ್ಷಣಿಕಮಟ್ಟ ಸುಧಾರಣೆಗಾಗಿ ಸಾಕ್ಷರತಾ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮನಿಸಿದ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀಮತಿ ಕನ್ಯಾಕುಮಾರಿ ಶ್ರೀನಿವಾಸ್ ಮಾತನಾಡಿ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣ ಶೇ 77.93ರಷ್ಟು ಇದೆ. ಸಾಕ್ಷರತಾ ಅಂದೋಲನ ಪ್ರಾರಂಭವಾದಾಗ ಪ್ರತಿಯೊಂದು ಹಳ್ಳಿಗಳಲ್ಲಿ ಮನೆಗಳಿಗೆ ತೆರಳಿ, ಅಕ್ಷರ ಜ್ಞಾನದ ಕುರಿತು ಜಾಗೃತಿ ಮೂಡಿಸಲಾಗಿದೆ. ಇದರ ಪರಿಣಾಮ ಪ್ರಸ್ತುತ ಸ್ತ್ರೀಯರು ಸ್ವತಃ ಸಂಘ–ಸಂಸ್ಥೆಗಳನ್ನು ಕಟ್ಟಿಕೊಂಡು ಮುಖ್ಯವಾಹಿನಿಗೆ ಮುಖ ಮಾಡಿ ಸಮಾಜದ ಲೆಕ್ಕಾಚಾರಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದು ಹೇಳಿದರು ಸಕಲ ಸಮಸ್ಯೆಗಳಿಗೂ ಅನಕ್ಷರತೆಯೇ ಕಾರಣ. ಅಂಧಾನುಕರಣೆ ಮೂಢನಂಬಿಕೆ ಹಾಗೂ ಬಡತನಗಳಿಗೆ ಅನಕ್ಷರತೆಯೇ ಮೂಲವಾಗಿದೆ, ಸಾಕ್ಷರರಿಗೆ ಮಾತ್ರ ಸಮಾಜದಲ್ಲಿ ಬೆಲೆ ಇದ್ದು, ಪ್ರತಿಯೊಂದು ಹಳ್ಳಿಗಳ ಮೂಲೆಗೂ ಅಕ್ಷರ ಜ್ಞಾನ ಪಸರಿಸಬೇಕಾಗಿದೆ ಎಂದರು. ಜಿಲ್ಲಾ ಕಾರ್ಯಕ್ರಮ ಸಹಾಯಕರಾದ ಶ್ರೀ ಪ್ರಸನ್ನಕುಮಾರ್ ರವರು ಸಾಕ್ಷರತಾ ಪ್ರಮಾಣ ವಚನವನ್ನು ಬೋಧಿಸಿದರು. ಜಿಲ್ಲೆಯ ತಾಲ್ಲೂಕು ಸಾಕ್ಷರತಾ ಸಂಯೋಜಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಾದ ಶ್ರೀ ಹನುಮಂತಪ್ಪ ರವರು ಎಲ್ಲರಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಕಾರ್ಯಕ್ರಮವನ್ನು ಮಕ್ತಾಯಗೊಳಿಸಲಾಯಿತು.





ಜಿಲ್ಲಾ ಪಂಚಾಯಿತಿ ಅನುದಾನ: 2020–21 ನೇ ಸಾಲು

1. **ಲೆಕ್ಕಶೀರ್ಷಿಕೆ (2202–00–103–0–36)090 ರಲ್ಲಿ ರೂ 3.64 ಲಕ್ಷ.** ಬಿಡುಗಡೆಯಾಗಿದ್ದು ಈ ಅನುದಾನದಲ್ಲಿ ದೂರವಾಣಿ ಬಿಲ್ಲು, ಕಛೇರಿ ಸಾದಿಲ್ವಾರು ವೆಚ್ಚಕ್ಕಾಗಿ **3,62,276**/–ರೂಗಳನ್ನು ವೆಚ್ಚ ಮಾಡಲಾಗಿದೆ.
2. **ಲೆಕ್ಕಶೀರ್ಷಿಕೆ (2202–00–104–0–37)090 ರಲ್ಲಿ ರೂ. 12.58 ಲಕ್ಷ** ಬಿಡುಗಡೆಯಾಗಿದ್ದು ಈ ಅನುದಾನದಲ್ಲಿ ವಾಹನ ಬಾಡಿಗೆ, ಕಂಪ್ಯೂಟರ್ ಆಪರೇಟರ್ ಮತ್ತು ಡಿ ಗ್ರೂಪ್ ಗೌರವಧನ, ಅಂ.ಸಾ.ದಿನಾಚರಣೆ ಮತ್ತು ಇತರೆ ವೆಚ್ಚಗಳಿಗಾಗಿ **7,44,019**/– ರೂಗಳನ್ನು ವೆಚ್ಚ ಮಾಡಲಾಗಿದೆ.

16. ಸಾಮಾಜಿಕ ಅರಣ್ಯ ಇಲಾಖೆ

ಬೆಂಗಳೂರು ಸಾಮಾಜಿಕ ಅರಣ್ಯ ವಿಭಾಗವು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/286/ಎಫ್.ಎ.ಸಿ./84 ದಿನಾಂಕ 16.10.1985 ರಂತೆ ರೂಪುಗೊಂಡಿದ್ದು, ದಿನಾಂಕ:07.05.1986 ರಿಂದ ಕಾರ್ಯ ನಿರ್ವಹಿಸುತ್ತಿದೆ.

ಈ ವಿಭಾಗದ ಮುಖ್ಯಸ್ಥರಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಇದ್ದು, ಇವರಿಗೆ ಸಹಾಯಕರಾಗಿ ಒಬ್ಬ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇದ್ದಾರೆ. ವಿಭಾಗದಲ್ಲಿ ಹೊಸಕೋಟೆ (ದೇವನಹಳ್ಳಿ ತಾಲ್ಲೂಕು ಸೇರಿದಂತೆ), ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ಮೂರು ಸಾಮಾಜಿಕ ಅರಣ್ಯ ವಲಯಗಳು ಇದ್ದು, ವಲಯ ಅರಣ್ಯ ಅಧಿಕಾರಿಗಳ ಅದೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿವಿಧ ವಲಯಗಳಲ್ಲಿ ಉಪ ವಲಯ ಅರಣ್ಯಾಧಿಕಾರಿಗಳು, ಅರಣ್ಯರಕ್ಷಕರು, ಎಂ.ಆರ್. ಕ್ಷೇಮಾಭಿವೃದ್ದಿ ನೌಕರರು ಮತ್ತು ಅರಣ್ಯ ಪ್ರೇರಕರು ಕೆಲಸ ನಿರ್ವಹಿಸುತ್ತಿದ್ದಾರೆ.

2020–21ನೇ ಸಾಲಿನಲ್ಲಿ ಸಾಮಾಜಿಕ ಅರಣ್ಯ, ರಸ್ತೆ ಬದಿ ನೆಡುತೋಪು ಯೋಜನೆ(RSP), ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಸಾರ್ವಜನಿಕ ವಿತರಣೆಗೋಸ್ಕರ ಸಸಿ ಬೆಳೆಸುವುದು (RSPD), ಎಸ್.ಎಂ.ಎ.ಎಫ್.ಮತ್ತು ಮಹಾತ್ಮಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (MNREGA) ಯೋಜನೆಗಳಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿಭಾಗದಲ್ಲಿ ರಸ್ತೆ ಬದಿ ನೆಡುತೋಪು, ಕೆರೆ ಅಂಗಳ, ಶಾಲೆ, ಸಂಘ ಸಂಸ್ಥೆಗಳ ಆವರಣ, ರೈತರ ಜಮೀನುಗಳಲ್ಲಿ ಕೃಷಿ ಅರಣ್ಯ ನಿರ್ಮಾಣ ಮತ್ತು ನಿರ್ವಹಣೆ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ. ಸಾಮಾಜಿಕ ಅರಣ್ಯದ ಕಾರ್ಯ ವೈಖರಿಯ ಕೂಲಂಕುಷ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಈ ವಿಭಾಗವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು, ಸಿಬ್ಬಂದಿಯು ಎರವಲು ಸೇವೆಯ ಮೇರೆಗೆ ಸೇವೆ ಸಲ್ಲಿಸುತ್ತಿದ್ದಾರೆ.

ಅಧ್ಯಾಯ– 1

ಈ ವಿಭಾಗದ ಚಟುವಟಿಕೆಗಳು ಅರಣ್ಯ ಪ್ರದೇಶದ ಹೊರಗೆ ಸಾಮಾಜಿಕ ಅರಣ್ಯ ಮತ್ತು ಅಭಿವೃದ್ಧಿಗೆ ಸೀಮಿತವಾಗಿರುವುದರಿಂದ ರಕ್ಷಿತ ಅರಣ್ಯಗಳ ವಿಷಯ ಅನ್ವಯಿಸುವುದಿಲ್ಲ.

ಅಧ್ಯಾಯ – 2

1. ರಕ್ಷಿತ ಅರಣ್ಯಗಳು ಪ್ರಾದೇಶಿಕ ವಿಭಾಗಗಳಿಗೆ ಸಂಬಂಧಪಟ್ಟವುಗಳಾಗಿವೆ. ರಕ್ಷಿತ ಅರಣ್ಯಗಳು ಗ್ರಾಮಾಂತರ ಪ್ರಾದೇಶಿಕ ವಿಭಾಗದ ಪರಿಮಿತಿಗೆ ಒಳಪಡುವುದರಿಂದ ಇಲ್ಲಿ ಪ್ರಸ್ಥಾಪಿಸಲಾಗಿಲ್ಲ.

2. (ಎ) ವಾಹನಗಳು

ಸಾಮಾಜಿಕ ಅರಣ್ಯ ವಿಭಾಗದಲ್ಲಿ

1. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಉಪಯೋಗಕ್ಕೆ ಸರ್ಕಾರಿ ವಾಹನ ಸಂಖ್ಯೆ ಕೆಎ 43 ಜಿ 213 ಲಭ್ಯವಿದ್ದು, ವಿಭಾಗದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಉಪಯೋಗಕ್ಕೆ ಸರ್ಕಾರಿ ವಾಹನ ಸಂಖ್ಯೆ ಕೆಎ 04 ಜಿ 1255 ಲಭ್ಯವಿದ್ದು ವಿಭಾಗದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.
3. ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ದೊಡ್ಡಬಳ್ಳಾಪುರ ಇವರ ಉಪಯೋಗಕ್ಕೆ ಸರ್ಕಾರಿ ವಾಹನ ಸಂಖ್ಯೆ ಕೆಎ 04 ಜಿ 1212 ಲಭ್ಯವಿದ್ದು ವಲಯದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

2. (ಬಿ) ಕಟ್ಟಡಗಳು

ಈ ವಿಭಾಗದಲ್ಲಿನ ವಸತಿ ಗೃಹ ಹಾಗೂ ಇತರೆ ಕಟ್ಟಡಗಳ ವಿವರ ಈ ಕೆಳಕಂಡಂತೆ ಇದೆ.

ಕ್ರ. ಸಂ	ಕಟ್ಟಡ/ವಸತಿಗೃಹಗಳ ವಿವರ	ಸ್ಥಳ	ಸಂಖ್ಯೆ	ವಾಸಿಸುತ್ತಿದ್ದಾರೆಯೇ	ಖಾಲಿ ಇದೆಯೇ	ಷರಾ
1	2	3	4	5	6	
1	ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಕಟ್ಟಡ	ಬೊಮ್ಮವಾರ ದೇವನಹಳ್ಳಿ ತಾಲ್ಲೂಕು.	1	ಕಛೇರಿಗೆ ಉಪಯೋಗಿಸ ಲಾಗುತ್ತಿದೆ.	–	
2	ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ವಸತಿ ಗೃಹ	–	–	–	–	
3	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವಸತಿ ಗೃಹ	–	–	–	–	
4	ವಲಯ ಅರಣ್ಯಾಧಿಕಾರಿಗಳ ಕಛೇರಿ ಹಾಗೂ ವಸತಿ ಗೃಹ	ದೊಡ್ಡಬಳ್ಳಾಪುರ	1	ಕಛೇರಿಗೆ ಉಪಯೋಗಿಸ ಲಾಗುತ್ತಿದೆ.	–	ಹಳೆಯದಾಗಿರುತ್ತದೆ
5	ಉ.ವ.ಅ.ಅ. ವಸತಿ ಗೃಹ	ದೊಡ್ಡಬಳ್ಳಾಪುರ	2	ಇಲ್ಲ	2	ವಾಸಕ್ಕೆ ಯೋಗ್ಯವಿರುವುದಿಲ್ಲ.
6	ಅರಣ್ಯರಕ್ಷಕರ ವಸತಿ ಗೃಹ	ದೊಡ್ಡಬಳ್ಳಾಪುರ	2	ಇಲ್ಲ	2	
7	ವಲಯಅರಣ್ಯಾಧಿಕಾರಿಗಳ ಕಛೇರಿ	ದೇವನಹಳ್ಳಿ	1	ಕಛೇರಿಗೆ ಉಪಯೋಗಿಸ ಲಾಗುತ್ತಿದೆ.	–	
8	ಉ.ವ.ಅ.ಅ. ವಸತಿ ಗೃಹ	ದೇವನಹಳ್ಳಿ	1	ಇಲ್ಲ	1	ಮಿನಿ ವಿಧಾನಸೌಧದ ಆವರಣದಲ್ಲಿರುವುದರಿಂದ ದೇವನಹಳ್ಳಿ ತಹಶೀಲ್ದಾರ್ ವಶದಲ್ಲಿದೆ.
9	ಅರಣ್ಯರಕ್ಷಕರ ವಸತಿ ಗೃಹ	ದೇವನಹಳ್ಳಿ	1	ಇಲ್ಲ	1	
10	ಅರಣ್ಯರಕ್ಷಕರ ವಸತಿ ಗೃಹ	ಗುಡುವನಹಳ್ಳಿ ದೇವನಹಳ್ಳಿ ತಾ	1	ಇಲ್ಲ	1	ದುರಸ್ಥಿಯಲ್ಲಿದೆ
11	ಪಂಪ್ ಹೌಸ್	ಗುಡುವನಹಳ್ಳಿ, ದೇವನಹಳ್ಳಿ ತಾ	1	ಬಳಕೆಯಲ್ಲಿದೆ.	–	
12	ವಲಯ ಅರಣ್ಯಾಧಿಕಾರಿಗಳ ಕಛೇರಿ	ಹೊಸಕೋಟೆ	1	ಕಛೇರಿಗೆ ಉಪಯೋಗಿಸ ಲಾಗುತ್ತಿದೆ.	–	
13	ಉಪ ವಲಯ ಅರಣ್ಯಾಧಿಕಾರಿಗಳ ವಸತಿ ಗೃಹ	ಹೊಸಕೋಟೆ	2	ಇಲ್ಲ	2	ದುರಸ್ಥಿಯಲ್ಲಿದೆ
14	ಅರಣ್ಯರಕ್ಷಕರ ವಸತಿ ಗೃಹ	ಹೊಸಕೋಟೆ	2	ಇಲ್ಲ	2	ದುರಸ್ಥಿಯಲ್ಲಿದೆ
15	ಜೆನರೇಟರ್‌ರೂಂ	ಜಡಿಗೇನಹಳ್ಳಿ	1	ಉಪಯೋಗಿಸಲಾಗುತ್ತಿದೆ	–	
16	ಜೆನರೇಟರ್‌ರೂಂ	ನಗರೇನಹಳ್ಳಿ	1	ಉಪಯೋಗಕ್ಕೆ ಯೋಗ್ಯವಾಗಿರುವುದಿಲ್ಲ.	–	

ಕ್ರ ಸಂ	ಕಟ್ಟಡ/ವಸತಿಗೃಹಗಳ ವಿವರ	ಸ್ಥಳ	ಸಂಖ್ಯೆ	ವಾಸಿಸುತ್ತಿದ್ದಾರೆಯೇ	ಖಾಲಿ ಇದೆಯೇ	ಷರಾ
17	ಅರಣ್ಯರಕ್ಷಕರ ವಸತಿ ಗೃಹ	ನಗರೇನಹಳ್ಳಿ ಹೊಸಕೋಟೆ	1	ಇಲ್ಲ	–	
18	ವಲಯ ಅರಣ್ಯಾಧಿಕಾರಿಗಳ ಕಛೇರಿ ಹಾಗೂ ವಸತಿ ಗೃಹ	ನೆಲಮಂಗಲ	1	ವ.ಅ.ಅ. ಕಛೇರಿ (ಪ್ರಾದೇಶಿಕ)	–	
19	ವನಪಾಲಕರ ವಸತಿ ಗೃಹ	ನೆಲಮಂಗಲ	1	ವ.ಅ.ಅ. ಕಛೇರಿ (ಪ್ರಾದೇಶಿಕ)	–	
20	ಅರಣ್ಯರಕ್ಷಕರ ವಸತಿ ಗೃಹ	ಅರಿಶಿನಕುಂಟೆ	1	ಇಲ್ಲ	–	ದುರಸ್ಥಿಯಲ್ಲಿದೆ
21	ವಾಚ್‌ಮೆನ್ ಶೆಡ್	ನೆಲಮಂಗಲ	1	ಉಪಯೋಗಿಸಲಾಗುತ್ತಿದೆ	–	
22	ವಲಯ ಅರಣ್ಯಾಧಿಕಾರಿ ಕಛೇರಿ	ಅರಿಶಿನಕುಂಟೆ	1	ಸಾ.ಅ.ವ ಕಛೇರಿಗಾಗಿ ಉಪಯೋಗಿಸಲಾಗುತ್ತಿದೆ.		

(3) ಅರಣ್ಯರಕ್ಷಣೆ

ಸಾಮಾಜಿಕ ಅರಣ್ಯದಿಂದ ಬೆಳೆಸಲಾದ ನೆಡುತೋಪುಗಳು ಪ್ರಾದೇಶಿಕ ಅರಣ್ಯದಿಂದ ಬೇರ್ಪಟ್ಟಿರುತ್ತವೆ. ಸಾಮಾಜಿಕ ಅರಣ್ಯದಿಂದ ಬೆಳೆಸಲಾದ ನೆಡುತೋಪುಗಳ ರಕ್ಷಣೆ ಸಾಮಾಜಿಕ ಅರಣ್ಯದ ಸಿಬ್ಬಂದಿಯಿಂದಲೇ ಆಗಬೇಕಾಗಿದೆ. ಸಾಮಾಜಿಕ ಅರಣ್ಯದಲ್ಲಿ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸುವುದು, ಸಂಘ ಸಂಸ್ಥೆಗಳ ಆವರಣಗಳಲ್ಲಿ ನೆಡುತೋಪುಗಳನ್ನು ಬೆಳೆಸುವುದು, ಕೆರೆ ಅಂಗಳ ನೆಡುತೋಪು, ಸರ್ಕಾರಿ ಖಾಲಿ ಜಾಗಗಳಲ್ಲಿ ನೆಡುತೋಪು ನಿರ್ಮಾಣ, ರಸ್ತೆಬದಿ ನೆಡುತೋಪುಗಳು ಹಾಗೂ ಇತರೆ ನೆಡುತೋಪುಗಳ ರಕ್ಷಣೆ ಕೂಡ ಲಭ್ಯವಿರುವ ಸಿಬ್ಬಂದಿ ವರ್ಗದವರು ನೋಡಿಕೊಳ್ಳುತ್ತಿದ್ದಾರೆ. ಅಗ್ನಿ ಅನಾಹುತಗಳು, ದನಕರುಗಳು ಮೇಯುವುದು ಕಂಡು ಬಂದಲ್ಲಿ ಸಿಬ್ಬಂದಿಯು ಸ್ಥಳೀಯರ ಸಹಕಾರದೊಂದಿಗೆ ರಕ್ಷಣೆ ಮಾಡುತ್ತಿರುತ್ತಾರೆ. ನೆಡುತೋಪುಗಳ ನಿರ್ವಹಣೆ ಅವದಿ ಮುಗಿದ ತರುವಾಯ ಅವುಗಳನ್ನು ಸಂಬಂದಿಸಿದ ಗ್ರಾಮ ಪಂಚಾಯ್ತಿಗೆ ಹಸ್ತಾಂತರಿಸಲಾಗುತ್ತದೆ.

ಅಧ್ಯಾಯ – 3
ಅರಣ್ಯ ಕೃಷಿ

1. ನಿರ್ವಹಣೆ ಕ್ರಮ:–

ಸಾಮಾಜಿಕ ಅರಣ್ಯವನ್ನು ಜನ ಸಮುದಾಯ, ರೈತಾಪಿ ಜನ ಹಾಗೂ ಸಂಘ ಸಂಸ್ಥೆಗಳು, ಶಾಲೆಗಳ ಮೂಲಕ ಬೆಳೆಸಿ ನಿರ್ವಹಿಸಲಾಗುತ್ತಿದೆ. ಸಾಮಾಜಿಕ ಅರಣ್ಯ ವಿಭಾಗದಲ್ಲಿ ಬೆಳೆಸಿದ ನೆಡುತೋಪುಗಳನ್ನು ಮುಂದಿನ ನಿರ್ವಹಣೆಗಾಗಿ ಆಯಾ ಗ್ರಾಮ ಪಂಚಾಯಿತಿ/ಗ್ರಾಮಅರಣ್ಯ ಸಮಿತಿಗಳಿಗೆ ನೀಡಿರುವ ಕಾರಣ, ನೆಡುತೋಪು ಕಡಿಯಲು ಅವರಿಂದ ಬೇಡಿಕೆ ಬಂದಲ್ಲಿ ನೆಡುತೋಪಿನ ಮೌಲ್ಯ ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

2. ಅರಣ್ಯೇಕರಣ ಮತ್ತು ಅವುಗಳ ಉತ್ಪತ್ತಿ:–

ಈ ವಿಭಾಗದ 3 ವಲಯಗಳಲ್ಲಿ ಈಗಾಗಲೇ ಬೆಳೆಸಿರುವ ನೆಡುತೋಪುಗಳನ್ನು ನಿರ್ವಹಣೆ ಮಾಡಲಾಗಿದೆ. 2020–21ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ 178.78 ಕಿ.ಮೀ/ಹೆ. ನೆಡುತೋಪು ನಿರ್ಮಾಣ ಮಾಡಿ 44350 ಸಸಿಗಳನ್ನು ನೆಡಲಾಗಿದೆ ಮತ್ತು 638.25ಹೆ/ಕಿ.ಮೀ ನೆಡುತೋಪುಗಳನ್ನು ನಿರ್ವಹಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುದಾನದಲ್ಲಿ ಸಾಂದ್ರತೆ ಪ್ರಕಾರ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ 1200 ಗಿಡ ಹಾಗೂ ದೇವನಹಳ್ಳಿ ತಾಲ್ಲೂಕಿನಲ್ಲಿ 1955 ಗಿಡಗಳನ್ನು ನೆಟ್ಟು 2ನೇ ವರ್ಷದ ನೆಡುತೋಪು ನಿರ್ವಹಣೆ ಮಾಡಲಾಗಿರುತ್ತದೆ.

ಸಾರ್ವಜನಿಕರ ಜಮೀನುಗಳಲ್ಲಿ 2020ರ ಮಳೆಗಾಲದಲ್ಲಿ ಸಸಿಗಳನ್ನು ನೆಡುವ ಸಲುವಾಗಿ ಆರ್.ಎಸ್.ಪಿ.ಡಿ. ಯೋಜನೆಯಡಿ ರೈತರಿಗೆ 0.926ಲಕ್ಷ ಸಸಿಗಳನ್ನು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗಿರುತ್ತದೆ. ಹಸಿರು ಕರ್ನಾಟಕ ಕಾರ್ಯಕ್ರಮದಡಿ 0.715 ಲಕ್ಷ ಸಸಿಗಳನ್ನು ವಿವಿಧ ಸರ್ಕಾರಿ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಲಾಗಿದೆ. ನರೇಗಾ ಯೋಜನೆಯಡಿ 6.524 ಲಕ್ಷ ಸಸಿಗಳನ್ನು ರೈತಫಲಾನುಭವಿಗಳ ಜಮೀನುಗಳಲ್ಲಿ ನೆಡಲು, ಗ್ರಾಮ ಪಂಚಾಯಿತಿಗಳಿಗೆ, ವನಮಹೋತ್ಸವ, ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ವಿತರಿಸಲಾಗಿದೆ.

ಇಲಾಖಾ ವತಿಯಿಂದ 2021ನೇ ಮಳೆಗಾಲದಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ನೆಡುತೋಪು ಬೆಳೆಸಲು 0.055ಲಕ್ಷ ಸಸಿಗಳು ಹಾಗೂ ಎಂ.ಎನ್.ಆರ್.ಇ.ಜಿ.ಎ. ಯೋಜನೆಯಡಿ ನೆಡುತೋಪು ಬೆಳೆಸಲು ವಿವಿಧ ಅಳತೆಯ 0.40240ಲಕ್ಷ ಸಸಿಗಳನ್ನು ಬೆಳೆಸಲಾಗಿದೆ.

2021ರ ಮಳೆಗಾಲಕ್ಕೆ ಸಾರ್ವಜನಿಕರಿಗೆ ವಿತರಿಸಲು ಆರ್.ಎಸ್.ಪಿ.ಡಿ. ಯೋಜನೆಯಡಿ 0.19 ಲಕ್ಷ ಸಸಿಗಳು, ನರೇಗ ಯೋಜನೆಯಡಿ ರೈತ ಫಲಾನುಭವಿಗಳ ಜಮೀನುಗಳಲ್ಲಿ ನೆಡಲು, ಗ್ರಾಮ ಪಂಚಾಯಿತಿಗಳಿಗೆ, ವನಮಹೋತ್ಸವ, ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ವಿತರಿಸಲು 2.8013ಲಕ್ಷ ಸಸಿಗಳನ್ನು ಬೆಳೆಸಲಾಗಿದೆ.

3. ಶಾಶ್ವತ ಸಸ್ಯ ಕ್ಷೇತ್ರಗಳು:–

ಕ್ರಮ ಸಂಖ್ಯೆ	ತಾಲ್ಲೂಕು	ಸಸ್ಯಕ್ಷೇತ್ರಗಳು
1	ದೊಡ್ಡಬಳ್ಳಾಪುರ ತಾಲ್ಲೂಕು	ಡಿ ಕ್ರಾಸ್ ಇಲಾಖಾ ಸಸ್ಯಕ್ಷೇತ್ರ
2	ನೆಲಮಂಗಲ ತಾಲ್ಲೂಕು	ಅರಿಶಿನಕುಂಟೆ ಸಸ್ಯಕ್ಷೇತ್ರ
3	ಹೊಸಕೋಟೆ ತಾಲ್ಲೂಕು	ನಗರೇನಹಳ್ಳಿ ಸಸ್ಯಕ್ಷೇತ್ರ
4	ದೇವನಹಳ್ಳಿ ತಾಲ್ಲೂಕು	ಗುಡುವನಹಳ್ಳಿ ಸಸ್ಯಕ್ಷೇತ್ರ

4. ಬೀಜಗಳ ಸಂಗ್ರಹಣೆ:–

ಅವಶ್ಯಕತೆಗನುಗುಣವಾಗಿ ಸ್ಥಳೀಯವಾಗಿ ಲಬ್ಯವಿರುವ ಬೀಜಗಳನ್ನು ನರ್ಸರಿ ನಿರ್ವಹಿಸುವ ಕೆಲಸಗಾರರು ಸಂಗ್ರಹಿಸುತ್ತಾರೆ. ಹೆಚ್ಚುವಯಾಗಿ ಬೇಕಾಗುವ ಬೀಜಗಳನ್ನು ಬಿಜ ಘಟಕದಿಂದ ಪಡೆಯಲಾಗಿತ್ತದೆ.

5. ಗಿಡ ಮರಗಳ ಆರೈಕೆ:–

ಪ್ರತಿ ವರ್ಷ ಯೋಜನೆಯ ಅನುಸಾರ ಸಸಿಗಳನ್ನು ಬೆಳೆಸಿ ಉಳಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ಅರಣ್ಯೀಕರಣದ ನಿಯಮಾನುಸಾರ ಕಳೆ ತೆಗೆಯುವಿಕೆ, ಮಣ್ಣು ಸಡಿಲಿಕೆ, ಗಿಡಗಳ ಸುತ್ತ ಪಾತಿ ಮಾಡುವುದು, ಗೊಬ್ಬರ ಹಾಕಿ ನೀರು ಹಾಕುವುದು, ಕ್ರಿಮಿಕೀಟ ನಾಶಕಗಳನ್ನು ಉಪಯೋಗಿಸಿ ರೋಗ ನಿಯಂತ್ರಣ ಮಾಡಿ ಕಾವಲು ಮಾಡುವುದು ಮುಂತಾಗಿ ನೆಟ್ಟ ಗಿಡಮರಗಳ ಆರೈಕೆಯನ್ನು ಕೈಗೊಳ್ಳಲಾಗುತ್ತದೆ.

ಅಧ್ಯಾಯ– 4

1. ಅರಣ್ಯ ನಿರ್ವಹಣೆಯ ಕ್ರಮ:–

ಸಾಮಾಜಿಕ ಅರಣ್ಯ ವಿಭಾಗದಿಂದ ಶಾಲಾ ವನ, ಸ್ಮಶಾನ ಆವರಣದ ಖಾಲಿ ಜಾಗ, ಸಾರ್ವಜನಿಕ ಪ್ರದೇಶದ ಖಾಲಿ ಜಾಗ, ಇತರೇ ಸರ್ಕಾರಿ ಜಾಗ, ರಸ್ತೆ ಬದಿ ಹಾಗೂ ಕೆರೆ ಅಂಗಳಗಳಲ್ಲಿ ನೆಡುತೋಪು ಬೆಳೆಸುವು ಮತ್ತು ಸಸ್ಯಕ್ಷೇತ್ರಗಳಲ್ಲಿ ವಿವಿಧ ಜಾತಿಯ ಮತ್ತು ವಿವಿಧ ಗಾತ್ರದ ಪಾಲಿಥಿನ್ ಚೀಲಗಳಲ್ಲಿ ಸಸಿ ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಜನರಿಗಾಗಿ ಮತ್ತು ಜನರ ಸಹಕಾರದಿಂದ ನೆಡುತೋಪು

ಬೆಳೆಸುವುದು ಸಾಮಾಜಿಕ ಅರಣ್ಯದ ಉದ್ದೇಶವಾಗಿದೆ. ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅರಣ್ಯದ ಮೇಲೆ ಬೀಳುತ್ತಿರುವ ಒತ್ತಡವನ್ನು ತಡೆಯಲು, ಜನರಿಗೆ ಬೇಕಾಗುವ ದೈನಂದಿನ ಉರುವಲು, ಮರಮುಟ್ಟು, ಉತ್ತಮ ವಾತಾವರಣ, ತಂಪಾದ ಗಾಳಿ, ಫಲಪುಷ್ಪಗಳನ್ನು ನೀಡುವ, ಶೀಘ್ರವಾಗಿ ಬೆಳೆದು ಹೆಚ್ಚು ಫಲ ನೀಡುವ ಮತ್ತು ಪಶು ಪಕ್ಷಿಗಳಿಗೆ ಹಣ್ಣು, ಮೇವು, ಕೃಷಿಗೆ ಹಸಿರು ಗೊಬ್ಬರ ನೀಡುವಂತಹ ಲಾಭದಾಯಕ ಸಸಿಗಳನ್ನು ಬೆಳೆಸಲಾಗುತ್ತದೆ. ಜನರಿಗೆ ಅರಣ್ಯದ ಬಗ್ಗೆ ಅರಿವು ಮೂಡಿಸಿ ಜನರಿಗೋಸ್ಕರಜನರ ಸಹಾಯದಿಂದಲೇ ಸಾಮಾಜಿಕ ಅರಣ್ಯವನ್ನು ನಿರ್ವಹಿಸಲಾಗುತ್ತಿದೆ.

2. ಫಲ ತೆಗೆಯುವ ವಿಧಾನಗಳು:–

ಈ ವಿಭಾಗದಲ್ಲಿ ಬೆಳೆಸಿರುವ ನೆಡುತೋಪುಗಳನ್ನು 3 – 4 ವರ್ಷಗಳ ಕಾಲ ನಿರ್ವಹಣೆ ಮಾಡಿದ ನಂತರ ಮುಂದಿನ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಗ್ರಾಮ ಪಂಚಾಯಿತಿಗಳಿಗೆ/ಗ್ರಾಮಅರಣ್ಯ ಸಮಿತಿಗಳಿಗೆ ವಹಿಸಿಕೊಡಲಾಗುತ್ತಿದೆ. ಈ ರೀತಿ ವಹಿಸಿಕೊಟ್ಟ ನೆಡುತೋಪುಗಳು ಕಟಾವಿಗೆ ಬಂದ ಮೇಲೆ ಗ್ರಾಮ ಪಂಚಾಯಿತಿ/ಗ್ರಾಮಅರಣ್ಯ ಸಮಿತಿಯವರ ತೀರ್ಮಾನದಂತೆ ಈ ನೆಡುತೋಪುಗಳನ್ನು ಕಟಾವು ಮಾಡಿ ಮರು ನೆಡುತೋಪು ಬೆಳೆಸುವ ಕಾರ್ಯಕ್ರಮಗಳಿರುತ್ತವೆ. ಸರ್ಕಾರಿ ಆದೇಶ ಸಂಖ್ಯೆ:ಅಪಜೀ 48 ಎಫ್ ಎ ಪಿ 2004 ಬೆಂಗಳೂರು ದಿನಾಂಕ:08.10.2004ರಂತೆ ಆದಾಯವನ್ನು ಶೇಕಡಾ 50ಭಾಗ ಸರ್ಕಾರಕ್ಕೆ ಮತ್ತು ಉಳಿದ ಶೇಕಡ 50 ಭಾಗದಲ್ಲಿ ಗ್ರಾಮ ಪಂಚಾಯತ್ ಅಡಿಯಲ್ಲಿ ಅರಣ್ಯ ಅಭಿವೃದ್ಧಿಗೆ ಬಳಸಲಾಗುವುದು ಮತ್ತು ಕಟಾವಾದ ನೆಡುತೋಪಿನ ಜಾಗದಲ್ಲಿ ಒತ್ತುವರಿ ತಡೆಯಲು ಬದಲಿ ನೆಡುತೋಪು ಬೆಳೆಸಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಾಯ– 5

ಆರ್ಥಿಕ ಫಲಿತಾಂಶಗಳು:

ಆದಾಯ:–

ಮರಮುಟ್ಟುಗಳು, ಅರಣ್ಯ ಅಪರಾಧ ಪ್ರಕರಣಗಳು, ಟೆಂಡರ್ ಕಂ ಹರಾಜು, ಕಲ್ಲುಗಣಿ ಇತ್ಯಾದಿಗಳು ಸಾಮಾಜಿಕ ಅರಣ್ಯ ವ್ಯಾಪ್ತಿಗೆ ಒಳಪಡದೆ ಇರುವ ಕಾರಣ ಮತ್ತು ಮುಖ್ಯವಾಗಿ ಜನ ಸಾಮಾನ್ಯರ ಅವಶ್ಯಕತೆಗಾಗಿ ಸಾಮಾಜಿಕ ಅರಣ್ಯ ವಿಭಾಗ ಶ್ರಮಿಸುತ್ತಿರುವುದರಿಂದ ಆದಾಯ ನಿರೀಕ್ಷಿಸುವಂತಿಲ್ಲ.

ವೆಚ್ಚ:–

ಈ ವಿಭಾಗದ ವಲಯಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2020–21ನೇ ಸಾಲಿನಲ್ಲಿ ನಮೂನೆಯಲ್ಲಿ ತಿಳಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ವೆಚ್ಚ ಮಾಡಲಾಗಿದೆ. (ಅನುಬಂದ)

ಅಧ್ಯಾಯ – 6

ಆಡಳಿತ

ಈ ವಿಭಾಗದಲ್ಲಿ 2020–21ನೇ ಸಾಲಿನಲ್ಲಿ ಅಂದರೆ ದಿನಾಂಕ:01.04.2020 ರಿಂದ 31–03–2021. ಈ ಕೆಳಕಂಡ ಅಧಿಕಾರಿಗಳು ಕಛೇರಿಗಳ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುತ್ತಾರೆ.

ಕ್ರ ಸಂ.	ಅಧಿಕಾರಿಗಳ ಹೆಸರು	ಅವಧಿ		ಷರಾ
		ಯಿಂದ	ವರೆಗೆ	
	ಉಪ ಅರಣ್ಯ ಸಂರಕ್ಷಣಾಧಿಕಾರಿ			
1	ಶ್ರೀ ಭಾಸ್ಕರ್ ಬಿ., ಉಪ ಅರಣ್ಯ ಸಂರಕ್ಷಣಾಧಿಕಾರಿ	01.04.2020	31.03.2021	
	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ			
2	ಶ್ರೀ ಚಿಕ್ಕರಾಜೇಂದ್ರ ಸಹಾಯಕಅರಣ್ಯ ಸಂರಕ್ಷಣಾಧಿಕಾರಿ (ಪ್ರಭಾರ)	01.04.2020	05.07.2020	
3	ಶ್ರೀ ಸುಬ್ಬಾರಾವ್ ಸಹಾಯಕಅರಣ್ಯ ಸಂರಕ್ಷಣಾಧಿಕಾರಿ (ಪ್ರಭಾರ)	06.07.2020	24.01.2021	

ಕ್ರ ಸಂ.	ಅಧಿಕಾರಿಗಳ ಹೆಸರು	ಅವಧಿ		ಷರಾ
		ಯಿಂದ	ವರೆಗೆ	
4	ಶ್ರೀಮತಿ ಪಿ ಎಂ ಸರಿತ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	25.01.2021	31.03.2021	
	ವಲಯ ಅರಣ್ಯಾಧಿಕಾರಿ			
5	ಶ್ರೀಮತಿ ಎಲ್ ಸ್ವಾತಿ ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ನೆಲಮಂಗಲ	01.04.2020	07.05.2020	
6	ಶ್ರೀ ಎಸ್ ರುದ್ರಮೂರ್ತಿ ವಲಯ ಅರಣ್ಯಾಧಿಕಾರಿ(ಪ್ರಭಾರ), ಸಾಮಾಜಿಕ ಅರಣ್ಯ ವಲಯ, ನೆಲಮಂಗಲ	08.05.2020	06.11.2020	ಉಪ ವಲಯ ಅರಣ್ಯಾಧಿಕಾರಿಯವರು ಪ್ರಭಾರ ವಲಯಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.
7	ಶ್ರೀಮತಿ ಶಿಲ್ಪ ಎನ್.ಇ. ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ನೆಲಮಂಗಲ	07.11.2020	31.03.2021	
	ವಲಯ ಅರಣ್ಯಾಧಿಕಾರಿ			
8	ಶ್ರೀ ಲಷ್ಕರ್‌ನಾಯ್ಕ ಟಿ ಚವಾಣ್, ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ದೊಡ್ಡಬಳ್ಳಾಪುರ	01.04.2020	31.07.2020	
9	ಶ್ರೀ ಲಕ್ಷ್ಮೀನಾರಾಯಣ ಎನ್., ವಲಯ ಅರಣ್ಯಾಧಿಕಾರಿ (ಪ್ರಭಾರ), ಸಾಮಾಜಿಕ ಅರಣ್ಯ ವಲಯ, ದೊಡ್ಡಬಳ್ಳಾಪುರ	01.08.2020	28.09.2020	ಉಪ ವಲಯ ಅರಣ್ಯಾಧಿಕಾರಿಯವರು ಪ್ರಭಾರ ವಲಯಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.
10	ಶ್ರೀಮತಿ ಗೀತಾ ಚವ್ಹಾಣ್ ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ದೊಡ್ಡಬಳ್ಳಾಪುರ	29.09.2020	31.03.2021	
	ವಲಯ ಅರಣ್ಯಾಧಿಕಾರಿ			
11	ಶ್ರೀಮತಿ ಎಂ.ಪುಷ್ಪ, ವಲಯಅರಣ್ಯಾಧಿಕಾರಿ, ಸಾಮಾಜಿಕಅರಣ್ಯ ವಲಯ, ಹೊಸಕೋಟೆ	01.04.2020	31.03.2021	

ಈ ವಿಭಾಗದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	ಉಪ ಅರಣ್ಯ ಸಂರಕ್ಷಣಾಧಿಕಾರಿ	1	1	–
2	ಸಹಾಯಕಅರಣ್ಯ ಸಂರಕ್ಷಣಾಧಿಕಾರಿ	1	1	–
3	ವಲಯ ಅರಣ್ಯಾಧಿಕಾರಿಗಳು	3	3	–
4	ಉಪ ವಲಯ ಅರಣ್ಯಾಧಿಕಾರಿಗಳು	7	7	–
5	ಪತ್ರಾಂಕಿತ ವ್ಯವಸ್ಥಾಪಕರು	1	1	–
6	ಅಧೀಕ್ಷಕರು	1	–	1
7	ಪ್ರಥಮದರ್ಜೆ ಸಹಾಯಕರು	2	2	–
8	ದ್ವಿತೀಯದರ್ಜೆ ಸಹಾಯಕರು	1	1	–
9	ಬೆರಳಚ್ಚುಗಾರರು	1	–	1
10	ಅರಣ್ಯರಕ್ಷಕರು	5	–	5
11	ಕಛೇರಿ ಸೇವಕರು	2	2	–
	ಒಟ್ಟು	**25**	**18**	**7**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಕೈಗೊಂಡ ಕಲ್ಯಾಣಕಾರಿ ಚಟುವಟಿಕೆಗಳು

2020–21ನೇ ಸಾಲಿನಲ್ಲಿ ವಿಶೇಷ ಘಟಕಯೋಜನೆಯಡಿ (ತಾಲ್ಲೂಕು ಪಂಚಾಯತ್‌ಅನುದಾನ) ಈ ವಿಭಾಗ ವ್ಯಾಪ್ತಿಯಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

2020–21ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿ (ತಾಲ್ಲೂಕು ಪಂಚಾಯತ್ ಅನುದಾನ) ಈ ವಿಭಾಗ ವ್ಯಾಪ್ತಿಯಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ವನ್ಯ ಪ್ರಾಣಿಗಳ ಸಂರಕ್ಷಣೆ

ವನ್ಯ ಪ್ರಾಣಿಗಳ ಸಂರಕ್ಷಣೆ, ವನ್ಯಧಾಮ ಮತ್ತು ಪಕ್ಷಿಧಾಮಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಪ್ರತ್ಯೇಕ ಗ್ರಾಮಾಂತರ ಪ್ರಾದೇಶಿಕ ವಿಭಾಗವಿದ್ದು, ಸಾಮಾಜಿಕ ಅರಣ್ಯ ವಿಭಾಗವು ಅದರಲ್ಲಿ ಭಾಗಿಯಾಗಿರುವುದಿಲ್ಲ.

ಪ್ರದರ್ಶನ ಮತ್ತು ಪ್ರಚಾರ

2020–21ನೇ ಸಾಲಿನ ಈ ವಿಭಾಗದ ವತಿಯಿಂದ ಸೌರಭ ಜಾನಪದ ಕಲಾ ವೇದಿಕೆ, ರಾಣಿಬೆನ್ನೂರು ಇವರ ಮುಖಾಂತರ ಎಸ್.ಎಂ.ಎ.ಎಫ್.ಯೋಜನೆಯಡಿ ಅರಣ್ಯದ ಬಗ್ಗೆ ಬೀದಿನಾಟಕ ಪ್ರದರ್ಶಿಸಲಾಗಿರುತ್ತದೆ ಹಾಗೂ ಲಭ್ಯವಿರುವ ಅರಣ್ಯ ಪ್ರೇರಕರ ಮುಖಾಂತರ ಅರಣ್ಯ ಅಭಿವೃದ್ಧಿ ಮತ್ತು ರಕ್ಷಣೆ ಹಾಗೂ ಅರಣ್ಯದಿಂದ ಸಾರ್ವಜನಿಕರಿಗೆ ಲಭ್ಯವಾಗುವ ಅನುಕೂಲಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆ.

ಅರಣ್ಯಕೂಲಿಕಾರರು ಮತ್ತು ಕೂಲಿ

ಕೇಂದ್ರ ಪುರಸ್ಕೃತ ಉದ್ಯೋಗ ಖಾತ್ರಿ ಕಾಮಗಾರಿಗಳಿಗೆ ತೆಗೆದುಕೊಳ್ಳುವ ಕೂಲಿಗಾರರಿಗೆ ದಿನ ಒಂದಕ್ಕೆ ರೂ.275ರಂತೆ ಕೂಲಿ ನೀಡಲಾಗುತ್ತಿದೆ.

ನಮೂನೆ

2020–21ನೇ ಸಾಲಿನ ಅರಣ್ಯೀಕರಣ ಕಾಮಗಾರಿಗಳ ವಿವರ

ಬೆಂಗಳೂರು ಗ್ರಾಮಾಂತರಜಿಲ್ಲಾ ಪಂಚಾಯತ್

ಇಲಾಖೆಯ ಹೆಸರು: ಸಾಮಾಜಿಕಅರಣ್ಯ ವಿಭಾಗ ದಿನಾಂಕ:01–04–2020 ರಿಂದ ದಿನಾಂಕ:31–03–2021 (ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ/ಯೋಜನೇತರ ಹೆಸರು	2020–21 ವಾರ್ಷಿಕ ಅನುದಾನ	ಮಂಜೂರಾದ ಹಣ	ಬಿಡುಗಡೆಯಾದ ಹಣ	ವೆಚ್ಚವಾದ ಹಣ	ವಿವರ	ಭೌತಿಕ		ಹೆಚ್ಚು ಅಂತರವಿದ್ದಲ್ಲಿ ವ್ಯತ್ಯಾಸಕ್ಕೆ ಕಾರಣಗಳು	
							ಗುರಿ	ಸಾಧನೆ	ಭೌತಿಕ	ಆರ್ಥಿಕ
1	2	3	4	5	6	7	8	9	10	11
1	**2406–00–101–0–27–ಸಾಮಾಜಿಕಅರಣ್ಯ**	130.58	130.58	130.58	130.58	ರಸ್ತೆಬದಿ ನೆಡುತೋಪು ನಿರ್ಮಾಣ	44	44	–	–
						1ನೇ ವರ್ಷದ ರಸ್ತೆ ಬದಿ ನೆಡುತೋಪು ಪೋಷಣೆ	55	55	–	–
						2ನೇ ವರ್ಷದ ರಸ್ತೆ ಬದಿ ನೆಡುತೋಪು ಪೋಷಣೆ	21	21		
						3ನೇ ವರ್ಷದ ರಸ್ತೆ ಬದಿ ನೆಡುತೋಪು ಪೋಷಣೆ	18	18	–	–
						4ನೇ ವರ್ಷದ ರಸ್ತೆ ಬದಿ ನೆಡುತೋಪು ಪೋಷಣೆ	6	6	–	–
						1ನೇ ವರ್ಷದ ಕೆರೆ ಅಂಗಳ ನೆಡುತೋಪು ಪೋಷಣೆ	20	20		
						2ನೇ ವರ್ಷದ ಕೆರೆ ಅಂಗಳ ನೆಡುತೋಪು ಪೋಷಣೆ	93	93		
						3ನೇ ವರ್ಷದ ಕೆರೆ ಅಂಗಳ ನೆಡುತೋಪು ಪೋಷಣೆ	148	148	–	–
						1ನೇ ವರ್ಷದ ಸಂಘ ಸಂಸ್ಥೆಗಳ ಆವರಣ ನೆಡುತೋಪು ಪೋಷಣೆ	15	15	–	–
						ಸಸಿ ಬೆಳೆಸುವುದು	5500	5500		
2	**2406–00–101–0–28 ಕಟ್ಟಡಗಳು**	54.61	54.61	54.61	54.61	ದೇವನಹಳ್ಳಿ ತಾಲ್ಲೂಕು ಬೊಮ್ಮವಾರ ಸ.ನಂ. 36ರ ಅರಣ್ಯ ಪ್ರದೇಶದಲ್ಲಿ ಸಾ.ಅ.ವಿಭಾಗದಕಛೇರಿಕಟ್ಟಡ ನಿರ್ಮಾಣ	1	–		
3	**ರಸ್ತೆ ಬದಿ ನೆಡುತೋಪು– 139**	16.465	16.465	16.465	16.465	ನೆಡುತೋಪು ನಿರ್ಮಾಣ ಮಾಡುವುದು (14”*20”–990 ಅಳತೆಯ ಸಸಿಗಳ ನಿರ್ವಹಣೆ ಸೇರಿ)	3	12	–	–
						ಎರಡನೇ ವರ್ಷದ ನೆಡುತೋಪು ನಿರ್ವಹಣೆ (400ಸಸಿಗಳು/ಕಿ.ಮೀ)	12	3	–	–
						ಮೂರನೇ ವರ್ಷದ ನೆಡುತೋಪು ನಿರ್ವಹಣೆ (400ಸಸಿಗಳು/ಕಿ.ಮೀ)	3	3	–	–
4	**ಆರ್.ಎಸ್.ಪಿ.ಡಿ.–139 ಪ್ರಕಾ**	6.7064	6.7064	6.7064	6.7064	6”x9” ಅಳತೆಯ ಸಸಿಗಳನ್ನು ನಿರ್ವಹಣೆ ಮಾಡಿ ವಿತರಿಸುವುದು	65000	65000	–	–

ಕ್ರ. ಸಂ	ಯೋಜನೆ/ಯೋಜನೇತರ ಹೆಸರು	2020–21 ವಾರ್ಷಿಕ ಅನುದಾನ	ಮಂಜೂರಾದ ಹಣ	ಬಿಡುಗಡೆಯಾದ ಹಣ	ವೆಚ್ಚವಾದ ಹಣ	ವಿವರ	ಭೌತಿಕ		ಹೆಚ್ಚು ಅಂತರವಿದ್ದಲ್ಲಿ ವ್ಯತ್ಯಾಸಕ್ಕೆ ಕಾರಣಗಳು	
							ಗುರಿ	ಸಾಧನೆ	ಭೌತಿಕ	ಆರ್ಥಿಕ
						8”x12” ಅಳತೆಯ ಸಸಿಗಳನ್ನು ನಿರ್ವಹಣೆ ಮಾಡಿ ವಿತರಿಸುವುದು	27600	27600	–	–
						6”x9” ಅಳತೆಯ ಸಸಿಗಳನ್ನು ಬೆಳೆಸುವುದು	13000	13000		
						8”x12” ಅಳತೆಯ ಸಸಿಗಳನ್ನು ಬೆಳೆಸುವುದು.	6000	6000		
5	ಹಸಿರುಕರ್ನಾಟಕ–139 ಪ್ರಕಾ	2.675	2.675	2.675	2.675	6”x9” ಅಳತೆಯ ಸಸಿಗಳನ್ನು ನಿರ್ವಹಣೆ ಮಾಡಿ ಹಂಚಿಕೆ ಮಾಡಿದೆ	66500	66500		
						8”x12” ಅಳತೆಯ ಸಸಿಗಳನ್ನು ನಿರ್ವಹಣೆ ಮಾಡಿ ಹಂಚಿಕೆ ಮಾಡಿದೆ	5000	5000		
6	ಜಿ.ಯು.ಎ.–139 ಪ್ರಕಾ	15.871	15.871	15.871	15.871	14”x20” ಅಳತೆಯ ಸಸಿಗಳ ನಿರ್ವಹಣೆ	2000	2000		
						ನೆಡುತೋಪು ನಿರ್ಮಾಣ	6	6		
8	ಎನ್.ಹೆಚ್.ಎ.ಐ	7.476	7.476	7.476	7.476	2ನೇ ವರ್ಷದ ರಾ.ಹೆ.ರಸ್ತೆ ಬದಿಯಲ್ಲಿ ನೆಡುತೋಪು ನಿರ್ವಹಣೆ	3155 ಗಿಡಗಳು	3155 ಗಿಡಗಳು		
9	ಎಸ್.ಎಂ.ಎ.ಎಫ್.	36.84777	36.84777	36.84777	36.84777	ಬೌಂಡರಿ ಪ್ಲಾಂಟೇಶನ್(ಸಸಿಗಳು ಸಂಖ್ಯೆ)	15000	15000		
						ಲೋ ಡೆನ್ಸಿಟಿ ಪ್ಲಾಂಟೇಶನ್(ಹೆ)	100	100		
						ಹೈ ಡೆನ್ಸಿಟಿ ಪ್ಲಾಂಟೇಶನ್(ಹೆ)	15	15		
						ವೆರಿ ಹೈ ಡೆನ್ಸಿಟಿ ಪ್ಲಾಂಟೇಶನ್(ಹೆ)	10	10		
						ಇಲಾಖಾ ನರ್ಸರಿಅಭಿವೃದ್ಧಿ (ಸ್ಮಾಲ್ ನರ್ಸರಿ)	1	1		
						ಟ್ರೈನಿಂಗ್‌ಅಂಡ್ ಕೆಪಾಸಿಟಿ ಬಿಲ್ಡಿಂಗ್	1	1		
						ಆಡಳಿತಾತ್ಮಕ ವೆಚ್ಚ	2	2		
						1ನೇ ವರ್ಷದ ಬೌಂಡರಿ ಪ್ಲಾಂಟೇಶನ್(ಸಸಿಗಳು ಸಂಖ್ಯೆ)	15050	15050		
						1ನೇ ವರ್ಷದ ಲೋ ಡೆನ್ಸಿಟಿ ಪ್ಲಾಂಟೇಶನ್(ಹೆ)	44	44		
						1ನೇ ವರ್ಷದ ಹೈ ಡೆನ್ಸಿಟಿ ಪ್ಲಾಂಟೇಶನ್(ಹೆ)	5	5		
						1ನೇ ವರ್ಷದ ವೆರಿ ಹೈ ಡೆನ್ಸಿಟಿ ಪ್ಲಾಂಟೇಶನ್(ಹೆ)	3	3		
						2ನೇ ವರ್ಷದ ಬೌಂಡರಿ ಪ್ಲಾಂಟೇಶನ್(ಸಸಿಗಳು ಸಂಖ್ಯೆ)	5000	5000		
						2ನೇ ವರ್ಷದ ಲೋ ಡೆನ್ಸಿಟಿ ಪ್ಲಾಂಟೇಶನ್(ಹೆ)	50	50		
						2ನೇ ವರ್ಷದ ಹೈ ಡೆನ್ಸಿಟಿ ಪ್ಲಾಂಟೇಶನ್(ಹೆ)	5	5		
						2ನೇ ವರ್ಷದ ವೆರಿ ಹೈ ಡೆನ್ಸಿಟಿ ಪ್ಲಾಂಟೇಶನ್(ಹೆ)	5	5		

ಕ್ರ. ಸಂ	ಯೋಜನೆ/ಯೋಜನೇತರ ಹೆಸರು	2020–21 ವಾರ್ಷಿಕ ಅನುದಾನ	ಮಂಜೂರಾದ ಹಣ	ಬಿಡುಗಡೆಯಾದ ಹಣ	ವೆಚ್ಚವಾದ ಹಣ	ವಿವರ	ಭೌತಿಕ		ಹೆಚ್ಚು ಅಂತರವಿದ್ದಲ್ಲಿ ವ್ಯತ್ಯಾಸಕ್ಕೆ ಕಾರಣಗಳು	
							ಗುರಿ	ಸಾಧನೆ	ಭೌತಿಕ	ಆರ್ಥಿಕ
11	ಎಂ.ಎನ್.ಆರ್.ಇ.ಜಿ.ಎ.	443.227	443.227	443.227	443.227	ಸಸಿಗಳ ನಿರ್ವಹಣೆ(ಸಂ.)	515140	515140		
						ಸಸಿಗಳ ಬೆಳೆಸುವಿಕೆ(ಸಂ.)	320370	320370		
						1ನೇ ವರ್ಷದ ನೆಡುತೋಪು ನಿರ್ವಹಣೆ(ಹೆ./ಕಿ.ಮೀ)	119.71	119.71		
						2ನೇ ವರ್ಷದ ನೆಡುತೋಪು ನಿರ್ವಹಣೆ(ಹೆ./ಕಿ.ಮೀ)	66.25	66.25		
						3ನೇ ವರ್ಷದ ನೆಡುತೋಪು ನಿರ್ವಹಣೆ(ಹೆ./ಕಿ.ಮೀ)	40.75	40.75		
						4ನೇ ವರ್ಷದ ನೆಡುತೋಪು ನಿರ್ವಹಣೆ(ಹೆ./ಕಿ.ಮೀ)	21	21		
						ನೆಡುತೋಪು ನಿರ್ಮಾಣ(ಹೆ/ಕಿ.ಮೀ.)	98.00	125.78		
12	2406–01–001–2–01 – General establishment-034 Contract & Outsource Motivator Hanourarium	15.01	15.01	15.01	14.383	ಅರಣ್ಯ ಪ್ರೇರಕರ ಗೌರವಧನ	16ಸಂಖ್ಯೆ	16ಸಂಖ್ಯೆ		
13	**ವೇತನ– 001**	113.43	113.43	113.43	101.476	ಅಧಿಕಾರಿ/ಸಿಬ್ಬಂದಿ ವೇತನ	25ಸಂಖ್ಯೆ	18ಸಂಖ್ಯೆ	–	
14	**ವೇತನೇತರ**									
	ಕಛೇರಿ ವೆಚ್ಚ – 090	45.00	45.00	45.00	45.00	ಕಛೇರಿ ವೆಚ್ಚ				
	ಅಧಿಸೂಚಿತ ದಿನಗೂಲಿ ನೌಕರರ ವೇತನ–033	49.28	49.28	49.28	40.637	ಅಧಿಸೂಚಿತ ದಿನಗೂಲಿ ನೌಕರರ ವೇತನ				
	ಹೊರಗುತ್ತಿಗೆ ನೌಕರರ ವೇತನ– 034	26.09	26.09	26.09	24.937	ಹೊರಗುತ್ತಿಗೆ ನೌಕರರ ವೇತನ				

ವನ ಮಹೋತ್ಸವ

2020–21ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ವನ ಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗಿರುತ್ತದೆ. ಒಟ್ಟು 14 ಕಾರ್ಯಕ್ರಮವನ್ನು ಹಮ್ಮಿಕೊಂಡು 444 ಸಸಿಗಳನ್ನು ನೆಡಲಾಗಿರುತ್ತದೆ ಮತ್ತು 4400 ಸಸಿಗಳನ್ನು ವಿತರಿಸಲಾಗಿರುತ್ತದೆ. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಎಂಟು ಕಡೆ ಕಾರ್ಯಕ್ರಮ ಹಮ್ಮಿಕೊಂಡು 255 ಸಸಿಗಳನ್ನು ನೆಟ್ಟು 52500 ಸಸಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಹಸಿರು ಕರ್ನಾಟಕ ಕಾರ್ಯಕ್ರಮದಡಿ 228 ಕಾರ್ಯಕ್ರಮಗಳಲ್ಲಿ 71500 ಸಸಿಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲಾಗಿರುತ್ತದೆ.

ಸಂಸತ್ ಸದಸ್ಯರ ಅಭಿವೃದ್ಧಿ ಯೋಜನೆ

ಸದರಿ ಯೋಜನೆಯಡಿ 2020–21ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ವನಸಂವರ್ಧನ

ಸದರಿ ಯೋಜನೆಯಡಿ 2020–21ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

17. ಸಹಕಾರ ಇಲಾಖೆ

ಕರ್ನಾಟಕ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳಿದ್ದು ಇವುಗಳಲ್ಲಿ ಸಹಕಾರ ಇಲಾಖೆಯು ಒಂದಾಗಿರುತ್ತದೆ. ಸರ್ಕಾರವು ರೂಪಿಸಿರುವ ಹೊಸ ಆರ್ಥಿಕ ನೀತಿಯ ಅನುಷ್ಠಾನದಲ್ಲಿ ಈ ಇಲಾಖೆಯು ಸಹ ಮಹತ್ವದ ಪಾತ್ರವಹಿಸಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಜನರ ಆರ್ಥಿಕ ಸ್ಥಿತಿಯನ್ನು ಬಲಪಡಿಸಲು ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸಿ ಈ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಿನಾಂಕ :31.03.2021 ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ 1120 ವಿವಿಧ ಸಹಕಾರ ಸಂಘಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

1) ವ್ಯಾಪಾರಾಭಿವೃದ್ಧಿ ಯೋಜನೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 69 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ರೈತರಿಗೆ ಕೃಷಿಗೆ ಸಂಬಂಧಿಸಿದ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕ ಹಾಗೂ ಕೃಷಿ ಉತ್ಪನ್ನಗಳು ಇತ್ಯಾದಿಗಳನ್ನು ರೈತರಿಗೆ ಸುಲಭ ದರದಲ್ಲಿ ಹಾಗೂ ಸಕಾಲದಲ್ಲಿ ವಿತರಣೆ ಮಾಡುವ ಜವಾಬ್ದಾರಿಯನ್ನು ಹಮ್ಮಿಕೊಂಡಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಈ ವರ್ಗದ ಜನರಿಗೆ ಹೊಸ ತಂತ್ರಜ್ಞಾನದ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಚೈತನ್ಯವನ್ನು ನೀಡಲು ಕೇಂದ್ರ ಸರ್ಕಾರವು 8 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಲಾಗಿದೆ. ಈ ಜಿಲ್ಲೆಯಲ್ಲಿ 69 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡಿದ್ದು 2020–21ನೇ ಸಾಲಿನಲ್ಲಿ ರೂ.1100.00 ಲಕ್ಷ ಪತ್ತು ಮತ್ತು ರೂ.2000.00ಲಕ್ಷಗಳ ಪತ್ತೇತರ ವ್ಯವಹಾರ ನಡೆಸಲು ಗುರಿ ನಿಗಧಿ ಪಡಿಸಿಕೊಂಡಿದ್ದು, ಸದರಿ ಸಾಲಿನಲ್ಲಿ ಪತ್ತು ರೂ.1023.00 ಲಕ್ಷ ಮತ್ತು ಪತ್ತೇತರ ರೂ.1851.00 ಲಕ್ಷಗಳ ವ್ಯವಹಾರ ನಡೆಸಿರುತ್ತವೆ. ಗ್ರಾಮಾಂತರ ಪ್ರದೇಶದಲ್ಲಿ ರೂ.1200.00 ಲಕ್ಷ ರೂ.ಗಳ ಠೇವಣಿಯನ್ನು ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಿಕೊಂಡಿದ್ದು, ಸದರಿ ಸಾಲಿನಲ್ಲಿ ರೂ.803.00 ಲಕ್ಷಗಳ ಠೇವಣಿ ಸಂಗ್ರಹಣೆ ಮಾಡಲಾಗಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬ್ಯಾಂಕಿಂಗ್ ಕೌಂಟರ್‌ಗಳನ್ನು ಒದಗಿಸಿ ರೈತರಿಗೆ ಬ್ಯಾಂಕಿಂಗ್ ವ್ಯವಹಾರದ ಅವಕಾಶ ದೊರಕಿಸಿಕೊಡಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಠೇವಣಿಯನ್ನು ಸ್ವೀಕರಿಸಿ, ಆಭರಣ ಸಾಲ, ವೇತನ ಸಾಲ, ದಿನ ಬಳಕೆ ಸಾಲ ಇತ್ಯಾದಿ ಸಾಲಗಳನ್ನು ನೀಡಿ ಬ್ಯಾಂಕಿಂಗ್ ವ್ಯವಹಾರವನ್ನು ಉತ್ತಮವಾಗಿ ನಡೆಸುತ್ತಿದ್ದು ಸದಸ್ಯರಿಂದ ಪಿಗ್ಮಿ, ಉಳಿತಾಯ, ಖಾಯಂ ಠೇವಣಿ ಸಂಗ್ರಹಣೆ ಮಾಡುತ್ತಿರುತ್ತವೆ, ಈ ಠೇವಣಿಗಳ ಮೇಲೆ ಸಾಲ ವಿತರಣೆ ಮಾಡುತ್ತಿರುತ್ತವೆ.

2) ಕೃಷಿ ಸಾಲ ವ್ಯವಸ್ಥೆ:– ಅಲ್ಪಾವಧಿ/ಮಧ್ಯಮಾವಧಿ ಸಾಲಗಳ ವಿತರಣೆ:–

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಬರುವ 69 ಕಾರ್ಯನಿರತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸರ್ಕಾರದಿಂದ ಬಿಡಿ ಅಂಡ್ ಬಿಆರ್‌ಆರ್‌ಡಿಸಿಸಿ ಬ್ಯಾಂಕ್ ಮೂಲಕ ರೈತರಿಗೆ ಈ ಕೆಳಕಂಡಂತೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ವಿತರಣೆ ಮಾಡಲು ಗುರಿ ನಿಗಧಿಪಡಿಸಿಕೊಂಡು ಸಾಧಿಸಿರುವ ಪ್ರಗತಿ ಈ ಕೆಳಕಂಡಂತೆ ಇರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಸಾಲಗಳ ವಿವರ	ಗುರಿ		ಸಾಧನೆ		ಶೇಕಡವಾರು	
		ಬೌತಿಕ	ಆರ್ಥಿಕ	ಬೌತಿಕ	ಆರ್ಥಿಕ	ಬೌತಿಕ	ಆರ್ಥಿಕ
1	ಅಲ್ಪಾವಧಿ ಸಾಲ	26621	14642.00	27365	12400.21	102	84
2	ಮಧ್ಯಮಾವಧಿ ಸಾಲ	180	300.00	12	29.95	07	10
3	ದೀರ್ಘಾವಧಿ ಸಾಲ	270	1459.00	170	832.50	62	72

3) ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು

ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಒಂದರಂತೆ 4 ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. 2020–21ನೇ ಸಾಲಿನಲ್ಲಿ ರೂ.4212.00 ಲಕ್ಷಗಳಷ್ಟು ನಿಯಂತ್ರಿತ ಮತ್ತು ರೂ.8438.00 ಲಕ್ಷಗಳಷ್ಟು ಅನಿಯಂತ್ರಿತ ವ್ಯಾಪಾರ ವಹಿವಾಟು ಮಾಡಲಾಗಿರುತ್ತದೆ. ಇವುಗಳು ರೈತರಿಗೆ ಕೃಷಿ ಪರಿಕರ ಮತ್ತು ರಸಗೊಬ್ಬರ ವಿತರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುತ್ತವೆ.

4) ಹಾಲು ಉತ್ಪಾದಕರ ಸಹಕಾರ ಸಂಘಗಳು:–

ಜಿಲ್ಲೆಯಲ್ಲಿ 812 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಜಿಲ್ಲೆಯಲ್ಲಿ ಕ್ಷೀರ ಆಂದೋಲನಕ್ಕೆ ನಾಂದಿಯಾಗಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಲು ಸಹಾಯಕವಾಗಿರುತ್ತದೆ. ಪ್ರತಿದಿನ ಸರಾಸರಿ ರೂ.4.85 ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದೆ. 2020–21 ನೇ ಸಾಲಿನಲ್ಲಿ 43,645 ಜನ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ.5.00 ರಂತೆ ರೂ.8950.40 ಲಕ್ಷಗಳಷ್ಟು ಸರ್ಕಾರವು ಪ್ರೋತ್ಸಾಹ ಧನ ಬಿಡುಗಡೆ ಮಾಡಿದೆ.

5) 2020–21 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳನ್ನು ಕಾರ್ಯಗತ ಮಾಡಿರುವ ವಿವರಗಳು:–

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆಯ ವಿವರ	2020–21 ನೇ ಸಾಲಿನ ವಾರ್ಷಿಕ ಗುರಿ		2020–21 ನೇ ಸಾಲಿನ ಪ್ರಗತಿ		ಶೇಕಡಾವಾರು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
ಜಿಲ್ಲಾ ಪಂಚಾಯತ್							
1	ವಿವಿಧ ಸಹಕಾರ ಸಂಘಗಳಿಗೆ ಸಹಾಯ/ ಎನ್.ಸಿ.ಡಿ.ಸಿ ಯೋಜನೆ(2425–00–101–0–28)	8	4.00	8	4.00	100	100
2	ವಿವಿಧ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಸಹಾಯ/ ಎನ್.ಸಿ.ಡಿ.ಸಿ ಯೋಜನೆ(4425–00–101–0–26)	8	6.00	8	6.00	100	100
ತಾಲ್ಲೂಕು ಪಂಚಾಯತ್							
1	ವಿಷೇಷ ಘಟಕ ಯೋಜನೆ–ಆಸ್ತಿಗಳ ಸೃಷ್ಟಿಗಾಗಿ ಪಿಸಿಎಆರ್‌ಡಿಬಿ ಮಂಜೂರು ಮಾಡಿದ ಸಾಲಗಳ ಮೇಲೆ ಸಹಾಯ ಧನ(2425–00–101–0–61)	10	3.68	10	3.68	100	100

ರಾಜ್ಯ ಯೋಜನೆ

ಕ್ರ.ಸಂ.	ಯೋಜನೆಯ ವಿವರ	2020–21 ನೇ ಸಾಲಿನ ವಾರ್ಷಿಕ ಗುರಿ		2020–21 ನೇ ಸಾಲಿನ ಪ್ರಗತಿ		ಶೇಕಡಾವಾರು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ		
1	ಪರಿಶಿಷ್ಟ ಜಾತಿ ಸದಸ್ಯತ್ವ ಜನಾಂಗದವರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	180	0.90	200	1.00	111	111
2	ಪರಿಶಿಷ್ಟ ವರ್ಗ ಜನಾಂಗದವರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	36	0.18	54	0.27	150	150
3	ಅಲ್ಪಸಂಖ್ಯಾತರು ವರ್ಗದ ಜನಾಂಗ ಸದಸ್ಯತ್ವ ನೊಂದಣಿ ಸಹಾಯಧನ	180	0.90	284	0.90	157	100
4	ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	400	2.00	400	2.00	100	100
5	ವಿಕಲಚೇತನರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	36	0.18	36	0.18	100	100
6	ಬಡತನ ರೇಖೆಗಿಂತ ಕೆಳಗಿರುವವರನ್ನು ವಿವಿಧ ವರ್ಗದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ.	262	1.31	262	1.31	100	100
7	ಹಿಂದುಳಿದ ವರ್ಗದ ಜನಾಂಗ ಸದಸ್ಯತ್ವ ನೊಂದಣಿ ಸಹಾಯಧನ	120	0.60	120	0.60	100	100

18. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಯ ವ್ಯಾಪ್ತಿಯಲ್ಲಿ 4 ಶಿಶು ಅಭಿವೃದ್ಧಿ ಯೋಜನೆಗಳು ಹಾಗೂ 1 ಸುಧಾರಣಾ ಸಂಸ್ಥೆ ಕಾರ್ಯನಿರ್ವಹಿಸುತ್ತಿವೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 6 ವರ್ಷದೊಳಗಿನ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ, ವೈದ್ಯಕೀಯ ತಪಾಸಣೆ, ಶಾಲಾ ಪೂರ್ವ ಶಿಕ್ಷಣ, ಇತ್ಯಾದಿ ಸೇವೆಗಳನ್ನು ಒದಗಿಸುವುದರ ಮೂಲಕ ತಾಯಿ ಮಕ್ಕಳ ಮರಣ ಪ್ರಮಾಣದರವನ್ನು ಕಡಿಮೆಗೊಳಿಸುವುದು. ಮಕ್ಕಳನ್ನು ಮಾನಸಿಕವಾಗಿ ಮತ್ತು ಭೌತಿಕವಾಗಿ ಸದೃಢರನ್ನಾಗಿಸುವ ಗುರಿ ಹೊಂದಲಾಗಿದೆ. ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ನಿಯಮಿತ ವೈದ್ಯಕೀಯ ತಪಾಸಣೆ ಮತ್ತು ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ, ಅಪೌಷ್ಟಿಕ ಮಕ್ಕಳ ಸುಧಾರಣೆಗೆ ಕ್ರಮವಹಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಟ್ಟು 1230 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಈ ಅಂಗನವಾಡಿ ಕೇಂದ್ರಗಳ ಮೂಲಕ 0–6 ವರ್ಷದ ಮಕ್ಕಳಿಗೆ ಚುಚ್ಚು ಮದ್ದು, ಪೂರಕ ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ ಇತ್ಯಾದಿ ಕಾರ್ಯಕ್ರಮಗಳನ್ನು ಒದಗಿಸಲಾಗುತ್ತಿದೆ.

ಇಲಾಖಾ ವತಿಯಿಂದ ಒದಗಿಸುತ್ತಿರುವ ಕಾರ್ಯಕ್ರಮಗಳನ್ನು ಜಿಲ್ಲಾ ವಲಯ, ರಾಜ್ಯ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳನ್ನಾಗಿ ವಿಂಗಡಿಸಲಾಗಿದೆ. ಈ ಕಾರ್ಯಕ್ರಮಗಳಡಿ ಹಮ್ಮಿಕೊಂಡಿರುವ ಯೋಜನೆಗಳ ವಿವರ.

ಜಿಲ್ಲಾ ವಲಯ ಕಾರ್ಯಕ್ರಮ:

1. ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಾಗಿ ಕೇಂದ್ರ ಪುರಸ್ಕೃತ ಯೋಜನೆ (ಲೆಕ್ಕ ಶೀರ್ಷಿಕೆ:2211–00–102–0–22)

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಅಧಿಕಾರಿ/ಸಿಬ್ಬಂದಿಗಳ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಗೌರವಧನ, ಆಡಳಿತ ವೆಚ್ಚಕ್ಕೆ ಸಂಬಂಧಿಸಿರುವುದಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಗೆ ಬರುವ 04 ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, 1230 ಅಂಗನವಾಡಿ ಕಾರ್ಯಕರ್ತೆಯರು, 1109 ಅಂಗನವಾಡಿ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಯಕರ್ತೆಯರಿಗೆ ಮಾಸಿಕ ರೂ.10,250/–, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ರೂ.6,500/– ಹಾಗೂ ಸಹಾಯಕಿಯರಿಗೆ ಮಾಸಿಕ ರೂ.5.250/–, ಗೌರವಧನ ಪಾವತಿಸಲಾಗುತ್ತಿದೆ. ಸದರಿ ಲೆಕ್ಕಶೀರ್ಷಿಕೆಯಡಿ ಸಿಬ್ಬಂದಿಯವರ ವೇತನ ಹಾಗೂ ಆಡಳಿತ ವೆಚ್ಚ ಸೇರಿರುತ್ತದೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ (ರೂ.ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	2425	2572.08	2323	2626.43

2. ಶಾಲಾ ಪೂರ್ವ ಮಕ್ಕಳಿಗೆ ಪೌಷ್ಟಿಕಾಂಶ ಕಾರ್ಯಕ್ರಮ: (ಲೆಕ್ಕ ಶೀರ್ಷಿಕೆ:2235–00–101–0–61)

ಈ ಯೋಜನಾ ಕಾರ್ಯಕ್ರಮದಡಿಯಲ್ಲಿ 1109 ಅಂಗನವಾಡಿ ಕೇಂದ್ರ ಮತ್ತು 121 ಮಿನಿ ಅಂಗನವಾಡಿ ಕೇಂದ್ರಗಳಲ್ಲಿರುವ ಅಂಗನವಾಡಿ ಫಲಾನುಭವಿಗಳ ಪೌಷ್ಟಿಕಾಂಶ ಕಾರ್ಯಕ್ರಮಕ್ಕೆ ಸಂಬಂಧಿಸಿದ್ದಾಗಿರುತ್ತದೆ.

ಈ ಕಾರ್ಯಕ್ರಮದಡಿ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಪ್ರತಿದಿನ ತಲಾ ರೂ.8/– ರಂತೆ, ಗರ್ಭಿಣಿ–ಬಾಣಂತಿ, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಪ್ರತಿದಿನ ತಲಾ ರೂ.21/– ರಂತೆ, ಕಿಶೋರಿಯರಿಗೆ ತಲಾ ರೂ. 9.50/– ರಂತೆ, ತೀವ್ರ ಅಪೌಷ್ಟಿಕ ಮಕ್ಕಳಿಗೆ ತಲಾ ರೂ. 12/– ರಂತೆ ವರ್ಷದಲ್ಲಿ 300 ದಿನ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ ಹಾಗೂ ತೀವ್ರ ಅಪೌಷ್ಟಿಕ ಮಕ್ಕಳಿಗೆ ಸೃಷ್ಟಿ ಯೋಜನೆಯಡಿ 5 ದಿನ ಕೋಳಿ ಮೊಟ್ಟೆ, 5 ದಿನ 200 ಎಂ.ಎಲ್ ಹಾಲನ್ನು ಪೂರಕ ಪೌಷ್ಟಿಕ ಆಹಾರದ

ಜೊತೆಗೆ ನೀಡಲಾಗುತ್ತಿದೆ. ಜೊತೆಗೆ 6 ವರ್ಷದ ಎಲ್ಲಾ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆಯಡಿ 15 ಗ್ರಾಂ ಹಾಲಿನ ಪುಡಿಯಿಂದ ತಯಾರಿಸಿದ 150 ಎಂ.ಎಲ್ ಹಾಲನ್ನು ವಾರದಲ್ಲಿ 5 ದಿನ ವಿತರಿಸಲಾಗುತ್ತದೆ. 3 ರಿಂದ 6 ವರ್ಷದ ಸಾಮಾನ್ಯ, ಎಸ್.ಸಿ/ಎಸ್.ಟಿ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ವಿತರಿಸಲಾಗುತ್ತದೆ.

2020–21ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ (ರೂ.ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	66932	2802.97	70644	2711.84

3. ಅಂಗನವಾಡಿ ಕಟ್ಟಡಗಳು: (ಲೆಕ್ಕ ಶೀರ್ಷಿಕೆ:2211–00–102–0–61)

2020–21 ನೇ ಸಾಲಿಗೆ ರೂ. 50.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನವನ್ನು ಇಲಾಖೆಯ ಸ್ವಂತ ಅಂಗನವಾಡಿ ಕಟ್ಟಡಗಳ ನಿರ್ವಹಣೆಗೆ ಸಂಬಂಧಿಸಿರುತ್ತದೆ. ತಲಾ 1 ಅಂಗನವಾಡಿ ಕಟ್ಟಡಕ್ಕೆ ರೂ.50,000/– ದಿಂದ ರೂ.1.00 ಲಕ್ಷ ಮಿತಿ ಒಳಗೆ ದುರಸ್ಥಿ ಕಾರ್ಯವನ್ನು ತಾಲ್ಲೂಕು ಪಂಚಾಯತ್ ನಿಂದ ಕ್ರಿಯಾ ಯೋಜನೆ ಸಿದ್ಧಪಡಿಸಿ ಜಿಲ್ಲಾ ಪಂಚಾಯತ್ ನಿಂದ ಅನುಮೋದನೆ ಪಡೆದು ವೆಚ್ಚ ಭರಿಸಬೇಕಾಗಿದೆ. 2020–21 ನೇ ಸಾಲಿನಲ್ಲಿ 139 ಅಂಗನವಾಡಿ ಕಟ್ಟಡಗಳನ್ನು ದುರಸ್ಥಿಗೊಳಿಸಲಾಗಿದೆ. ಈ ಉದ್ದೇಶಕ್ಕೆ ಭರಿಸಲಾದ ವೆಚ್ಚ ರೂ. 49.64 ಲಕ್ಷಗಳು. ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ (ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	171	50.00	139	49.64

4. ಐ.ಸಿ.ಡಿ.ಎಸ್ ಘಟಕ, ಉಪನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಲೆಕ್ಕ ಶೀರ್ಷಿಕೆ:2211–00–102–0–02)

ಈ ಕಾರ್ಯಕ್ರಮದಡಿ ಉಪನಿರ್ದೇಶಕರ ಕಛೇರಿಯ ನಿರೂಪಣಾಧಿಕಾರಿ/ಸಿಬ್ಬಂದಿ/ಇತರೆ ಆಡಳಿತ ವೆಚ್ಚ ಒಳಗೊಂಡಿದೆ. ಜಿಲ್ಲಾ ವಲಯ ಕಾರ್ಯಕ್ರಮವಾಗಿದೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ (ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	9	42.94	3	37.18

5. ಸಿಬ್ಬಂದಿ ಮತ್ತು ಆಡಳಿತ (ಲೆಕ್ಕ ಶೀರ್ಷಿಕೆ:2235–00–101–0–27)

2020–21 ನೇ ಸಾಲಿನಲ್ಲಿ ರೂ. 54.74 ಲಕ್ಷ ಆಯವ್ಯಯ ಬಿಡುಗಡೆಯಾಗಿದ್ದು, ರೂ. 30.07 ಲಕ್ಷ ವೆಚ್ಚವಾಗಿರುತ್ತದೆ. ಈ ಅನುದಾನವು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು/ಸಿಬ್ಬಂದಿಯವರ ವೇತನ ಹಾಗೂ ಕಛೇರಿಯ ಆಡಳಿತ ವೆಚ್ಚ ಒಳಗೊಂಡಿರುತ್ತದೆ. ಈ ಕಾರ್ಯಕ್ರಮವು ಜಿಲ್ಲಾ ಪಂಚಾಯತಿಯ ಕಾರ್ಯಕ್ರಮವಾಗಿರುತ್ತದೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ (ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	9	54.74	2	30.07

6. ಶಿಶು ಕಲ್ಯಾಣ ನಿರ್ಗತಿಕ ಮಕ್ಕಳ ಪೋಷಣೆ ಮತ್ತು ನಿರ್ವಹಣೆ:(ಲೆಕ್ಕಶೀರ್ಷಿಕೆ:2211–00–102–0–26)

ಈ ಯೋಜನೆಯು ಅನಾಥ ಮಕ್ಕಳ ಪೋಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದ್ದಾಗಿರುತ್ತದೆ. 2020–21ನೇ ಸಾಲಿನಲ್ಲಿ 7 ಕುಟೀರಗಳಿಗೆ ರೂ. 18.90 ಲಕ್ಷಗಳು ಅನುದಾನ ನಿಗಧಿಯಾಗಿರುತ್ತದೆ. ನೆಲಮಂಗಲ ತಾಲ್ಲೂಕಿನ ಸ್ವರ್ಣಾಂಭ ವಿದ್ಯಾ ಗುರುಕುಲ ಸಂಸ್ಥೆಯಿಂದ 2 ಕುಟೀರ ಹಾಗೂ ಶ್ರೀ ವನಕಲ್ಲು ಮಲ್ಲೇಶ್ವರ ಮಹಾ ಸಂಸ್ಥಾನ ಮಠ ಟ್ರಸ್ಟ್ ಸಂಸ್ಥೆಯಿಂದ 3 ಕುಟೀರವಿದ್ದು, ಪ್ರತಿ ಕುಟೀರದಲ್ಲಿ 25 ಫಲಾನುಭವಿಗಳಿರುತ್ತಾರೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ (ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	175	18.90	125	11.23

ರಾಜ್ಯ ವಲಯದ ಕಾರ್ಯಕ್ರಮಗಳು:

1. ಭಾಗ್ಯಲಕ್ಷ್ಮೀ ಯೋಜನೆ:

ಈ ಯೋಜನೆಯು 2006–07ನೇ ಸಾಲಿನಲ್ಲಿ ಜಾರಿ ಮಾಡಲಾಗಿದೆ. ಈ ಯೋಜನೆಯಡಿ ದಿನಾಂಕ: 01.04.2006ರ ನಂತರ ಜನಿಸಿದ ಹೆಣ್ಣು ಮಗುವಿಗೆ ರೂ.10,000–00 ಠೇವಣಿಯನ್ನು ಸರ್ಕಾರ ಇಡುತ್ತದೆ. ದಿನಾಂಕ: 01.08.2008ರ ನಂತರ ಜನಿಸಿದ ಮೊದಲನೆ ಮಗುವಿಗೆ ರೂ.19,300/– ಹಾಗೂ 2ನೇ ಮಗುವಿಗೆ ರೂ.18,350/– ನ್ನು ಮಗುವಿಗೆ 18 ವರ್ಷ ಆಗುವವರೆಗೆ ಆ ಮೊತ್ತ ತೆಗೆಯಲು ಬರುವುದಿಲ್ಲ. ಮಗುವಿಗೆ 18 ವರ್ಷ ತುಂಬಿದ ನಂತರ ಪರಿಪಕ್ವ ಮೊತ್ತ ಲಭ್ಯವಾಗುತ್ತದೆ. ಈ ಕಾರ್ಯಕ್ರಮವು ರಾಜ್ಯ ವಲಯ ಯೋಜನಾ ವ್ಯಾಪ್ತಿಗೆ ಬರುತ್ತದೆ. ಬಿ.ಪಿ.ಎಲ್ ಕುಟುಂಬವನ್ನು ಮಾನದಂಡವನ್ನಾಗಿಸಿ ಆಯ್ಕೆ ಪ್ರಕ್ರಿಯೆ ಅನುಸರಿಸಲಾಗಿದೆ. ಯೋಜನೆ ಪ್ರಾರಂಭದಿಂದ 2020–21 ನೇ ಸಾಲಿನವರೆಗೆ 46199 ಬಾಂಡ್‌ಗಳನ್ನು ವಿತರಿಸಲಾಗುತ್ತದೆ.2020–21 ನೇ ಸಾಲಿನಿಂದ ಸದರಿ ಯೋಜನೆಯನ್ನು **"ಸುಕನ್ಯಾ ಸಮೃದ್ಧಿ"** ಯೋಜನೆಯಾಗಿ ಅಂಚೆ ಕಛೇರಿ ಮೂಲಕ ಜಾರಿಗೊಳಿಸಲು ಸರ್ಕಾರದ ಆದೇಶವಾಗಿರುತ್ತದೆ.

2. ಸ್ತ್ರೀ ಶಕ್ತಿ ಯೋಜನೆ:–

ಈ ಯೋಜನೆಯು 2000–01 ನೇ ಸಾಲಿನಲ್ಲಿ ಜಾರಿಗೆ ಬಂದಿರುತ್ತದೆ. ಮಹಿಳೆಯರ ಸಬಲೀಕರಣ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಈ ಯೋಜನೆ ಪೂರಕವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2020–21ನೇ ಸಾಲಿನವರೆಗೆ ರಚನೆಯಾಗಿರುವ ಒಟ್ಟು ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ 3872 ಇದ್ದು, ಒಟ್ಟು 61010 ಸದಸ್ಯರಿರುತ್ತಾರೆ. ಈ ಯೋಜನೆಗೆ ಸರ್ಕಾರದಿಂದ ಸುತ್ತುನಿಧಿ, ಆದಾಯೋತ್ಪನ್ನ ಚಟುವಟಿಕೆ ಹಮ್ಮಿಕೊಂಡಿರುವ ಗುಂಪುಗಳಿಗೆ, ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ, ಶೇಕಡ 6% ಬಡ್ಡಿ ಸಹಾಯಧನ ಮುಂತಾದ ವಿವಿಧ ಕಾರ್ಯಕ್ರಮಗಳಿಗೆ ಪ್ರಗತಿ ಸಾಧಿಸಲಾಗಿರುತ್ತದೆ.

2020–21ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕಿನ, ಸಿಂಧುಶ್ರೀ ಸ್ತ್ರೀಶಕ್ತಿ ಸ್ವಸಹಾಯ ಸಂಘ, ದಾಬಸ್ ಪೇಟೆ, ರಾಜ್ಯ ಮಟ್ಟದ ಅತ್ಯುತ್ತಮ ಸ್ತ್ರೀಶಕ್ತಿ ಗುಂಪು ಪ್ರಶಸ್ತಿ ಪಡೆದುಕೊಂಡಿರುತ್ತದೆ.

3. ಕೌಟುಂಬಿಕ ದೌರ್ಜನ್ಯ ಕಾಯ್ದೆ 2005 ನಿಯಮ 2006:

ಲೆಕ್ಕ ಶೀರ್ಷಿಕೆ: 2235–02–103–52(ಯೋಜನೆ) ಕೌಟುಂಬಿಕ ದೌರ್ಜನ್ಯ ಕಾಯ್ದೆ 2005 ನಿಯಮ 2006 ರಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 4 ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಸಂರಕ್ಷಣಾಧಿಕಾರಿಗಳಾಗಿ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2020–21 ನೇ ಸಾಲಿಗೆ ರೂ. 11.40 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಭರಿಸಲಾದ ವೆಚ್ಚ ರೂ. 10.84 ಲಕ್ಷಗಳು ಈ ಯೋಜನೆ ರಾಜ್ಯ ಯೋಜನಾ ವ್ಯಾಪ್ತಿಗೆ ಬರುತ್ತದೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ(ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	5	11.40	5	10.84

4. ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಪ್ರಶಸ್ತಿ:

ಲೆಕ್ಕ ಶೀರ್ಷಿಕೆ: 2235–02–102–0–27(117) ಯೋಜನೆಯಡಿಯಲ್ಲಿ 2020–21 ನೇ ಸಾಲಿಗೆ ಅಸಾಧಾರಣ ಪ್ರತಿಭೆಯುಳ್ಳ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಕಾರ್ಯಕ್ರಮಕ್ಕೆ ರೂ. 0.80 ಲಕ್ಷ ಅನುದಾನ ಬಿಡುಗಡೆಗೊಂಡಿದ್ದು, ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ 8 ಮಕ್ಕಳಿಗೆ ಪ್ರತಿ ಮಕ್ಕಳಿಗೆ ರೂ. 10.000/– ದಂತೆ ನಗದು ಹಾಗೂ ಪ್ರಮಾಣ ಪತ್ರ ವಿತರಿಸಲಾಗಿದೆ.

2020–21 ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ(ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	8	0.80	8	0.80

5. ಸಾಂತ್ವನ ಯೋಜನೆ: ಶೀರ್ಷಿಕೆ (2235-02-103-0-99-100)

ಈ ಯೋಜನೆಯು ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ ಮುಂತಾದ ವಿವಿಧ ರೀತಿಯ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನೆರವು ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಸಾಂತ್ವಾನ ಯೋಜನೆಯನ್ನು 2000–2001ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ.
ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ಕಾನೂನು ಸಲಹೆ ಆರ್ಥಿಕ ಪರಿಹಾರ ತಾತ್ಕಾಲಿಕ ಆಶ್ರಯ ರಕ್ಷಣೆ ನೀಡುವುದರ ಜೊತೆಗೆ ಸ್ವಯಂ ಪ್ರೇರಣೆಯಿಂದ ತಮ್ಮ ಕಾಲ ಮೇಲೆ ತಾವು ನಿಲ್ಲಲು ಅನುಕೂಲವಾಗುವಂತೆ ಧೈರ್ಯವಾಗಿ ಬದುಕಲು ಸಶಕ್ತರನ್ನಾಗಿ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈಲ್ಲೆಯಲ್ಲಿ 05 ಸಾಂತ್ವಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿಯೊಂದು ಕೇಂದ್ರದಲ್ಲೂ ಮಹಿಳಾ ಸಹಾಯವಾಣಿ ಸೌಲಭ್ಯವಿದ್ದು, ನೊಂದ ಮತ್ತು ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಂದ ದೂರು ಸ್ವೀಕರಿಸುವ ವ್ಯವಸ್ಥೆಯಿದ್ದು, ಪ್ರಸ್ತುತ ಕೇಂದ್ರಗಳು 24/7 ಕೆಲಸ ನಿರ್ವಹಿಸುತ್ತಿದೆ. 2020–21 ನೇ ಸಾಲಿನಲ್ಲಿ 05 ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯು ರಾಜ್ಯ ಯೋಜನಾ ವ್ಯಾಪ್ತಿಗೆ ಬರುತ್ತದೆ.

2020–21ನೇ ಸಾಲಿನಲ್ಲಿ	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ(ರೂ. ಲಕ್ಷಗಳಲ್ಲಿ)	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	5	31.75	5	31.75

ಕೇಂದ್ರ ವಲಯದ ಕಾರ್ಯಕ್ರಮಗಳು:

1) "ಸಖಿ" (OSC –One Stop center)

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಸೇವೆ, ಪೋಲೀಸ್ ಸೇವೆ, ಸಮಾಲೋಚನೆ, ಮತ್ತು ತಾತ್ಕಾಲಿಕ ವಸತಿ ಒದಗಿಸುವ ಕೇಂದ್ರ ಸರ್ಕಾರದ ಅನುದಾನಿತ ಯೋಜನೆಯಾಗಿರುತ್ತದೆ. ಯೋಜನೆಯಡಿ ದೊಡ್ಡಬಳ್ಳಾಪುರ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಸಖಿ ಕಾಮಗಾರಿ ನಿರ್ಮಾಣ ಹಂತದಲ್ಲಿರುತ್ತದೆ. ಸಖಿ ಕಟ್ಟಡ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ. "ಸಖಿ" ಯೋಜನೆಯಡಿ ಆಯ್ಕೆಯಾದ ಸಿಬ್ಬಂದಿ ವರ್ಗದವರು ಪ್ರಸ್ತುತ ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

	ಬಿಡುಗಡೆ (ರೂ. ಲಕ್ಷಗಳಲ್ಲಿ)		ಸಾಧನೆ(ರೂ. ಲಕ್ಷಗಳಲ್ಲಿ)	
2020–21 ನೇ ಸಾಲಿನಲ್ಲಿ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	1	48.68	1	48.68

2) ಪ್ರಧಾನಮಂತ್ರಿ ಮಾತೃವಂದನಾ ಯೋಜನೆ:–

ಈ ಯೋಜನೆಯು ದಿನಾಂಕ: 01.01.2017 ರಿಂದ ಜಾರಿಯಾಗಿರುತ್ತದೆ. ಈ ಯೋಜನೆಯಡಿ ಎಪಿಎಲ್ ಹಾಗೂ ಬಿಪಿಎಲ್ ಕಾರ್ಡ್‌ಹೊಂದಿರುವ ಮೊದಲ ಗರ್ಭಿಣಿ ಮಹಿಳೆಯರಿಗೆ ಪ್ರಸವದ ಮತ್ತು ನಂತರದ ಸಾಕಷ್ಟು ವಿಶ್ರಾಂತಿಗಾಗಿ ಆಂಶಿಕ ಪರಿಹಾರವನ್ನು ಪ್ರೋತ್ಸಾಹ ಧನದ ರೂಪದಲ್ಲಿ ವೇತನ ನಷ್ಟಕ್ಕಾಗಿ ನೀಡುವ ಯೋಜನೆ. ಸಹಾಯಧನವನ್ನು ಮೂರು ಕಂತುಗಳಲ್ಲಿ ಒಟ್ಟು 5,000/– ರೂ ಗಳನ್ನು ನೇರ ನಗದು ವರ್ಗಾವಣೆಯ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುವುದು. ಈ ಯೋಜನೆಯಡಿ 2020–21 ನೇ ಸಾಲಿನಲ್ಲಿ 6937 ಫಲಾನುಭವಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

3) ಪೋಷಣ್ ಅಭಿಯಾನ ಯೋಜನೆ:–

ಕೇಂದ್ರ ಸರ್ಕಾರವು ನ್ಯಾಷನಲ್ ನ್ಯೂಟ್ರಿಷನ್ ಮಿಷನ್ (ಪೋಷಣ್ ಅಭಿಯಾನ್ ಯೋಜನೆ)ಯನ್ನು 3 ವರ್ಷಗಳ ಅವಧಿಗೆ ಜಾರಿಗೆ ತರಲು ಉದ್ದೇಶಿಸಿದ್ದು, ಈ ಯೋಜನೆಯು ಮೂರನೇ ಹಂತದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2018 ರಿಂದ ಅನುಷ್ಠಾನಗೊಂಡಿರುತ್ತದೆ.

ಈ ಯೋಜನೆಯಡಿ 0 ರಿಂದ 6 ವರ್ಷದವರೆಗಿನ ಮಕ್ಕಳು, ಕಿಶೋರಿಯರು, ಗರ್ಭಿಣಿ ಮತ್ತು ಬಾಣಂತಿಯರ ಪೌಷ್ಠಿಕತಾ ಮಟ್ಟವನ್ನು ಸುಧಾರಿಸುವುದು. ನಿಗಧಿತ ಕಾಲಮಿತಿಯಲ್ಲಿ ವಿವಿಧ ಇಲಾಖೆಗಳ ಸಹಕಾರದೊಂದಿಗೆ ನಿಗಧಿತ ಗುರಿ ತಲುಪುವಲ್ಲಿ ಸಮುದಾಯ ಆಧಾರಿತ ಚಟುವಟಿಕೆಗಳ ಮುಖಾಂತರ ಗರ್ಭಿಣಿ ಬಾಣಂತಿಯರಿಗೆ, ಪೋಷಕರಿಗೆ ಮತ್ತು ಸಮುದಾಯಕ್ಕೆ ಮಕ್ಕಳ ಪೋಷಣೆ ಕುರಿತ ಮಾಹಿತಿಯನ್ನೊಳಗೊಂಡ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳು:

1. ಉದ್ಯೋಗಿನಿ ಯೋಜನೆ:–

1997–98ನೇ ಸಾಲಿನಿಂದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 18–55 ವರ್ಷದೊಳಗಿನ ವಾರ್ಷಿಕ ಕೌಟುಂಬಿಕ ಆದಾಯ ರೂ. 2,00,000/– ಕ್ಕಿಂತ ಒಳಗಿರುವಂತಹ ಪ.ಜಾತಿ ಮತ್ತು ಪ.ಪಂಗಡದ ಮಹಿಳೆಯರು ಹಾಗೂ ರೂ. 1,50,000/– ಕ್ಕಿಂತ ಒಳಗಿರುವ ಇತರೆ ವರ್ಗದ ಮಹಿಳೆಯರು ಈ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. 2020–21 ನೇ ಸಾಲಿನಲ್ಲಿ ಯೋಜನೆಯಡಿ 24 ಫಲಾನುಭವಿಗಳಿಗೆ 36.00 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.

2. ಸಮೃದ್ಧಿ ಯೋಜನೆ:–

ಈ ಯೋಜನೆಯು 2016–17ನೇ ಸಾಲಿನಲ್ಲಿ ಜಾರಿಗೆ ಬಂದಿರುತ್ತದೆ. ಈ ಯೋಜನೆಯಡಿ ಬೀದಿಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ರೂ. 10,000/– ಗಳ ಸಹಾಯಧನವನ್ನು ವಿತರಿಸಲಾಗುವುದು. ನಗರ ಮತ್ತು ಗ್ರಾಮೀಣ ಪ್ರದೇಶದ ಬೀದಿಬದಿ ಮಹಿಳಾ ವ್ಯಾಪಾರಿಗಳು ಹೆಚ್ಚಿನ ಬಡ್ಡಿ ನೀಡಿ ಸಾಲ ಪಡೆಯುವುದನ್ನು ತಡೆಗಟ್ಟಿ ಶೋಷಣೆಯಿಂದ ಮುಕ್ತಗೊಳಿಸುವುದು ಮತ್ತು ಮಹಿಳೆಯರ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. 2020–21 ನೇ ಸಾಲಿನಲ್ಲಿ 140 ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗಿದೆ.

3. ಚೇತನ ಯೋಜನೆ:–

ಈ ಯೋಜನೆಯು 2014–15ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಈ ಯೋಜನೆಯಡಿ ಲೈಂಗಿಕ ಕಾರ್ಯಕರ್ತೆಯರು ಅಥವಾ ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯರು ತಮ್ಮ ವೃತ್ತಿ ಜೀವನದಿಂದ ಹೊರಬಂದು ಸ್ವಾವಲಂಬಿಗಳಾಗಿ ಇಚ್ಛಿಸುವಂತಹವರಿಗೆ ಪುನರ್ವಸತಿ ಕಲ್ಪಿಸುವ ದೃಷ್ಟಿಯಿಂದ ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆರ್ಥಿಕ ಸ್ವಾವಲಂಬನೆ ಮೂಲಕ ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಗೊಳ್ಳಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಸಾಲ ಮತ್ತು ಸಹಾಯಧನ ಒದಗಿಸಲಾಗುವುದು. 2020–21 ನೇ ಸಾಲಿನಲ್ಲಿ ಜಿಲ್ಲೆಗೆ 10 ಭೌತಿಕ ಗುರಿ ನಿಗಧಿಯಾಗಿದ್ದು, 10 ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ಒದಗಿಸಲಾಗಿದೆ.

4. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:

ಈ ಯೋಜನೆಯು 2013–14ನೇ ಸಾಲಿನಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಾರಿಯಲ್ಲಿರುತ್ತದೆ. ಲಿಂಗತ್ವ ಅಲ್ಪಸಂಖ್ಯಾತರು ಸ್ವಯಂ ಉದ್ಯೋಗಕ್ಕಾಗಿ ಕೌಶಲ್ಯ ತರಬೇತಿ ನೀಡಿ ಇವರು ಗೌರವಾನ್ವಿತ ಜೀವನವನ್ನು ನಡೆಸಲು ಸಾಲ ಮತ್ತು ಸಹಾಯಧನವನ್ನು ಒದಗಿಸಲಾಗುವುದು. 2020–21 ನೇ ಸಾಲಿನಲ್ಲಿ 10 ಜನ ಫಲಾನುಭವಿಗಳಿಗೆ ತಲಾ ರೂ.0.50 ಲಕ್ಷದಂತೆ ಒಟ್ಟು ರೂ 5.00 ಲಕ್ಷಗಳ ಸಾಲ ಮತ್ತು ಸಹಾಯಧನ ಒದಗಿಸಲಾಗಿದೆ.

5. ಧನಶ್ರೀ ಯೋಜನೆ:

ಈ ಯೋಜನೆಯು 2016–17ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18–60 ವಯೋಮಿತಿಯ ಹೆಚ್.ಐ.ವಿ ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಂಡು ಅಭಿವೃದ್ಧಿ ಹೊಂದಲು ಪ್ರೇರೇಪಿಸಲು ಈ ಯೋಜನೆಯನ್ನು ರೂಪಿಸಲಾಗಿದೆ. 2020–21ನೇ ಸಾಲ್ಲಿನಲ್ಲಿ ಜಿಲ್ಲೆಗೆ 2 ಭೌತಿಕ ಗುರಿ ನಿಗಧಿಯಾಗಿದ್ದು, 2 ಫಲಾನುಭವಿಗಳಿಗೆ ತಲಾ ರೂ.0.50 ಲಕ್ಷಗಳಂತೆ ಸಾಲ ಮತ್ತು ಸಹಾಯಧನ ವಿತರಿಸಲಾಗಿದೆ.



ಪೋಷಣ್ ಪಕ್ವಾಡ್ ಕಾರ್ಯಕ್ರಮ ಆಚರಣೆ



ಪೋಷಣ್ ಅಭಿಯಾನ ಸಪ್ತಾಹ ಕಾರ್ಯಕ್ರಮ



ಪೋಷನ್ ಅಭಿಯಾನ ಕೈತೋಟ ನಿರ್ಮಾಣ



ಋತು ಚಕ್ರ ನೈರ್ಮಲ್ಯ ಸಪ್ತಾಯ ಕಾರ್ಯಕ್ರಮ



ಮಾನ್ಯ ಇಲಾಖಾ ಸಚಿವರ ಪ್ರಗತಿ ಪರಿಶೀಲನಾ ಸಭೆ





ಮನೆಬಾಗಿಲಿಗೆ ಪೌಷ್ಠಿಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಿರುವುದು.









ಮಾದರಿ ಅಂಗನವಾಡಿ ಕೇಂದ್ರಗಳು

19. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಲೆಕ್ಕ ಶೀರ್ಷಿಕೆ: 2205–00–104–0–26 ಕ್ರೀಡಾಕೂಟ ಮತ್ತು ರ್ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ :–

ಅನುದಾನ ನಿಗಧಿ : ರೂ 55.00 ಲಕ್ಷ

ವೆಚ್ಚ : ರೂ 27,99,998.00

ಷರಾ:– ಇಲಾಖೆಯ ಮಾರ್ಗಸೂಚಿ ಅನುಸಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಆದರೆ, ಕೋವಿಡ್–19ರ ಪ್ರಯುಕ್ತ (ಕೇಂದ್ರ ಕಛೇರಿಯ ಸುತ್ತೋಲೆ ಸಂಖ್ಯೆ : ಡಿವೈಇಎಸ್/ಎಸ್ಎಸ್ಹೆಚ್/113/2020–21, ದಿನಾಂಕ 22.12.2020ರ ಆದೇಶದಂತೆ) ಕೆಲವು ಕ್ರೀಡಾಕೂಟಗಳನ್ನು/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸದೆ ಇದ್ದುದರಿಂದ, ಉಳಿಕೆಯಾದ ಅನುದಾನ ರೂ 27.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2205–00–104–0–28 ಕ್ಕೆ ಮರು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ

ಸರ್ಕಾರಿ ನೌಕರರ ಕ್ರೀಡಾಕೂಟ :–

ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಸಹಯೋಗದೊಂದಿಗೆ ಕೆಳಕಂಡ ತಾಲ್ಲೂಕುಗಳಲ್ಲಿ ಸಂಘಟಿಸಲಾಗಿದೆ.

1) **ದೊಡ್ಡಬಳ್ಳಾಪುರ**:ದಿನಾಂಕ 20.01.2021 ಮತ್ತು 21.01.2021ರಂದು ದೊಡ್ಡಬಳ್ಳಾಪುರ ತಾಲ್ಲೂಕಿನ ಭಗತ್‌ಸಿಂಗ್ ಕ್ರೀಡಾಂಗಣದಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಸಂಘಟಿಸಲಾಯಿತು. ಸಂಘಟನಾ ವೆಚ್ಚವಾಗಿ ರೂ 37,270/– ಗಳನ್ನು ಸರ್ಕಾರಿ ನೌಕರರ ಸಂಘಕ್ಕೆ ಬಿಡುಗಡೆ ಮಾಡಲಾಗಿದೆ.
2) **ದೇವನಹಳ್ಳಿ**:ದಿನಾಂಕ 27.01.2021 ಮತ್ತು 28.01.2021 ರಂದು ದೇವನಹಳ್ಳಿ ಕ್ರೀಡಾಂಗಣದಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಸಂಘಟಿಸಲಾಗಿದೆ.
3) **ಹೊಸಕೋಟೆ**:ದಿನಾಂಕ 22.01.2021 ರಂದು ಹೊಸಕೋಟೆ ಕ್ರೀಡಾಂಗಣದಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಸಂಘಟಿಸಲಾಗಿದೆ.

ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ :–

ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ದಿನಾಂಕ: 15.2.2021 ರಿಂದ 16.2.2021 ರವರೆಗೆ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಸಂಘಟಿಸಲಾಯಿತು. ನಾಲ್ಕು ತಾಲ್ಲೂಕುಗಳಿಂದ ಸುಮಾರು 250 ಮಂದಿಯಂತೆ ಒಟ್ಟು 1000 ಸರ್ಕಾರಿ ನೌಕರರು ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟನೆಗಾಗಿ ರೂ 9,01,303/– ಗಳ ವೆಚ್ಚವನ್ನು ಭರಿಸಲಾಗಿದೆ.

ರಾಷ್ಟ್ರೀಯ ಕ್ರೀಡಾ ದಿನಾಚರಣೆ:–

ದಿನಾಂಕ 29.08.2020 ರಂದು ಮೇಜರ್ ಧ್ಯಾನ್‌ಚಂದ್‌ರವರ ಹುಟ್ಟುಹಬ್ಬ ಹಾಗೂ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಕೋವಿಡ್–19ರ ಪ್ರಯುಕ್ತ ಅತ್ಯಂತ ಸರಳವಾಗಿ ಜಿಲ್ಲಾಡಳಿತ ಭವನ, ಬೀರಸಂದ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಸಂಘಟಿಸಲಾಯಿತು. ಧ್ಯಾನ್‌ಚಂದ್‌ರವರ ಫೋಟೋ ಮಾಡಿಸಿರುವುದಕ್ಕೆ ಹಾಗೂ ಕಾರ್ಯಕ್ರಮಕ್ಕೆ ರೂ 11,772/–ಗಳ ವೆಚ್ಚವನ್ನು ಭರಿಸಲಾಗಿದೆ.

ಯುವಜನೋತ್ಸವ :–

2020–21 ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ದಿನಾಂಕ : 29.12.2020 ರಂದು ಡಾ॥ ಬಿ.ಆರ್. ಅಂಬೇಡ್ಕರ್ ಭವನ, ದೇವನಹಳ್ಳಿ ಟೌನ್‌ನಲ್ಲಿ ಸಂಘಟಿಸಲಾಯಿತು. ಕಾರ್ಯಕ್ರಮದ ಸಂಘಟನೆಗಾಗಿ ರೂ 2,24,810/– ಗಳ ವೆಚ್ಚವನ್ನು ಭರಿಸಲಾಗಿದೆ. ಕೋವಿಡ್–19ರ ಪ್ರಯುಕ್ತ ರಾಜ್ಯ ಮಟ್ಟದ ಯುವಜನೋತ್ಸವವು ವರ್ಚುಯಲ್ ಆಗಿ ರಾಜ್ಯ ಯುವ ಕೇಂದ್ರದಲ್ಲಿ ದಿನಾಂಕ 02.01.2021 ಮತ್ತು 03.01.2021 ರಂದು ನಡೆದಿದ್ದು, ಜಿಲ್ಲಾ ಮಟ್ಟದಲ್ಲಿ ವಿವಿಧ ಕಲಾ ಪ್ರಕಾರಗಳಲ್ಲಿ ನಡೆದ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಮತ್ತು ಗುಂಪು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳ ಸಿಡಿಯನ್ನು ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಕಳುಹಿಸಿಕೊಡಲಾಗಿತ್ತು.

ಸ್ವಾಮೀ ವಿವೇಕಾನಂದ ಜಯಂತಿ/ಯುವ ಸಪ್ತಾಹ:–

ದಿನಾಂಕ 12.01.2021 ರಂದು ಸ್ವಾಮಿ ವಿವೇಕಾನಂದರರ ಹುಟ್ಟುಹಬ್ಬದ ಅಂಗವಾಗಿ ಡಾ॥ ಬಿ.ಆರ್. ಅಂಬೇಡ್ಕರ್ ಭವನ, ದೇವನಹಳ್ಳಿ ಟೌನ್‌ನಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಸಂಘಟಿಸಲಾಯಿತು. ಹಾಗೂ ಶಾಲಾ/ಕಾಲೇಜು ಹಂತದಲ್ಲಿ ವಿವಿಧ ಸ್ಪರ್ಧೆಗಳನ್ನು ನಡೆಸಿರುವುದಕ್ಕೆ ಮಕ್ಕಳಿಗೆ ಪ್ರಶಸ್ತಿ ಪ್ರಮಾಣ ಪತ್ರವನ್ನು ನೀಡಲಾಯಿತು. ಸದರೀ ಕಾರ್ಯಕ್ರಮದ ಸಂಘಟನೆಗಾಗಿ ಒಟ್ಟಾರೆ ರೂ 2,40,900/– ಗಳ ವೆಚ್ಚವನ್ನು ಭರಿಸಲಾಗಿದೆ.

ತಾಲ್ಲೂಕಿನ ಹೋಬಳಿ ಮಟ್ಟದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ/ಯುವ ಸಪ್ತಾಹ ಆಚರಣೆಯನ್ನು ಯುವಕ ಸಂಘಗಳ ಮುಖಾಂತರ ಸಂಘಟಿಸಲು ಹೋಬಳಿಗೆ ರೂ 5000/–ರಂತೆ ಸಂಘಟನಾ ವೆಚ್ಚವಾಗಿ ನೀಡಲಾಗಿದೆ. ತಾಲ್ಲೂಕುಗಳಲ್ಲಿ ಹೋಬಳಿವಾರು ಕಾರ್ಯಕ್ರಮಗಳನ್ನು ಸಂಘಟಿಸಿದ ವಿವರಗಳು ಕೆಳಕಂಡಂತಿವೆ:–

ಹಾಗೂ

ತಾಲ್ಲೂಕು ಮಟ್ಟದಲ್ಲಿ ಯುವ ಸಂಪರ್ಕ ಸಭೆಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವಕ ಸಂಘಗಳ ಸಹಯೋಗದೊಂದಿಗೆ ತಾಲ್ಲೂಕುವಾರು ಸಂಘಟನೆ ಮಾಡಲಾಗಿದೆ. ಯುವ ಸಂಪರ್ಕ ಸಭೆಯಲ್ಲಿ ಇಲಾಖೆಯ ಕಾಯಕ್ರಮಗಳು, ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿರುತ್ತದೆ.

ದೇವನಹಳ್ಳಿ ತಾಲ್ಲೂಕು :

ಸ್ವಾಮಿ ವಿವೇಕಾನಂದ ಕಾರ್ಯಕ್ರಮ ಹಾಗೂ ಯುವ ಸಂಪರ್ಕ ಸಭೆಗಳನ್ನು ಮಾತೃಭೂಮಿ ಯುವಕ ಸಂಘದ ವತಿಯಿಂದ ಸಂಘಟಿಸಲಾಗಿದೆ.

01. ದಿನಾಂಕ 29.01.2021 ವೆಂಕಟಗಿರಿ ಕೋಟೆ, ದೇವನಹಳ್ಳಿ ತಾಲ್ಲೂಕು
02. ದಿನಾಂಕ 30.01.2021 ಯಲಿಯೂರು, ದೇವನಹಳ್ಳಿ ತಾಲ್ಲೂಕು
03. ದಿನಾಂಕ 30.01.2021 ಆವತಿ, ದೇವನಹಳ್ಳಿ ತಾಲ್ಲೂಕು
04. ದಿನಾಂಕ 30.01.2021 ವಿಜಯಪುರ ಟೌನ್, ದೇವನಹಳ್ಳಿ ತಾಲ್ಲೂಕು
05. ದಿನಾಂಕ 28.01.2021 ಕಸಬಾ, ದೇವನಹಳ್ಳಿ ತಾಲ್ಲೂಕು

ದೊಡ್ಡಬಳ್ಳಾಪುರ ತಾಲ್ಲೂಕು :

01. ದಿನಾಂಕ 19.01.2021 ರಂದು ಸರ್ಕಾರಿ ಪದವಿ ಪೂರ್ವ ಕಾಲೇಜು, ಕನಸವಾಡಿ, ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಡ್ಡಬೆಳವಂಗಲ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಉದಯ ಜಾನಪದ ಕಲಾ ಸಂಘದ ವತಿಯಿಂದ ಸಂಘಟಿಸಲಾಗಿದೆ.

02. ದಿನಾಂಕ 21.01.2021 ರಂದು ಶ್ರೀ ಕೊಂಗಾಡಿಯಪ್ಪ ಕಾಲೇಜು, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಯುವ ಸಂಚಲನ ಯುವಕ ಸಂಘದ ವತಿಯಿಂದ ಸಂಘಟಿಸಲಾಗಿದೆ.

03. ದಿನಾಂಕ 17.01.2021 ರಂದು ಸರ್ಕಾರಿ ಪ್ರೌಢಶಾಲೆ, ಸಾಸಲು, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಯುವ ಸಂಪರ್ಕ ಸಭೆಯನ್ನು ಯುವ ಸಂಚಲನ ಯುವಕ ಸಂಘದ ವತಿಯಿಂದ ಸಂಘಟಿಸಲಾಗಿದೆ.

ನೆಲಮಂಗಲ ತಾಲ್ಲೂಕು :–

ನೆಲಮಂಗಲ ತಾಲ್ಲೂಕಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಅಂಬೇಡ್ಕರ್ ಮಹಿಳಾ ಸಂಘದ ವತಿಯಿಂದ ಕೆಳಕಂಡ ಸ್ಥಳಗಳಲ್ಲಿ ಸಂಘಟಿಸಲಾಗಿದೆ.

01. ದಿನಾಂಕ 12.01.2021 ತ್ಯಾಮಗೊಂಡ್ಲು ಹೊಬಳಿಯ ಮರಳು ಕುಂಟೆ ಗ್ರಾಮ
02. ದಿನಾಂಕ 12.01.2021 ತ್ಯಾಮಗೊಂಡ್ಲು ಹೊಬಳಿಯ ಮಣ್ಣೇ ಗ್ರಾಮ
03. ದಿನಾಂಕ 13.01.2021 ಸೋಂಪುರ ಹೊಬಳಿಯ ಸೋಂಪುರ ಗ್ರಾಮ
04. ದಿನಾಂಕ 13.01.2021 ಸೋಂಪುರ ಹೊಬಳಿಯ ನರಸಿಪುರ ಗ್ರಾಮ
05. ದಿನಾಂಕ 15.01.2021 ತ್ಯಾಮಗೊಂಡ್ಲು ಹೊಬಳಿಯ ತ್ಯಾಮಗೊಂಡ್ಲು ಗ್ರಾಮ

ಹೊಸಕೋಟೆ ತಾಲ್ಲೂಕು :–

ಹೊಸಕೋಟೆ ತಾಲ್ಲೂಕಿನಲ್ಲಿ ಸ್ಫೂರ್ತಿ ಮತ್ತು ಮಹಿಳಾ ಮಕ್ಕಳ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಕೆಳಕಂಡ ಸ್ಥಳಗಳಲ್ಲಿ ಸ್ವಾಮಿ ವಿವೇಕಾನಂದರ ಯುವ ಸಪ್ತಾಹ ಕಾರ್ಯಕ್ರಮವನ್ನು ಸಂಘಟಿಸಲಾಗಿದೆ.

01. ದಿನಾಂಕ: 24.02.2021 ನಂದಗುಡಿ ಹೋಬಳಿ ಹೊಸಕೋಟೆ ತಾಲ್ಲೂಕು
02. ದಿನಾಂಕ : 10.02.2021 ಅನುಗೊಂಡನಹಳ್ಳಿ ಹೋಬಳಿ ಹೊಸಕೋಟೆ ತಾಲ್ಲೂಕು
03. ದಿನಾಂಕ : 06.02.2021 ಕಸಬಾ ಹೋಬಳಿ ಹೊಸಕೋಟೆ ತಾಲ್ಲೂಕು
04. ದಿನಾಂಕ : 05.02.2021 ಜಡಿಗೆನಹಳ್ಳಿ ಹೋಬಳಿ ಹೊಸಕೋಟೆ ತಾಲ್ಲೂಕು
05. ದಿನಾಂಕ : 17.02.2021 ಸೂಲಿಬೆಲೆ ಹೋಬಳಿ ಹೊಸಕೋಟೆ ತಾಲ್ಲೂಕು

ಹೊಸಕೋಟೆ ತಾಲ್ಲೂಕು :

01. ದಿನಾಂಕ :17.11.2020 ಹಾಗೂ 19.11.2020 ರಂದು ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹಾಗೂ ನಂದಗುಡಿ ಹೋಬಳಿಯಲ್ಲಿ ಯುವ ಸಂಪರ್ಕ ಸಭೆ ನಡೆಸಲಾಯಿತು.
02. ದಿನಾಂಕ 10.02.2021 ರಂದು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯಲ್ಲಿ ಯುವ ಸಂಪರ್ಕ ಸಭೆ ನಡೆಸಲಾಯಿತು.
03. ದಿನಾಂಕ 05.02.2021 ರಂದು ಹೊಸಕೋಟೆ ತಾಲ್ಲೂಕಿನ ಜಡಿಗೇನಹಳ್ಳಿ ಹೋಬಳಿಯಲ್ಲಿ ಯುವ ಸಂಪರ್ಕ ಸಭೆ ನಡೆಸಲಾಯಿತು.
04. ದಿನಾಂಕ 06.02.2021 ರಂದು ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿ, ಸೊಣ್ಣದೇನಹಳ್ಳಿ ಗ್ರಾಮ ಯುವ ಸಂಪರ್ಕ ಸಭೆ ನಡೆಸಲಾಯಿತು.

ವಿಶ್ವ ಅಂಗವಿಕಲರ ದಿನಾಚರಣೆ :–

ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ದಿನಾಂಕ 03.12.2020 ರಂದು ಜಿಲ್ಲಾಡಳಿತ ಭವನ ಆಡಿಟೋರಿಯಂನಲ್ಲಿ ವಿಕಲಚೇತನರ ಕಲ್ಯಾಣ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಸಂಘಟಿಸಲಾಯಿತು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಊಟೋಪಹಾರದ ವ್ಯವಸ್ಥೆಗಾಗಿ ರೂ 1,16,760/–ಗಳ ವೆಚ್ಚವನ್ನು ಭರಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವಕ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ತಾಲ್ಲೂಕು ಮಟ್ಟದಲ್ಲಿ ಕೆಳಕಂಡ ಸ್ಥಳಗಳಲ್ಲಿ ಕೌಶಲ್ಯ ತರಬೇತಿ ಶಿಬಿರಗಳನ್ನು ಸಂಘಟಿಸಲಾಗಿರುತ್ತದೆ.

01. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವ ಸಂಚಲನ ಯುವಕ ಸಂಘದ ಸಹಯೋಗದೊಂದಿಗೆ ದಿನಾಂಕ : 05.02.2021 ರಿಂದ 28.02.2021 ರವರೆಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ಮಹಿಳಾ ಸಮಾಜದಲ್ಲಿ ಕೌಶಲ್ಯ ತರಬೇತಿ ಶಿಬಿರ(ಸ್ಪೋಕನ್ ಇಂಗ್ಲೀಷ್, ನಾಯಕತ್ವದ ಗುಣಗಳು ಹಾಗೂ ಕಂಪ್ಯೂಟರ್ ತರಬೇತಿ)ವನ್ನು ಸಂಘಟಿಸಲಾಗಿದೆ.
02. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಅದ್ವೈತಾ ಪೌಂಡೇಷನ್, ಹೊಸಕೋಟೆ ಇವರ ಸಹಯೋಗದೊಂದಿಗೆ ದಿನಾಂಕ 12.01.2021 ರಿಂದ 19.02.2021 ರವರೆಗೆ ದೇವನಹಳ್ಳಿ ತಾಲ್ಲೂಕಿನಲ್ಲಿ ವ್ಯಕ್ತಿತ್ವ ವಿಕಸನ, ಮೃದು ಕೌಶಲ್ಯ ಮತ್ತು ಇಂಗ್ಲೀಷ್ ಕಲಿಯುವಿಕೆ ಈ ರೀತಿಯ ಕೌಶಲ್ಯ ತರಬೇತಿ ಶಿಬಿರವನ್ನು ಸಂಘಟಿಸಲಾಗಿದೆ.
03. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಅದ್ವೈತಾ ಪೌಂಡೇಷನ್, ಹೊಸಕೋಟೆ ಇವರ ಸಹಯೋಗದೊಂದಿಗೆ ದಿನಾಂಕ : 12.01.2021 ರಿಂದ 19.02.2021 ರವರೆಗೆ ಹೊಸಕೋಟೆ ಟೌನ್‌ನಲ್ಲಿ ಕಂಪ್ಯೂಟರ್ ಕೌಶಲ್ಯ ತರಬೇತಿ ಶಿಬಿರವನ್ನು ಸಂಘಟಿಸಲಾಗಿರುತ್ತದೆ.
04. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಅದ್ವೈತಾ ಪೌಂಡೇಷನ್, ಹೊಸಕೋಟೆ ಇವರ ಸಹಯೋಗದೊಂದಿಗೆ ದಿನಾಂಕ : 12.01.2021 ರಿಂದ 19.02.2021 ರವರೆಗೆ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿಯಲ್ಲಿ ಕರಕುಶಲ ತರಬೇತಿ ಶಿಬಿರವನ್ನು ಸಂಘಟಿಸಲಾಗಿರುತ್ತದೆ. ಹಾಗೂ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ಯುವತಿಯರಿಗೆ ಇಲಾಖಾ ವತಿಯಿಂದ ಹೊಲಿಗೆ ಯಂತ್ರಗಳನ್ನು ಖರೀದಿಸಿ ವಿತರಿಸಲಾಗಿರುತ್ತದೆ.

2021–22ನೇ ಸಾಲಿಗೆ ಕ್ರೀಡಾ ಶಾಲೆ– ಕ್ರೀಡಾ ವಸತಿ ನಿಲಯಕ್ಕೆ ಪ್ರತಿಭಾವಂತ ಕ್ರೀಡಾಪಟುಗಳು ಆಯ್ಕೆ ಪ್ರಕ್ರಿಯೆ :–

ಕೇಂದ್ರ ಕಛೇರಿಯ ಸುತ್ತೋಲೆ/ಮಾರ್ಗಸೂಚಿಯನ್ವಯ ಇಲಾಖೆಯಲ್ಲಿನ ಕ್ರೀಡಾ ಶಾಲೆ/ವಸತಿ ನಿಲಯಗಳಿಗೆ ಜಿಲ್ಲೆಯ ಪ್ರತಿಭಾವಂತ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ತಾಲ್ಲೂಕುವಾರು ನಡೆಸಲಾಗಿರುತ್ತದೆ. ತಾಲ್ಲೂಕಿಗೆ ರೂ 20,000–00 ರಂತೆ ಆಯ್ಕೆ ಪ್ರಕ್ರಿಯೆಯ ವೆಚ್ಚವನ್ನು ಭರಿಸಲಾಗಿರುತ್ತದೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದಿನಾಂಕ 18.12.2020 ರಂದು ಭಗತ್ ಸಿಂಗ್ ಕ್ರೀಡಾಂಗಣದಲ್ಲಿ ಕ್ರೀಡಾ ಶಾಲೆ/ವಸತಿ ನಿಲಯಕ್ಕೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

ದೇವನಹಳ್ಳಿ ತಾಲ್ಲೂಕಿನಲ್ಲಿ ದಿನಾಂಕ 19.12.2020 ರಂದು ದೇವನಹಳ್ಳಿ ಟೌನ್ ಕ್ರೀಡಾಂಗಣದಲ್ಲಿ ಕ್ರೀಡಾ ಶಾಲೆ/ವಸತಿ ನಿಲಯಕ್ಕೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

ಹೊಸಕೋಟೆ ತಾಲ್ಲೂಕಿನಲ್ಲಿ ದಿನಾಂಕ 29.12.2020 ರಂದು ಹೊಸಕೋಟೆ ತಾಲ್ಲೂಕು ಕ್ರೀಡಾಂಗಣದಲ್ಲಿ ಕ್ರೀಡಾ ಶಾಲೆ/ವಸತಿ ನಿಲಯಕ್ಕೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

ನೆಲಮಂಗಲ ತಾಲ್ಲೂಕಿನಲ್ಲಿ ದಿನಾಂಕ : 28.01.2021 ರಂದು ಡಾ॥ ಬಿ.ಆರ್ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

ರಾಷ್ಟ್ರೀಯ ಹಬ್ಬಗಳು :– ಜಿಲ್ಲಾಡಳಿತ ವತಿಯಿಂದ ಜಿಲ್ಲೆಯ ದೇವನಹಳ್ಳಿ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ದಿನಾಚರಣೆ ಹಾಗೂ ಕನ್ನಡ ರಾಜ್ಯೋತ್ಸವ ದಿನಾಚರಣೆಗಳನ್ನು ಆಚರಿಸಲಾಗಿರುತ್ತದೆ.

2205–00–104–0–27 ಸಹಾಯಕ ಯುವಜನ ಸೇವಾಧಿಕಾರಿಗಳು

ವೇತನ

ಅನುದಾನ ನಿಗಧಿ : ರೂ. 21.69 ಲಕ್ಷ

ವೆಚ್ಚ : ರೂ. 13.04 ಲಕ್ಷ

ವೇತನೇತರ

ಅನುದಾನ ನಿಗಧಿ : ರೂ. 4.00 ಲಕ್ಷ

ವೆಚ್ಚ : ರೂ. 3.99 ಲಕ್ಷ

ಲೆಕ್ಕ ಶೀರ್ಷಿಕೆ 2205–00–104–0–27–001 ಅಡಿಯಲ್ಲಿ ರೂ 21.69 ಲಕ್ಷಗಳ ಅನುದಾನವನ್ನು ವೇತನಕ್ಕಾಗಿ ಒದಗಿಸಿದ್ದು, ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನಕ್ಕಾಗಿ ರೂ 13,04,548/– ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

ಲೆಕ್ಕ ಶೀರ್ಷಿಕೆ 2205–00–104–0–27–090 ಅಡಿಯಲ್ಲಿ ವೇತನೇತರ ವೆಚ್ಚಕ್ಕಾಗಿ ರೂ. 4.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಕಟ್ಟಡ ಬಾಡಿಗೆ, ಕಛೇರಿ ವೆಚ್ಚ, ದೂರವಾಣಿ ವೆಚ್ಚ, ಲೇಖನ ಸಾಮಾಗ್ರಿ ಇನ್ನಿತರೆ ಕಛೇರಿ ವೆಚ್ಚಗಳಿಗಾಗಿ ಒಟ್ಟಾರೆ ರೂ, 3,99,967/– ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.

ಲೆಕ್ಕ ಶೀರ್ಷಿಕೆ :– 2205–00–104–0–28 ಕ್ರೀಡಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ

ಅನುದಾನ ನಿಗಧಿ : ರೂ 123.67 ಲಕ್ಷಗಳು

ವೆಚ್ಚ : ರೂ 123.67 ಲಕ್ಷಗಳು

- ತಾಲ್ಲೂಕು ಕ್ರೀಡಾಂಗಣಗಳಲ್ಲಿ ವಿದ್ಯುತ್, ದೂರವಾಣಿ, ಇಂಟರ್‌ನೆಟ್, ಕುಡಿಯುವ ನೀರು, ಕ್ರೀಡಾಂಗಣಗಳ ನಿರ್ವಹಣೆ, ಕ್ರೀಡಾಂಗಣಗಳಿಗೆ ಅಗತ್ಯವಿರುವ ಸ್ವಚ್ಚತಾ ಸಾಮಾಗ್ರಿಗಳ ಖರೀದಿ ಹಾಗೂ ಕ್ರೀಡಾಂಗಣಗಳಲ್ಲಿ ಸಣ್ಣ ಪುಟ್ಟ ದುರಸ್ತಿ ಕೆಲಸಗಳನ್ನು ನಿರ್ವಹಿಸಲು ಒಟ್ಟಾರೆಯಾಗಿ ರೂ 12,33,625 /–ಗಳ ವೆಚ್ಚವನ್ನು ಭರಿಸಲಾಗಿದೆ.
- ಹೊರಗುತ್ತಿಗೆ ಆಧಾರದ ಮೇಲೆ ಕ್ರೀಡಾಂಗಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿ, ಸ್ವಚ್ಚತಾ ಸಿಬ್ಬಂದಿ ಹಾಗೂ ಕಛೇರಿಯ ಗಣಕಯಂತ್ರ ನಿರ್ವಾಹಕರುಗಳ ವೇತನಕ್ಕಾಗಿ ಒಟ್ಟಾರೆಯಾಗಿ ರೂ 25,40,825/– ಗಳ ವೆಚ್ಚವನ್ನು ಭರಿಸಲಾಗಿದೆ.
- ಹೊಸಕೋಟೆ ತಾಲ್ಲೂಕು ಕ್ರೀಡಾಂಗಣದ ಸುತ್ತಲೂ ಇರುವ ಚೈನ್ ಲಿಂಕ್ ಫೆನ್ಸ್ ದುರಸ್ಥಿ ಮತ್ತು ಕಿತ್ತು ಹೋಗಿರುವ ಕಡೆ ಚೈನ್ ಲಿಂಕ್ ಫೆನ್ಸ್‌ಗಳ ಅಳವಡಿಕೆ ಹಾಗೂ ಕ್ರೀಡಾಂಗಣದ ಉತ್ತರ ದಿಕ್ಕಿನಲ್ಲಿರುವ ಗೇಟನ್ನು ಬದಲಾಯಿಸಿ ಕಾಮಗಾರಿಯನ್ನ ರೂ 4.70 ಲಕ್ಷಗಳ ವೆಚ್ಚದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ನಿರ್ವಹಿಸಲಾಗಿದೆ.
- ಹೊಸಕೋಟೆ ತಾಲ್ಲೂಕು ಕ್ರೀಡಾಂಗಣದ ಮಲ್ಟಿಪರ್ಪಸ್ ಹಾಲ್ ಮೇಲ್ಛಾಗದಿಂದ ಮಳೆ ನೀರು ಕ್ರೀಡಾಂಗಣದೊಳಗೆ ಬೀಳುತ್ತಿರುವುದರಿಂದ ನೀರು ನಿಲ್ಲುತ್ತಿರುವ ಹಿನ್ನಲೆಯಲ್ಲಿ ಮಳೆ ನೀರು ಬಾವಿಯನ್ನು ನಿರ್ಮಿಸುವ ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ರೂ 3.00 ಲಕ್ಷಗಳ ವೆಚ್ಚದಲ್ಲಿ ನಿರ್ವಹಿಸಲಾಗಿದೆ.

- ಹೊಸಕೋಟೆ ತಾಲ್ಲೂಕು ಕ್ರೀಡಾಂಗಣದಲ್ಲಿ ಹಾಳಾಗಿರುವ ಪೆವಿಲಿಯನ್ ಮೇಲ್ಚಾವಣಿಯನ್ನು ಬದಲಾಯಿಸುವ ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ರೂ 6.20 ಲಕ್ಷಗಳ ವೆಚ್ಚದಲ್ಲಿ ನಿರ್ವಹಿಸಲಾಗಿದೆ.
- ದೇವನಹಳ್ಳಿ ಟೌನ್ ಕ್ರೀಡಾಂಗಣದಲ್ಲಿ ಹಾಳಾಗಿರುವ ಫ್ಲಡ್ ಲೈಟ್ಸ್ ಮತ್ತು ಪ್ರವೇಶದ್ವಾರದ ಗೇಟ್‌ನ್ನು ಬದಲಾಯಿಸುವ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದಿಂದ ರೂ 4.00 ಲಕ್ಷಗಳ ವೆಚ್ಚದಲ್ಲಿ ನಿರ್ವಹಿಸಲಾಗಿದೆ.
- ದೇವನಹಳ್ಳಿ ತಾಲ್ಲೂಕು ಕ್ರೀಡಾಂಗಣದ ಮಧ್ಯಭಾಗದಲ್ಲಿ ಹಾದು ಹೋಗಿರುವ 5 ವಿದ್ಯುತ್ ಹೈಟೆನ್ಷನ್ ಕಂಬಗಳನ್ನು ಸ್ಥಳಾಂತರಿಸಲು ಬೆಸ್ಕಾಂಗೆ ರೂ 2,41,721–00 ಗಳ ಠೇವಣಿ ಮೊತ್ತವನ್ನು ಪಾವತಿಸಲಾಗಿದೆ.
- ದೊಡ್ಡಬಳ್ಳಾಪುರ ತಾಲ್ಲೂಕಿನ ಆದಿನಾರಯಣ ಹೊಸಹಳ್ಳಿ ಕ್ರೀಡಾಂಗಣದ ನೆಲಸಮತಟ್ಟು ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ರೂ 7.50 ಲಕ್ಷಗಳ ವೆಚ್ಚದಲ್ಲಿ ಕೆಲಸ ನಿರ್ವಹಿಸಲಾಗಿದೆ.
- ದೇವನಹಳ್ಳಿ ಟೌನ್ ಕ್ರೀಡಾಂಗಣದಲ್ಲಿ ಕಬಡ್ಡಿ/ಕುಸ್ತಿ ಕ್ರೀಡೆಗೆ ಅನುಕೂಲವಾಗುವಂತೆ ಒಳಾಂಗಣ ನಿರ್ಮಾಣ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದ ವತಿಯಿಂದ ಅಂದಾಜು ವೆಚ್ಚ ರೂ 60.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಈ ಸಾಲಿನ ಅನುದಾನವಾಗಿ ರೂ 27.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.
- ದೇವನಹಳ್ಳಿ ತಾಲ್ಲೂಕು ಕ್ರೀಡಾಂಗಣವನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ರೂ 94,400/–ಗಳ ವೆಚ್ಚದಲ್ಲಿ ಮಾಸ್ಟರ್ ಪ್ಲಾನ್ ಸಿದ್ದಪಡಿಸಲಾಗಿದೆ.
- ಸೂಲಿಬೆಲೆ ಹೋಬಳಿ ಮಟ್ಟದ ಕ್ರೀಡಾಂಗಣದ ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಭವನ ಕಟ್ಟಡದ ನವೀಕರಣ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದ ವತಿಯಿಂದ ರೂ 19.40 ಲಕ್ಷಗಳ ವೆಚ್ಚದಲ್ಲಿ ನಿರ್ವಹಿಸಲು ಈ ಸಾಲಿನಲ್ಲಿ ರೂ 17.40 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದೆ.
- ದೇವನಹಳ್ಳಿ ಟೌನ್ ಕ್ರೀಡಾಂಗಣದ ಕಾಂಪೌಂಡ್ ಗೋಡೆ ನಿರ್ಮಿಸುವ ಕಾಮಗಾರಿ ಹಾಗೂ ದೇವನಹಳ್ಳಿ ತಾಲ್ಲೂಕು ಕ್ರೀಡಾಂಗಣದ ಪ್ರವೇಶ ದ್ವಾರಕ್ಕೆ ನಾಮಫಲಕ ಅಳವಡಿಸುವ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದ ವತಿಯಿಂದ ರೂ 10.75 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.
- ದೇವನಹಳ್ಳಿ ತಾಲ್ಲೂಕು ಕ್ರೀಡಾಂಗಣದ ಒಳಭಾಗದಲ್ಲಿ ಇದ್ದ ಅನುಪಯುಕ್ತ ಗಿಡಗಳನ್ನು ತೆರವುಗೊಳಿಸಿ ಮತ್ತು ಮೈದಾನವನ್ನು ಸಮತಟ್ಟುಗೊಳಿಸುವ ಕೆಲಸವನ್ನು ನಿರ್ಮಿತಿ ಕೇಂದ್ರದ ವತಿಯಿಂದ ರೂ 99,000/–ಗಳ ವೆಚ್ಚದಲ್ಲಿ ನಿರ್ವಹಿಸಲಾಗಿದೆ.

2205–00–104–0–30 ಕಷ್ಟ ಪರಿಸ್ಥಿತಿಯಲ್ಲಿರುವ ಕುಸಿ/ಕ್ರೀಡಾ ಪಟುಗಳಿಗೆ ಮಾಸಾಶನ:–

ಅನುದಾನ ನಿಗಧಿ : ರೂ 1.39 ಲಕ್ಷ
ಹೆಚ್ಚುವರಿ ಅನುದಾನ ಬಿಡುಗಡೆ : ರೂ 1.62 ಲಕ್ಷ
ವೆಚ್ಚ : ರೂ 3.01 ಲಕ್ಷ

ಈ ಲೆಕ್ಕ ಶೀಷಿಕೆಯಡಿ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನಕ್ಕಾಗಿ ರೂ 1.39 ಲಕ್ಷಗಳ ಅನುದಾನ ನಿಗಧಿಯಾಗಿದ್ದು, ತದನಂತರ ಹೆಚ್ಚುವರಿಯಾಗಿ ರೂ 1.62 ಲಕ್ಷಗಳ ಅನುದಾನವು ಸರ್ಕಾರದಿಂದ ಬಿಡುಗಡೆಯಾಗಿದ್ದು, ಮಾಸಾಶನವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ.

ಕ್ರ.ಸಂ	ಕ್ರೀಡಾಪಟುಗಳ ಹೆಸರು	ಕ್ರೀಡೆ	ರಾಜ್ಯ/ರಾಷ್ಟ್ರ/ ಅಂತರಾಷ್ಟ್ರೀಯ	ಮಾಸಾಶನದ ಮೊತ್ತ
01	ಶ್ರೀ ಎನ್.ಚೌಡಪ್ಪ, ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
02	ಶ್ರೀ ಜೆ.ಎನ್.ಲಕ್ಷ್ಮಣಪ್ಪ, ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
03	ಶ್ರಿ ಆರ್. ಗೋವಿಂದರಾಜು ದೊಡ್ಡಬಳ್ಳಾಪುರ ಟೌನ್	ಕುಸ್ತಿ	ರಾಜ್ಯ	2,500–00
04	ಶ್ರೀ ಬಿ.ಪ್ರಕಾಶ್, ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
05	ಶ್ರೀ ಕೆ.ವಿ.ವೆಂಕಟರಾಮನ್ ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
06	ಶ್ರೀ ಸೈಯಾದ್ ಗೌಸ್, ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
07	ಶ್ರೀ ಚಿಕ್ಕಹನುಮಣ್ಣ, ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
08	ಶ್ರೀ ಕೃಷ್ಣ ಮೂರ್ತಿ.ವಿ ದೊಡ್ಡಬಳ್ಳಾಪುರ	ಕುಸ್ತಿ	ರಾಜ್ಯ	2,500–00
09	ಅಪ್ಸಾರ್ ಪಾಷಾ	ಕುಸ್ತಿ	ರಾಜ್ಯ	2,500–00
10	ಪಿಳ್ಳಪ್ಪ ಎನ್	ಕುಸ್ತಿ	ರಾಜ್ಯ	2,500–00
11	ರಾಮಚಂದ್ರ	ಕುಸ್ತಿ	ರಾಜ್ಯ	2,500–00
12	ವೆಂಕಟೇಶ್	ಕುಸ್ತಿ	ರಾಜ್ಯ	2,500–00

2205–00–104–0–31 ಗ್ರಾಮೀಣ ಕ್ರೀಡಾ ಕೆಂದ್ರಗಳು

ಅನುದಾನ ನಿಗಧಿ : ರೂ 18.00 ಲಕ್ಷ
ವೆಚ್ಚ : ರೂ 17.99 ಲಕ್ಷ

ಈ ಯೋಜನೆಯ ಲೆಕ್ಕ ಶೀಷಿಕೆಯಡಿಯಲ್ಲಿ ರೂ 18.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಸರ್ಕಾರಿ ಶಾಲೆಗಳಿಗೆ ಕ್ರೀಡಾ ಸಲಕರಣೆಗಳನ್ನು ಖರೀದಿಸಿ ವಿತರಿಸಲಾಗಿರುತ್ತದೆ.

2205–00–104–0–32 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ:–

ಅನುದಾನ ನಿಗಧಿ : ರೂ 2.60 ಲಕ್ಷ
ವೆಚ್ಚ : ರೂ 2.59 ಲಕ್ಷ

ಈ ಯೋಜನೆಯ ಲೆಕ್ಕ ಶೀಷಿಕೆಯಡಿ ರೂ. 2.60 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ನಿರಂತರವಾಗಿ ಇಲಾಖೆಯ ಯುವಜನ ಮೇಳ ಮತ್ತು ಯುವಜನೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಹಾಗೂ ತರಬೇತಿ ಶಿಬಿರಗಳ ಆಯೋಜನೆಗೆ ಅಗತ್ಯವಿದ್ದ ಇಲಾಖೆಗೆ ನೊಂದಾಯಿಸಲ್ಪಟ್ಟ ಯುವಕ ಸಂಘಗಳಿಗೆ ಜಾನಪದ ಪರಿಕರಗಳನ್ನು ಖರೀದಿಸಿ ವಿತರಿಸಲಾಗಿದೆ.

2205–00–104–0–33 ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ದಿಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಕಾಯ:–

ಅನುದಾನ ನಿಗಧಿ : ರೂ 2.45 ಲಕ್ಷ
ವೆಚ್ಚ : ರೂ 2.45 ಲಕ್ಷ

ದೇವನಹಳ್ಳಿ ತಾಲ್ಲೂಕಿನ, ಕುಂದಾಣ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಚ್ಚಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಆಟದ ಮೈದಾನವನ್ನು ನಿರ್ಮಿತಿ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ವತಿಯಿಂದ ರೂ 2.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಹಾಗೂ ಶಾಲೆಗೆ ಅಗತ್ಯವಿರುವ ಕ್ರೀಡಾಸಾಮಗ್ರಿಗಳನ್ನು ಖರೀದಿಸಿ ವಿತರಿಸಲಾಗಿದೆ.

2205–00–104–0–35 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ :–

ಅನುದಾನ ನಿಗಧಿ : ರೂ 2.00 ಲಕ್ಷ
ವೆಚ್ಚ : ರೂ 1.99 ಲಕ್ಷ

ಈ ಯೋಜನೆಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ. 2.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಕೋವಿಡ್–19ರ ಪ್ರಯುಕ್ತ ಕ್ರೀಡಾ ತರಬೇತಿ ಶಿಬಿರವನ್ನು ಸಂಘಟಿಸಲು ಸಾಧ್ಯವಾಗದ ಕಾರಣ, ಕಳೆದ ಸಾಲಿನಲ್ಲಿ ನಡೆಸಿದ ಕ್ರೀಡಾ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ನಾಲ್ಕು ತಾಲ್ಲೂಕಿನ ಕ್ರೀಡಾಪಟುಗಳಿಗೆ ಟೀಶರ್ಟ್ ಮತ್ತು ಶಾರ್ಟ್ಸ್‌ಗಳನ್ನು ಖರೀದಿಸಿ ವಿತರಿಸಲಾಗಿದೆ.

2205–00–104–0–36 ಕ್ರೀಡಾ ಸಾಮಾಗ್ರಿಗಳ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯ:–

ಅನುದಾನ ನಿಗಧಿ : ರೂ 2.00 ಲಕ್ಷ
ವೆಚ್ಚ : ರೂ 1.99 ಲಕ್ಷ

ಈ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ರೂ 2.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ತಾಲ್ಲೂಕು ಕ್ರೀಡಾಂಗಣಗಳಿಗೆ ಅವಶ್ಯವಿದ್ದ ಕ್ರೀಡಾಸಾಮಗ್ರಿ, ಪ್ರಥಮ ಚಿಕಿತ್ಸೆ ಕಿಟ್ ಹಾಗೂ ಜಿಮ್ ಸಾಮಗ್ರಿಗಳನ್ನು ಖರೀದಿಸಿ ವಿತರಿಸಲಾಗಿದೆ.

20. ಮೀನುಗಾರಿಕೆ ಇಲಾಖೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳು ಸೇರಿದಂತೆ ಅಂದಾಜು ಒಟ್ಟು 7000 ಹೆಕ್ಟೇರ್ ಜಲಾವೃತ್ತ ಪ್ರದೇಶವಿದ್ದು ಮೀನುಗಾರಿಕೆ ಇಲಾಖೆ ಹಾಗು ಗ್ರಾಮಪಂಚಾಯಿತಿಗೆ ಸೇರಿದ ಒಟ್ಟು 586 ಕೆರೆಗಳು ಮೀನು ಸಾಕಾಣಿಗೆ ಲಭ್ಯವಿರುತ್ತವೆ. ಇವುಗಳಲ್ಲಿ 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶ ಹೊಂದಿರುವ ಕೆರೆಗಳು ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು, 102 ಕೆರೆಗಳು ಇರುತ್ತವೆ. ಹಾಗೂ 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶ ಹೊಂದಿರುವ 485 ಗ್ರಾಮಪಂಚಾಯಿತಿಯ ಕೆರೆಗಳನ್ನು ಜಿಲ್ಲೆಯಲ್ಲಿರುತ್ತವೆ. ಜಿಲ್ಲೆಯ ವಾಡಿಕೆ ಮಳೆಯ ಪ್ರಮಾಣವು 796.00 ಮೀಲಿ ಮೀಟರ್‌ಗಳಾಗಿದ್ದು 2020–21 ನೇ ಸಾಲಿನಲ್ಲಿ ಮಳೆಯ ಪ್ರಮಾಣವು 740.00 ಮೀಲಿ ಮೀಟರ್ ಆಗಿರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 5701 ಮೀನುಗಾರಿಕೆ ತೊಡಗಿರುವ ಕುಟುಂಬಗಳಿದ್ದು ಮೀನುಗಾರಿಕೆಯಲ್ಲಿ ನಿರತರಾಗಿರುತ್ತಾರೆ. 4733 ಪೂರ್ಣಕಾಲಿಕ ಹಾಗೂ 968 ಅರೇಕಾಲಿಕ ಮೀನುಗಾರಿಕೆ ಕುಟುಂಬಗಳು. ಜಿಲ್ಲೆಯಲ್ಲಿ ಒಂದು ಮೀನುಗಾರರ ಸಹಕಾರ ಸಂಘ ಹೊಸಕೋಟೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದೆ, ಒಟ್ಟು ಸಂಘದಲ್ಲಿ 655 ಸದಸ್ಯರನ್ನು ಹೊಂದಿದ್ದು ಅದರಲ್ಲಿ ಪುರುಷರು–530, ಮಹಿಳೆಯರು–125. ಸದಸ್ಯರಿರುತ್ತಾರೆ.

ಮೀನುಗಾರರಿಗೆ ಕೆರೆಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಿ ಮೀನುಕೃಷಿ ಕೈಗೊಂಡು ಸ್ಥಳೀಯರಿಗೆ ಪೌಷ್ಟಿಕ ಆಹಾರ ಒದಗಿಸುವುದಲ್ಲದೆ ಮೀನುಗಾರರಿಗೆ ಉದ್ಯೋಗವಕಾಶ ಕಲ್ಪಿಸಿ ಆರ್ಥಿಕ ಪ್ರಗತಿಗೆ ಸಹಾಯಕವಾಗಿದೆ.

2020–21ನೇ ಸಾಲಿನಲ್ಲಿ 54 ಇಲಾಖಾ ವ್ಯಾಪ್ತಿಯ ದೊಡ್ಡಕೆರೆಗಳು, ಗ್ರಾಮ ಪಂಚಾಯಿತಿ ವ್ಯಾಪ್ತಿಯ 63 ಸಣ್ಣ ಕೆರೆಗಳನ್ನು ಅಭಿವೃದ್ದಿಪಡಿಸಲಾಗಿದೆ. ಇಲಾಖಾ ಕೆರೆಗಳಿಗೆ 27.24 ಲಕ್ಷ ಬಿತ್ತನೆ ಮೀನುಮರಿಗಳನ್ನು ಹಾಗೂ ಗ್ರಾಮ ಪಂಚಾಯಿತಿ ಕೆರೆಗಳಿಗೆ 9.81 ಲಕ್ಷ ಬಿತ್ತನೆ ಮಿನುಮರಿಗಳನ್ನು ಒಟ್ಟು 37.05 ಲಕ್ಷ ಬಿತ್ತನೆ ಮರಿಗಳನ್ನು ದಾಸ್ತಾನು ಮಾಡಿ ಮೀನು ಕೃಷಿ ಕೈಗೊಳ್ಳಲಾಗಿದೆ. ರಾಜ್ಯದ 2020–21 ನೇ ಸಾಲಿನಲ್ಲಿ ಜಿಲ್ಲೆಯ ಮೀನು ಉತ್ಪಾದನೆ 2850.00 ಮೆಟ್ರಿಕ್ ಟನ್ನು ಆಗಿದ್ದು, ಇದರ ಮೌಲ್ಯ ರೂ.2565.00 ಲಕ್ಷಗಳಾಗಿರುತ್ತದೆ

ಜಿಲ್ಲಾಪಂಚಾಯತ್ ಕಾರ್ಯಕ್ರಮಗಳಿಗೆ ರೂ.27.83 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.27.83 ಲಕ್ಷ ವೆಚ್ಚವಾಗಿರುತ್ತದೆ. ಸಿಬ್ಬಂದಿ ವೆಚ್ಚ, ಕಛೇರಿ ವೆಚ್ಚ, ಬಾಡಿಗೆ ಇತ್ಯಾದಿಗಳಿಗೆ ರೂ.89.30 ಲಕ್ಷ ಹಣ ಬಿಡುಗಡೆಯಾಗಿದೆ, ಇದರಲ್ಲಿ ಸಿಬ್ಬಂದಿ ವೆಚ್ಚ, ಕಛೇರಿ ವೆಚ್ಚ, ಬಾಡಿಗೆ ಇತ್ಯಾದಿಗಳನ್ನು ಭರಿಸಲು ರೂ.47.20 ಲಕ್ಷ ವೆಚ್ಚವಾಗಿರುತ್ತದೆ.

ಜಿಲ್ಲೆಯಲ್ಲಿ ಮೀನುಗಾರಿಕೆ ಉಪನಿರ್ದೇಶಕರು, ಸೇರಿದಂತೆ ಒಟ್ಟು 5 ಅಧಿಕಾರಿಗಳು ಮತ್ತು 17 ಸಿಬ್ಬಂದಿವರ್ಗ ಒಟ್ಟು 22 ಹುದ್ದೆಗಳು ಮಂಜೂರಾಗಿದ್ದು, 07 ಹುದ್ದೆಗಳು ಭರ್ತಿಯಾಗಿ 15 ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 12 'ಸಿ' ಗುಂಪಿನ ಸಿಬ್ಬಂದಿ, 2 'ಡಿ' ವರ್ಗದ ಹುದ್ದೆಗಳಾಗಿವೆ. ಜಿಲ್ಲಾ ಪಂಚಾಯತ್ ಮತ್ತು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗಿದೆ. ಯೋಜನೇತರ ಅಡಿಯಲ್ಲಿ ರೂ.47.20ಲಕ್ಷ ಖರ್ಚಾಗಿರುತ್ತದೆ.

2020–21ನೇ ಸಾಲಿನಲ್ಲಿ ದೊಡ್ಡ ಕೆರೆಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ಮತ್ತು ಟೆಂಡರ್ ಕಂ ಹರಾಜಿನ ಮೂಲಕ ವಿಲೇವಾರಿ ಮತ್ತು ಮೀನುಮರಿ ಮಾರಾಟದಿಂದ ಸರ್ಕಾರಕ್ಕೆ ರೂ.44.80ಲಕ್ಷ ಆದಾಯ ಬಂದಿರುತ್ತದೆ.

ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳು:

1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ 2405–00–101–0–27:

ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ.7.73ಲಕ್ಷ ಅನುದಾನ ಒದಗಿಸಲಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಛೇರಿಯ ಆವರಣದಲ್ಲಿ ಕೊಳವೆ ಬಾವಿಗೆ ರೂ.2.00 ಲಕ್ಷ, ಹೊಸಕೋಟೆ ತಾಲ್ಲೂಕಿಗೆ ರೂ.5.73 ರೂ.7.73ಲಕ್ಷ ವೆಚ್ಚದಲ್ಲಿ ಎರಡು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ

2) ಒಳನಾಡು ಮೀನುಗಾರಿಕೆ ಅಭಿವೃದ್ದಿಗೆ ಸಹಾಯ 2405–00–101–0–28:

ಸದರಿ ಯೋಜನೆಯಡಿಯಲ್ಲಿ ರೂ.17.00ಲಕ್ಷ ಅನುದಾನ ಒದಗಿಸಲಾಗಿದೆ. ಜಿಲ್ಲಾ ಹಾಗೂ ತಾಲ್ಲೂಕು ಕಚೇರಿಗಳಿಗೆ ಹೊರಗುತ್ತಿಗೆ ಮೂಲಕ ಬಾಡಿಗೆ ವಾಹನಕ್ಕಾಗಿ ಭರಿಸಿದ ವೆಚ್ಚ ಸೇರಿ ಹಾಗೂ ಮೀನುಮರಿ ಪಾಲನಾ ವೆಚ್ಚ ವಿಶೇಷ ಘಟಕ ಯೋಜನೆಯಡಿ ರೂ.4.00ಲಕ್ಷ ಹಾಗೂ ಗಿರಿಜನ ಉಪಯೋಜನೆಯಡಿ ರೂ.3.00ಲಕ್ಷ ಅನುದಾನ ವಿನಿಯೋಗಿಸಿ ಒಟ್ಟು ರೂ.17.00ಲಕ್ಷ ವೆಚ್ಚ ಮಾಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 40 ಪರಿಶಿಷ್ಟ ಜಾತಿ ಮೀನುಗಾರರಿಗೆ ತಲಾ ರೂ.10,000/–ದಂತೆ ಹಾಗು 30 ಪರಿಶಿಷ್ಟ ಪಂಗಡದ ಮೀನುಗಾರರಿಗೆ ತಲಾ ರೂ.10,000/–ದಂತೆ ಮೀನು ಹಿಡಿಯುವ ಸಲಕರಣೆಗಳನ್ನು ಉಚಿತವಾಗಿ ವಿತರಿಸಲಾಗಿದೆ.

3) ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ 2405–00–101–0–30:

ಸದರಿ ಯೋಜನೆಯಡಿಯಲ್ಲಿ ರೂ.2.10 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ನಾಲ್ಕು ತಾಲ್ಲೂಕಿನಿಂದ 21 ಸಂಖ್ಯೆ ವೃತ್ತಿಪರ ಮೀನುಗಾರರನ್ನು ಗುರುತಿಸಿಕೊಂಡು ಮೀನು ಮಾರಾಟ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚ ರೂ.40,000/–ಗಳಲ್ಲಿ ಶೇ.25ರ ಸಹಾಯಧನ ರೂಪದಲ್ಲಿ ದ್ವಿಚಕ್ರ ವಾಹನ ಮತ್ತು ಶಾಖನಿರೋಧಕ ಪೆಟ್ಟಿಗೆ ಖರೀದಿಸಿರುವ ಪ್ರತಿ ಫಲಾನುಭವಿಗೆ ಸಹಾಯಧನ ರೂ.10,000/–ಗಳನ್ನು 21 ಫಲಾನುಭವಿಗಳಿಗೆ ವಿತರಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಟಾನಗೊಳಿಸಲಾಗಿದೆ.

4) ಪ್ರದರ್ಶನಗಳು ಮತ್ತು ತರಬೇತಿ 2405–00–101–0–32:

ಸದರಿ ಯೋಜನೆಯಡಿಯಲ್ಲಿ ರೂ.1.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಮೊತ್ತವನ್ನು 2020–21 ನೇ ಸಾಲಿನಲ್ಲಿ ವಸ್ತು ಪ್ರದರ್ಶನಕ್ಕಾಗಿ ತಾಲ್ಲೂಕುಗಳಲ್ಲಿ ಕೃಷಿ ಅಭಿಯಾನಗಳ ಮತ್ತು ಮೀನುಕೃಷಿಕರ ದಿನಾಚರಣೆ, ಕೆ.ವಿ.ಕೆ. ವಸ್ತು ಪ್ರದರ್ಶನ ಹಾಗೂ ವಸ್ತು ಪ್ರದರ್ಶನದ ಸಾಮಾಗ್ರಿಗಳನ್ನು ಖರೀದಿಸಲು ರೂ.1.00 ಲಕ್ಷ ವೆಚ್ಚಮಾಡಲಾಗಿದೆ.

ರಾಜ್ಯ ವಲಯ ಕಾರ್ಯಕ್ರಮಗಳು:

1) ಒಳನಾಡು ಮೀನು ಕೃಷಿಗೆ ಸಹಾಯಧನ 2405–00–101–0–03:

ಸದರಿ ಯೋಜನೆಯಡಿ ಬಿತ್ತನೆ ಮೀನುಮರಿಗಳ ಖರೀದಿಗೆ ಸಹಾಯಧನಕ್ಕಾಗಿ ಜಿಲ್ಲೆಗೆ ರೂ.0.50/– ಅನುದಾನ ನಿಗದಿಪಡಿಸಲಾಗಿದ್ದು, 09 ಫಲಾನುಭವಿಗಳಿಗೆ ಒಟ್ಟು ರೂ35000/– ಸಹಾಯಧನವನ್ನು ಫಲಾನುಭವಿಗಳು ಖರೀದಿಸಿದ ಬಿತ್ತನೆ ಮೀನುಮರಿಗಳ ಮೊತ್ತದ ಶೇಕಡ 50ರಷ್ಟು ಪ್ರತಿ ಫಲಾನುಭವಿಗೆ ಗರಿಷ್ಟ ರೂ.5,000/–ರಂತೆ ಸಹಾಯಧನ ವಿತರಿಸಿದೆ. ಹಾಗೂ ಸದರಿ ಯೋಜನೆಯಡಿ ಮೀನುಗಾರರ ಸಹಕಾರ ಸಂಘಗಳ ಗುತ್ತಿಗೆ ಪಡೆದ ಕೆರೆಗಳಿಗೆ ಒಂದು ಹೆಕ್ಟೇರ್ ಉಪಯುಕ್ತ ಜಲ ವಿಸ್ತೀರ್ಣಕ್ಕೆ 2000 ರಂತೆ 1.50 ಲಕ್ಷ ವೆಚ್ಚದಲ್ಲಿ 1.40 ಲಕ್ಷ ಬಲಿತ ಬಿತ್ತನೆ ಮೀನು ಮರಿಗಳನ್ನು ಹೊಸಕೋಟೆ ತಾಲ್ಲೂಕು ಮೀನುಗಾರರ ಸಹಕಾರ ಸಂಘ ನಿಯಮಿತ ಹೊಸಕೋಟೆ ರವರಿಗೆ ವಿತರಿಸಿದೆ.

2) ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆಗಾಗಿ ಸಹಾಯಧನ (2405–00–110–0–02):

ಸದರಿ ಯೋಜನೆಯಡಿಯಲ್ಲಿ ರೂ.4.40 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಘಟಕ ವೆಚ್ಚವು ರೂ.10,000/– ಗಳಾಗಿದ್ದು, 44 ವೃತ್ತಿಪರ ಮೀನುಗಾರರಿಗೆ ಫಲಾನುಭವಿಗಳಿಗೆ ಒಟ್ಟು ರೂ.4.40 ಲಕ್ಷದ ಮೌಲ್ಯದ ಶೇಕಡ 100 ರಷ್ಟು ಸಹಾಯಧನ ರೂಪದಲ್ಲಿ ಮೀನುಗಾರಿಕೆ ಸಲಕರಣೆ ಮೀನು ಹಿಡಿಯುವ ನೈಲಾನ್ ಬಲೆಗಳನ್ನು ವಿತರಿಸಿದೆ.

3) ಪ್ರದರ್ಶನ ಮತ್ತು ತರಬೇತಿ (2405–00–109–0–01):

ಸದರಿ ಯೋಜನೆಯಡಿಯಲ್ಲಿ ಒಟ್ಟು ರೂ.0.20ಲಕ್ಷ ಅನುದಾನ ಬಿಡುಗಡೆಯಾಗಿದ್ದು ಮೀನುಗಾರಿಕೆ ವಸ್ತು ಪ್ರದರ್ಶನ ಮತ್ತು ತರಬೇತಿಗಾಗಿ 4 ತಾಲ್ಲೂಕುಗಳಿಗೆ ತಲಾ ರೂ.5,000/–ಗಳಂತೆ ನೀಡಲಾಗಿತ್ತು. ಸದರಿ ಯೋಜನೆಯಡಿ ಪ್ರಧಾನ ಮಂತ್ರ ಮತ್ಸ್ಯ ಸಂಪದ ಯೋಜನೆಯ ಕರಪತ್ರಗಳು, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಪ್ರಚಾರಕ್ಕಾಗಿ ಮುದ್ರಿಸಿ ಒಟ್ಟು ರೂ.20,000/–ಗಳನ್ನು ಉಪಯೋಗಿಸಲಾಗಿದೆ.

4) ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ (2405–00–101–0–58):

ಪ್ರದಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ವಿವಿಧ ಘಟಕಗಳಿಗೆ ಒಟ್ಟು ರೂ.142.35 ಲಕ್ಷ ಅನುದಾನ ಬಿಡುಗಡೆ ಯಾಗಿದ್ದು ಅದರಲ್ಲಿ ಒಟ್ಟು ರೂ ರೂ.142.35 ಲಕ್ಷ ಗಳನ್ನು ವಿವಿಧ 08 ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗಿದೆ.

I. ಕೆ.ಡಿ.ಪಿ. ಕಾರ್ಯಕ್ರಮಗಳ ಪ್ರಗತಿ ವಿವರ

ಕ್ರ. ಸಂ.	ಕಾರ್ಯಕ್ರಮಗಳ ಹೆಸರು	ವಾರ್ಷಿಕ ಗುರಿ	ಸಾಧನೆ
1)	ಮೀನುಗಾರಿಕೆಗರ ಅಳವಡಿಸಿದ ದೊಡ್ಡಕೆರೆಗಳು (ಸಂಖ್ಯೆಗಳಲ್ಲಿ)	80	54
2)	ದೊಡ್ಡ ಕೆರೆಗಳಿಗೆ ಬಿತ್ತನೆ ಮಾಡಲಾದ ಮೀನುಮರಿಗಳು (ಲಕ್ಷಗಳಲ್ಲಿ)	53.00	27.24
3)	ಮತ್ಸ್ಯಪಾಲನೆಗೆ ಅಳವಡಿಸಿರುವ ಗ್ರಾಮ ಪಂಚಾಯಿತಿ ಕೆರೆಗಳು (ಸಂಖ್ಯೆಗಳಲ್ಲಿ)	90	63
4)	ಗ್ರಾಮ ಪಂಚಾಯಿತಿ ಕೆರೆಗಳಿಗೆ ಬಿತ್ತನೆ ಮಾಡುವ ಮೀನುಮರಿಗಳು (ಲಕ್ಷಗಳಲ್ಲಿ)	20.00	9.81
5)	ಮೀನುಮರಿ ಪಾಲನೆ (ಲಕ್ಷಗಳಲ್ಲಿ)	2.00	0.93
6)	ಖಾಸಗಿ ಕೊಳಗಳ ಅಭಿವೃದ್ದಿ (ಹೆಕ್ಟೇರ್‌ಗಳಲ್ಲಿ)	10	8.5
7)	ಖಾಸಗಿ ಕೊಳಗಳಲ್ಲಿ ಮೀನುಮರಿ ಬಿತ್ತನೆ (ಲಕ್ಷಗಳಲ್ಲಿ)	1.00	2.45

II. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು (ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಗುರಿ		ಸಾಧನೆ	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1)	ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405–00–101–0–27)	7.73	2	7.73	2

ಕ್ರ. ಸಂ.	ಕಾರ್ಯಕ್ರಮಗಳ ಹೆಸರು	ವಾರ್ಷಿಕ ಗುರಿ		ಸಾಧನೆ	
2)	ಒಳನಾಡು ಮೀನುಗಾರಿಕೆ ಸಹಾಯ (2405–00–101–0–28)	10.00	844	10.00	844
	(i) ಒಳನಾಡು ಮೀನುಗಾರಿಕೆಗೆ ಸಹಾಯಧನ (2405–00–101–0–28)(422) (**SCP**) (**422**)	4.00	40	4.00	40
	(ii) ಒಳನಾಡು ಮೀನುಗಾರಿಕೆಗೆ ಸಹಾಯಧನ (2405–00–101–0–28) (**TSP**) (**423**)	3.00	30	3.00	30
3)	ಮತ್ಸ್ಯವಾಹಿನಿ ಯೋಜನೆ (2405–00–101–0–30)	2.1	21	2.1	21
4)	ಪ್ರದರ್ಶನಗಳು ಮತ್ತು ತರಬೇತಿ (2405–00–101–0–32)	1.00	4	1.00	4
	ಒಟ್ಟು	**27.83**	**941**	**27.83**	**941**

III. ರಾಜ್ಯವಲಯ ಕಾರ್ಯಕ್ರಮಗಳು (ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಗುರಿ		ಸಾಧನೆ	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1)	ಒಳನಾಡು ಮೀನುಗಾರಿಕೆಗೆ ನೆರವು	1.85	12	1.85	12
2)	ಸಲಕರಣೆ ಕಿಟ್ಟುಗಳ ಖರೀದಿಗೆ ಸಹಾಯಧನ (2405–00–110–0–02) (106)	4.40	44	4.40	44
3)	ಪ್ರದರ್ಶನ ಮತ್ತು ತರಬೇತಿ (2405–00–109–0–01)	0.20	2	0.20	2
4)	ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ (2405–00–101–0–58)	142.35	08	142.35	08
	ಒಟ್ಟು	**148.80**	**66**	**148.80**	**66**

21. ಕೈಮಗ್ಗ ಮತ್ತು ಜವಳಿ ಇಲಾಖೆ

ಕೈಮಗ್ಗ ಮತ್ತು ಜವಳಿ ಇಲಾಖೆಯು ಜಿಲ್ಲೆಯ ಕೈಮಗ್ಗ, ವಿದ್ಯುತ್‌ಮಗ್ಗ ಹಾಗೂ ಸಿದ್ದಉಡುಪು ಘಟಕಗಳ ಸ್ಥಾಪನೆ/ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾ/ರಾಜ್ಯ/ಕೇಂದ್ರ ವಲಯದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಕಾರ್ಯನಿರ್ವಹಿಸುತ್ತಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 28,000ಕ್ಕೂ ಹೆಚ್ಚು ವಿದ್ಯುತ್‌ಮಗ್ಗಗಳು ಹಾಗೂ 180 ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿದೆ. ಹಾಗೂ ಜಿಲ್ಲೆಯಲ್ಲಿ 08 ಕೈಮಗ್ಗ ಹಾಗೂ 23 ವಿದ್ಯುತ್‌ಮಗ್ಗ ನೇಕಾರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದೆ. ಈ ಭಾಗದಲ್ಲಿ ಪ್ರಮುಖವಾಗಿ ಶುದ್ಧ ರೇಷ್ಮೆ ಸೀರೆ, ಪಾಲಿಯಸ್ಟರ್ ಸೀರೆ, ಡ್ರೆಸ್‌ಮೆಟೀರಿಯಲ್ಸ್, ಟವಲ್, ಬೆಡ್‌ಶೀಟ್, ಇತ್ಯಾದಿ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿದೆ.

2020–21ನೇ ಸಾಲಿಗೆ ಅನುಷ್ಠಾನ ಮಾಡಲಾದ ಜಿಲ್ಲಾ ವಲಯ ಕಾರ್ಯಕ್ರಮಗಳ ವಿವರ ಈ ರೀತಿ ಇದೆ.

1. ಕೈಮಗ್ಗ ಉದ್ದಿಮೆಗಳಿಗೆ ಸಹಾಯ: 2851–00–107–0–31.

ಈ ಯೋಜನೆಯಲ್ಲಿ ಒಟ್ಟು ರೂ.25.00ಲಕ್ಷ ಅನುದಾನ ನಿಗದಿಯಾಗಿರುತ್ತದೆ. ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಕೈಮಗ್ಗಗಳ ಆಧುನೀಕರಣ ಮತ್ತು ದುಡಿಮೆ ಬಂಡವಾಳ ಸಹಾಯಧನವಾಗಿ ವೆಚ್ಚಮಾಡಲಾಗಿದೆ.

ಅ) ಕೈಮಗ್ಗಗಳ ಆಧುನೀಕರಣ:–

2020–21 ನೇ ಸಾಲಿನಲ್ಲಿ ಕೈಮಗ್ಗ ನೇಕಾರರು ಹೊಂದಿರುವ ಹಳೆಯ ವಿಧಾನದ ಮಗ್ಗಗಳನ್ನು ಆಧುನೀಕರಿಸಲು ಅನುಕೂಲವಾಗುವಂತೆ ನೇಕಾರರ ಸಂಘಗಳ ಮೂಲಕ ಆಧುನೀಕರಣ ಸಾಧನೆಗಳಾದ ಡಾಬಿ, ಜಕಾರ್ಡ್, ಡೋಲಿ ಇತ್ಯಾದಿ ಉಪಕರಣಗಳನ್ನು ನೇಕಾರ ಸಂಘದ ಮೂಲಕ ಕೈಮಗ್ಗ ನೇಕಾರರಿಗೆ ಸಹಾಯಧನ ರೂಪದಲ್ಲಿ ನೀಡಲಾಗಿದೆ.

ಕ್ರ ಸಂ	ಸಹಕಾರ ಸಂಘದ ಹೆಸರು & ವಿಳಾಸ
1	ನೆಲವಾಗಿಲು ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನ ಮತ್ತು ಮಾರಾಟ ಸಹಕಾರ ಸಂಘ, ನೆಲವಾಗಿಲು, ಹೊಸಕೋಟೆ ತಾ॥
2	ಬಿನ್ನಮಂಗಲ ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ನಿ., ಬಿನ್ನಮಂಗಲ, ನೆಲಮಂಗಲ ತಾಲ್ಲೂಕು
3	ಹರಿಜನ ಗಿರಿಜನ ಕೈಮಗ್ಗ ನೇಕಾರರ ಉತ್ಪಾದನ ಮತ್ತು ಮಾರಾಟ ಸಹಕಾರ ಸಂಘ, ಗಾಂಧಿ ಗ್ರಾಮ, ನೆಲಮಂಗಲ ತಾ॥
4.	ಶ್ರೀ.ವಿಘ್ನೇಶ್ವರ ಕೈಮಗ್ಗ ನೇಕಾರ ಸಹಕಾರ ಸಂಘ, ವಿಶ್ವೇಶ್ವರಪುರ, ನೆಲಮಂಗಲ. ತಾ॥
5.	ಮಹಿಳಾ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಡಿ. ಕ್ರಾಸ್ ರಸ್ತೆ, ದೊಡ್ಡಬಳ್ಳಾಪುರ.
6.	ಜನಶ್ರೀ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಮಹಿಳಾ ನೇಕಾರರ ವಿವಿದೋದ್ದೇಶ ಸಹಕಾರ ಸಂಘ ನಿ., ಟ್ಯಾಂಕ್ ರಸ್ತೆ, ದೊಡ್ಡಬಳ್ಳಾಪುರ
7.	ಶ್ರೀ ಚೌಡೇಶ್ವರಿ ರೇಷ್ಮೆ ಕೈಮಗ್ಗ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ಮಾರುತಿ ನಗರ, ಶಿಡ್ಲಘಟ್ಟ ಕ್ರಾಸ್, ವಿಜಯಪುರ, ದೇವನಹಳ್ಳಿ ತಾ॥

–: ಘೋಷ್ವಾರೆ :–

2020–21ನೇ ಸಾಲಿನಲ್ಲಿ "ಕೈಮಗ್ಗ ಉದ್ದಿಮೆಗಳಿಗೆ ಸಹಾಯ" ಯೋಜನೆಯಡಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ/ಕಾರ್ಯಕ್ರಮ	ಸಾಮಾನ್ಯ		ಪ.ಜಾ/ಪ.ಪಂ		ಒಟ್ಟು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	**ಕೈಮಗ್ಗ ಉದ್ದಿಮೆಗಳಿಗೆ ಸಹಾಯ**						
	ಕೈಮಗ್ಗ ಆಧುನೀಕರಣ	06	20.50	03	4.50	09	25.00
	ಒಟ್ಟು	**06**	**20.50**	**03**	**4.50**	**9**	**25.00**

22. ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶೈಕ್ಷಣಿಕ, ತರಬೇತಿ ಮತ್ತು ಉದ್ಯೋಗ ಸಾಮಾಜಿಕ ಭದ್ರತೆ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ವಿಕಲಚೇತನರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣಗೊಳಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು.
- ಹಿರಿಯ ನಾಗರಿಕರಿಗೆ ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಆಶ್ರಯ ಹಾಗೂ ಅವರನ್ನು ನಿಂದಿಸುವ ಮತ್ತು ಅನುಚಿತ ಉಪಯೋಗ ಪಡೆದುಕೊಳ್ಳುವವರಿಂದ ರಕ್ಷಣೆ ಒದಗಿಸುವುದು, ಇನ್ನಿತರ ಅವಶ್ಯಕತೆಗಳನ್ನು ಪೂರೈಸಲು ಬೆಂಬಲವನ್ನು ನೀಡುವುದು.

ಪರಿಷೃತ 2016 ರ ಅಧಿನಿಯಮದ ಪ್ರಕಾರ ಅಂಗವಿಕಲತೆಯ ವಿಧಗಳು ಈ ಮುಂದಿನಂತಿವೆ

1. **ಎ) ದೈಹಿಕ ಅಂಗವಿಕಲತೆ**
   1. ಕುಷ್ಠರೋಗ ನಿವಾರಿತರು
   2. ಮೆದುಳಿನ ಪಾರ್ಶ್ವವಾಯು ಪೀಡಿತರು
   3. ಕುಬ್ಜತೆ
   4. ಮಸ್ಕುಲರ್ ಡಿಸ್ಟ್ರೋಫಿ
   5. ಆ್ಯಸಿಡ್ ದಾಳಿಗೋಳಗಾದವರು

   ಬಿ) ದೃಷ್ಟಿದೋಷ

   1. ಅಂಧತ್ವ
   2. ಮಂದದೃಷ್ಟಿ

   ಸಿ)ಶ್ರವಣದೋಷ

   1. ಕಿವುಡುತನ
